ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY DEBATES

ಬುಧವಾರ 13ನೇ ಆಗಸ್ಟ್ 1997ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಗ್ಗೆ 10.30 ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು : **(ಶ್ರೀ ಚಂದ್ರಶೇಖರ್ ಮಾಮನಿ)** ಅವರು ಪೀಠವನ್ನು ಅಲಂಕರಿಸಿದ್ದರು.

ಶಾಸನ ರಚನೆ ಕಾರ್ಯಕಲಾಪ

ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕ, 1997 (ಪರ್ಯಾಲೋಚನಾ ಪ್ರಸ್ತಾವ)

ಶ್ರೀ ಎಂ.ಪಿ. ಪ್ರಕಾಶ್ : (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, 1997ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪರ್ಯಾಲೋಚನಾ ಪ್ರಸ್ತಾವವನ್ನು ಮಂಡಿಸಲಾಯಿತು.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಇದಕ್ಕೆ ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ. ಮಾನ್ಯ ಸಚಿವರು ಬಿಲ್ ಅನ್ನು ಇಂಟ್ರಡ್ಯೂಸ್ ಮಾಡಿದ್ದಾರೆ ಈ ಬಿಲ್ ಅನ್ನು ಕಾನೂನು ರೀತಿಯಾಗಿ ಅಥವಾ ರೂಲ್ಸ್ ಪ್ರಕಾರ ಇಂಟ್ರಡ್ಯೂಸ್ ಮಾಡಿಲ್ಲ. ರೂಲ್ 78 ರಲ್ಲಿ ಯಾವುದೇ ಬಿಲ್ಲು ಸದನದಲ್ಲಿ ಇಂಟ್ರಡ್ಯೂಸ್ ಮಾಡಬೇಕಾದರೆ ಅದಕ್ಕೆ ಮೂರು ಅವಶ್ಯಕವಾದಂತಹ ಕ್ವಾಲಿಫಿಕೇಷನ್ ಇರಬೇಕು. ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಷನ್ ಅಂಡ್ ರೀಸನ್ಸ್ ಇರಬೇಕು. ಫೈನಾನ್ಷಿಯಲ್ ಮೆಮೊರ್‍ಯಾಂಡಮ್ ಟು ದಿ ಬಿಲ್ ಅದು ಇರಲೇಬೇಕು. ಏಕೆಂದರೆ, ಇದು ಅತ್ಯಂತ ಮಹತ್ವದ ಬಿಲ್ ಆದಕಾರಣ ಮತ್ತು ಹೊಸ ಜಿಲ್ಲೆಗಳನ್ನು ಇವರು ಮಾಡುತ್ತಿದ್ದಾರೆನ್ನುವ ಕಾರಣದಿಂದ ಸೆಕ್ಷನ್ 6 ರಲ್ಲಿ 'Transitary provision' ಇದರಲ್ಲಿ ಹೇಳಿದ್ದಾರೆ. "Notwithstanding anything contained in section 302 (A) of the principal Act, in case of the newly constituted districts of Bagalkote, Chamrajanagar, Davanagere, Gadag, Haveri, Koppal and Udupi the provisions of the said section shall be applicable with effect from the first day of April, 1998 and the existing Zilla Panchayats having jurisdiction over any area included in the said districts shall be deemed

to be Zilla Panchayats in respect of the areas so included and shall continue to exercise the powers and functions under the principal Act in respect of such areas till the said date, as if the new districts have not been constituted." ಈ ಪ್ರಾವಿಜನ್ ಇದರಲ್ಲಿ ಬಂದ ಕಾರಣ ಇವತ್ತು ಅನೇಕ ಹೊಸ ಜಿಲ್ಲೆ ಆಗತಕ್ಕಂಥಾದ್ದು ಇದೆ. ಅದೇ ರೀತಿಯಾಗಿ ಹೊಸ ತಾಲ್ಲೂಕುಗಳು ಅದೇ ರೀತಿಯಾಗಿ ಹೊಸ ಪಂಚಾಯತಿಗಳು ಆದಾಗ ಇದರಲ್ಲಿ ಫೈನಾನ್‌ಷಿಯಲ್ ಇನ್‌ವಾಲ್ವ್‌ಮೆಂಟ್ ಇರುತ್ತದೆ. ಹಣ ಬೇಕಾಗುತ್ತದೆ. ಪ್ರತಿಯೊಂದು ಜಿಲ್ಲೆಯಲ್ಲಿ ಸ್ಪೆಷಲ್ ಆಫೀಸರ್ ಹುದ್ದೆ ಕ್ರಿಯೇಟ್ ಮಾಡುವುದಕ್ಕೋಸ್ಕರ ಇಲ್ಲವೇ ಜಿಲ್ಲಾ ಪರಿಷತ್‌ಗಳ ಪರಿಸ್ಥಿತಿ ಏನು ಎಂದು ಅದನ್ನು ಸ್ಟಡಿ ಮಾಡುವುದಕ್ಕೆ ಡಿ.ಸಿ. ರ್‍ಯಾಂಕ್‌ಗಳ ಅಧಿಕಾರಿಗಳು ಪ್ರತಿ ಜಿಲ್ಲೆಗೆ ಹೋಗಿ ಅವರು ಅಭ್ಯಾಸ ಮಾಡುತ್ತಿದ್ದಾರೆ. ಈ ಬಿಲ್ ಇಂಟ್ರಡ್ಯೂಸ್ ಮಾಡಿದಾಗ ರೂಲ್ 78ರ ಪ್ರಕಾರ ಫೈನಾನ್‌ಷಿಯಲ್ ಮೆಮೋರ್‍ಯಾಂಡಮ್ ಟು ಬಿಲ್ಸ್ ಅಂಡ್ ಮನಿ ಕ್ಲಾಸಸ್ ಇದೆ. ರೂಲ್ 78 ಏನು ಹೇಳುತ್ತದೆ ಎಂದರೆ.

" A Bill involving expenditure shall be accompanied by a Financial Memorandum which shall invite particular attention to the clauses involving expenditure and shall also give an estimate of recurring and non-recurring expenditure involved in case the Bill is passed into law."

Now this Bill is going to be passed into law, after this. so, it means that the basic ingredient that there should be a financial memorandum, should have been stated here. ಅದು ಇದರಲ್ಲಿ ಇಲ್ಲವೇ ಇಲ್ಲ. ಇದರಲ್ಲಿ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ ಅಂಡ್ ರೀಸನ್ಸ್ ಇದೆಯೇ ಹೊರತಾಗಿ ಫೈನಾನ್‌ಷಿಯಲ್ ಮೆಮೋರ್‍ಯಾಂಡಮ್ ಇದರಲ್ಲಿ ಎಕ್ಸ್‌ಪ್ಲನೇಷನ್ ಇಲ್ಲ 8-9 ಜಿಲ್ಲೆಗಳಿಗೆ ಎಷ್ಟು ಖರ್ಚು ಬರುತ್ತದೆ ಎಂದು ಹೇಳಬೇಕು. ಮಾಡುತ್ತೇವೆಂದು ಹೇಳಿದ್ದೀರಿ ಅದರ ಸಲುವಾಗಿ ಅಮಾಲ್ಗಮೇಷನ್ ಆಫ್ ದಿ ಪಂಚಾಯತ್ ಅಂದರೆ ಕೂಡಿಸತಕ್ಕಂಥಾದ್ದು ಇದೆಲ್ಲ ಇದ್ದ ಮೇಲೆ ಎಕ್ಸ್‌ಪೆಂಡಿಚರ್ ಎಷ್ಟು ಅಂತಇಲ್ಲಿ ಕೊಟ್ಟಿಲ್ಲ ಆದರೆ ಎಕ್ಸ್‌ಪೆಂಡಿಚರ್ ಇದೆ. ಯಾವಾಗ ಎಕ್ಸ್‌ಪೆಂಡಿಚರ್ ಇದರಲ್ಲಿ ಇದೆ ಅಂದರೆ ಇದು ಡಿಫೆಕ್ಟೀವ್ ಬಿಲ್ ಆಗುತ್ತದೆ ಇದನ್ನು ವಿತಡ್ರಾ ಮಾಡಿಕೊಂಡು ಹೊಸದಾಗಿ ಇಂಟ್ರಡ್ಯೂಸ್ ಮಾಡಿ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಕ್ರಿಯಾಲೋಪ ಎತ್ತಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ವಿತ್ತೀಯವಾಗಿರುವಂತಹ ಹೇಳಿಕೆಯನ್ನು ಕೊಡಬೇಕಾದಂತಹ ಅಗತ್ಯ ಇಲ್ಲ. ಇದು ಮಧ್ಯಕಾಲೀನವಾಗಿರತಕ್ಕಂತಹ ಒಂದು ಅಧಿನಿಯಮವನ್ನು ಸೂಚಿಸಿದ್ದೇವೆ. ಯಾವುದೇ ರೀತಿಯಾದ ವೆಚ್ಚವನ್ನು ಭರಿಸಬೇಕಾದಂತಹ ಸಂದರ್ಭ ಇಲ್ಲಿ ಬರುವುದಿಲ್ಲ. ನಾವು ಇದರಲ್ಲಿ ಪ್ರಸ್ತಾಪ ಮಾಡಿರತಕ್ಕಂಥಾದ್ದು ಹೊಸ ಜಿಲ್ಲೆಗಳನ್ನು ನಾವು ನಾಳೆ 15 ನೇ ತಾರೀಖಿನ ನಂತರ ತಂದಾಗ ಅಥವಾ ಮುಂದಿನ ತಾರೀಖುಗಳಲ್ಲಿ ತಂದಂತಹ ಸಂದರ್ಭಗಳಲ್ಲಿ ನಾವು ಹಣಕಾಸಿನ ವರ್ಷದ ಅಂತ್ಯಭಾಗದಲ್ಲಿ ಕೂಡ ಆ ಜಿಲ್ಲೆಗಳು ಅಸ್ತಿತ್ವದಲ್ಲಿ ಇಲ್ಲವೇ ಎಂದು ಪರಿಗಣಿಸಿ ಹಳೆಯ

ಜಿಲ್ಲೆಗಳಲ್ಲೇ ಮುಂದುವರಿಯಬೇಕೆನ್ನುವ ಮಾತನ್ನು ಈ ಮಧ್ಯಕಾಲೀನವಾಗಿರುವಂತಹ ಒಂದು ನಿಯಮಾವಳಿಗಳಲ್ಲಿ ಪ್ರಸ್ತಾಪ ಮಾಡಿರುವುದರಿಂದ ಈ ವಿಧೇಯಕಕ್ಕೆ ನಾವು ತಿದ್ದುಪಡಿಯನ್ನು ತರುವುದರ ಮೂಲಕ ಯಾವುದೇ ವಿತ್ತೀಯವಾಗಿರತಕ್ಕಂತಹ ಪರಿಣಾಮ ಆಗುವುದಿಲ್ಲ. ಫೈನಾನ್ಷಿಯಲ್ ಸ್ಟೇಟ್‌ಮೆಂಟ್ ನಮ್ಮ ಬಿಸ್‌ನೆಸ್ ರೂಲ್ಸ್ 78 ರ ಕೆಳಗೆ ಕೊಡಬೇಕೆಂದು ತಾವೇನು ಆಕ್ಷೇಪಣೆ ಮಾಡಿದ್ದೀರಿ ಅದು ಸಾಧುವಾದಂತಹ ಆಕ್ಷೇಪಣೆ ಅಲ್ಲ. ಆದ್ದರಿಂದ, ಇದನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಮುಂದೆ ಎಂಟು ಹೊಸ ಜಿಲ್ಲೆಗಳನ್ನು ಮಾಡುತ್ತೇವೆ, ಅದಕ್ಕೆ ಎಕ್ಸ್‌ಪೆಂಡಿಚರ್ ಇಲ್ಲವೆಂದು ಹೇಳಿದ್ದೀರಿ. ಸ್ಪೆಸಿಫಿಕ್ ಆಗಿ ರೂಲ್ 78ರಲ್ಲಿ ಏನು ಹೇಳಿದ್ದಾರೆ ಎಂದರೆ. "(1)A Bill involving expenditure shall be accompanied by a financial memorandum which shall invite particular attention to the clauses involving expenditure and shall also give an estimate of the recurring and non-recuring expenditure involved in case the Bill is passed into law." This is the amendment Bill, Now it is going to be passed into law. ನ್ಯಾಚುರಲಿ ಯಾವಾಗ ನೀವು ಸೆಕ್ಷನ್ 310 (2) ಎ ರಲ್ಲಿ ಅಮೆಂಡ್‌ಮೆಂಟ್ ತಂದಿದ್ದೀರಿ ಇದರಲ್ಲಿ 8-9 ಜಿಲ್ಲೆಗಳು ಮಾತ್ರ ಮಾಡುತ್ತಿದ್ದೇವೆಂದು ಹೇಳುತ್ತಿದ್ದೀರಿ. ಇದರ ಸಂಬಂಧದಲ್ಲಿ ಏಪ್ರಿಲ್‌ನಲ್ಲಿ ತಾವು ಮಾಡಬೇಕಾದರೂ ಕೂಡ ಈಗಾಗಲೇ ಎಕ್ಸ್‌ಪೆಂಡಿಚರ್ ನಡೆದಿದೆ. ಯಾವ್ಯಾವ ತಾಲ್ಲೂಕುಗಳನ್ನು ಯಾವ್ಯಾವ ಕಡೆಗಳಲ್ಲಿ ಸೇರಿಸಬೇಕೆನ್ನುವುದರ ಬಗ್ಗೆ ಅಧಿಕಾರಿಗಳು, ಸ್ಪೆಷಲ್ ಆಫೀಸರ್‌ಗಳು ಇಲ್ಲಿ ಕೆಲಸ ಮಾಡುತ್ತಿದ್ದಾರೆ. ಅದಾದ ಮೇಲೆ ಈ 8 ಜಿಲ್ಲೆಗಳಿಗೇನು ಖರ್ಚು ಬರಬಹುದೆಂದು ಇಲ್ಲಿ ಹೇಳಬೇಕಾಗುತ್ತದೆ. ಅಮೆಂಡ್‌ಮೆಂಟ್ ಬಂದ ಮೇಲೆ ಸ್ಪಷ್ಟವಾದಂಥಾದ್ದು ಇದರಲ್ಲಿ ಇದ್ದರೂ ಕೂಡ ಇಲ್ಲವೆಂದು ನೀವು ಹೇಳಿದರೆ ಅಷ್ಟೊಂದು ಸರಿಯಾಗುವುದಿಲ್ಲ. 78 ರೂಲ್‌ನಲ್ಲಿ ಕ್ಲಾಸಸ್ "(2) Clauses or provisions in Bills involing expenditure from public funds shall be printed in thick type. ಅದು ಬೇರೆ. ಯಾವ ರೀತಿಯಾಗಿ ಪ್ರಿಂಟ್ ಮಾಡಿಕೊಡಬೇಕು ಅದನ್ನು ಹೇಳಬೇಕು. ರೂಲ್ಸ್‌ನಲ್ಲಿ ಇದು ಇದ್ದಾಗಲೂ ಕೂಡ ಅಮೆಂಡ್‌ಮೆಂಟಿನಲ್ಲಿ ನೀವೇ ಇದನ್ನು ಸ್ಪಷ್ಟವಾಗಿ ಇಷ್ಟು ಜಿಲ್ಲೆಗಳನ್ನು ಕ್ರಿಯೇಟ್ ಮಾಡುತ್ತೇವೆಂದರೆ ಅಷ್ಟು ಸಿ.ಇ.ಓ.ಗಳು, ಎಕ್ಸಿಕ್ಯುಟೀವ್ ಇಂಜಿನಿಯರ್‌ಗಳು, ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್‌ಗಳು ಸಬ್ ಡಿವಿಜನ್‌ನಲ್ಲಿ ಹಾಗೂ ಉಳಿದಂಥ ಅಧಿಕಾರಿಗಳು ಜಿಲ್ಲಾ ಅಧಿಕಾರಿಗಳು ಇಲ್ಲಿ ಬರುತ್ತಾರೆ. ಅಂದರೆ ಕೋಟಿಗಟ್ಟಲೆ ಹಣವನ್ನು ನಾವು ಖರ್ಚು ಮಾಡಬೇಕಾಗುತ್ತದೆ. ಅದನ್ನು ಇದರಲ್ಲಿ ತೋರಿಸಿಲ್ಲ. 8-9 ಜಿಲ್ಲೆಗಳಿಗೆ ಏನು ಖರ್ಚು ಬರುತ್ತದೆ ಆ ಅಂದಾಜು ಖರ್ಚನ್ನು ಇದರಲ್ಲಿ ತೋರಿಸಿಲ್ಲ, ಅಂದಾಗ ಕಾನೂನು ರೀತಿಯಿಂದ ಇದು ಹೇಗೆ ಸರಿ ಇದೆ ಎಂದು ನನಗೆ ತಿಳಿಯುತ್ತಿಲ್ಲ. ಇದು ಸರಿ ಇದೆ ಎಂದು ತಾವು ರೂಲಿಂಗ್ ಕೊಡಿ ನಾನು ಒಪ್ಪುತ್ತೇನೆ. ಆದರೆ ನನ್ನ ದೃಷ್ಟಿಯಿಂದ ಇದು ಕಾನೂನಿಗೆ ವಿರುದ್ಧವಾಗಿದೆ. ನಮಗೆ ಕೊಟ್ಟಂತಹ ರೂಲ್ಸ್‌ಗೆ ವಿರುದ್ಧವಾಗಿದೆ ನೀವು ಕೊಟ್ಟಂತಹ ಅಮೆಂಡ್‌ಮೆಂಟ್‌ನಲ್ಲೇ ಸ್ಪಷ್ಟವಾಗಿ ಹೇಳಿದ್ದೀರಿ. ಎಷ್ಟು ಜಿಲ್ಲೆಗಳನ್ನು ಮಾಡುತ್ತೀರಿ

ಅಮಾಲ್ಗಮೇಷನ್ ಯಾವ ರೀತಿಯಾಗಿ ಮಾಡುತ್ತೀರಿ, ಸದಸ್ಯರು ಯಾವ ರೀತಿಯಾಗಿ ಇರುತ್ತಾರೆ ಇದೆಲ್ಲ ಇದೆ.

ಶ್ರೀ ಎಂ.ಪಿ. ಪ್ರಕಾಶ್ : ಈ ಕ್ರಿಯಾಲೋಪ ಸೀಮಿತವಾದಂತಹ ಸ್ವರೂಪವನ್ನು ಪಡೆದಿರತಕ್ಕಂಥಾದ್ದು. ಹಣಕಾಸಿನ ವೆಚ್ಚವಾದಂತಹ ಸಂದರ್ಭಗಳಲ್ಲಿ ಅದರ ವಿತ್ತೀಯವಾದ ಹಣಕಾಸಿನ ವಿಚಾರ ಬಂದಾಗ ಆವರ್ತಕವಾದಂಥಾದ್ದು ಅಂದರೆ ನಾನ್ ರೆಕರಿಂಗ್ ಆದಂಥಾದ್ದರ ಬಗ್ಗೆ ಇರುವುದನ್ನು ತಿಳಿಸಬೇಕೆಂದು ತಾವು ಹೇಳಿದ್ದೀರಿ. ನಾವು ಹೊಸ ಜಿಲ್ಲೆಗಳನ್ನು ಸ್ಥಾಪನೆ ಮಾಡುವಂತಹ ವಿಷಯ ಈ ತಿದ್ದುಪಡಿಯಲ್ಲಿ ಇಲ್ಲ. ಹೊಸ ಜಿಲ್ಲೆಗಳಾಗಬೇಕು ಎಂದು ಬರತಕ್ಕಂಥಾದ್ದು ಏಪ್ರಿಲ್‌ನ ನಂತರ ಬರುತ್ತದೆ. ಈಗ ಯಾವುದೇ ಹಣಕಾಸಿನ ವ್ಯಯ ಇಲ್ಲಿ ಬರುವುದೇ ಇಲ್ಲ. ಯಾವುದೇ ಹಣಕಾಸನ್ನು ನಾವು ಖರ್ಚು ಮಾಡುವುದಿಲ್ಲ ಎಂದು ಅದಕ್ಕಾಗಿ ಮತ್ತೆ ಫೈನಾನ್ಸಿಯಲ್ ಸ್ಟೇಟ್‌ಮೆಂಟ್ ಕೊಡಬೇಕಾದ ಅಗತ್ಯ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬಿಲ್ ಇಂಟ್ರಡ್ಯೂಸ್ ಮಾಡಿದಾಗ ಕೊಡಲೇ ಬೇಕಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ : ಯಾವುದೇ ಖರ್ಚು ಮಾಡದೇ ಖರ್ಚಿನ ಹೇಳಿಕೆಯನ್ನು ಕೊಡಿ ಎಂದರೆ ಹೇಗೆ? ಇದೊಂದು ರೀತಿಯ ವಿತಂಡವಾದದ ಆರ್ಗ್ಯುಮೆಂಟ್ ಅಥವಾ ಪೆರಿಷಸ್ ಆರ್ಗ್ಯುಮೆಂಟ್ ಎಂದು ಹೇಳಬಹುದು. ಇಲ್ಲಿ ಯಾವುದೇ ತರವಾಗಿರತಕ್ಕಂತಹ ಹಣಕಾಸಿನ ಖರ್ಚು ಇಲ್ಲದೇ ಇರುವುದರಿಂದ ಅದನ್ನು ಕೊಟ್ಟೇ ತೀರಬೇಕೆನ್ನುವುದಾಗಿದ್ದರೆ ಇದೊಂದು ಪೆರಿಷಸ್ ಆರ್ಗ್ಯುಮೆಂಟ್ ಆಗುತ್ತದೆ. ಯಾರೋ ಹೇಳುತ್ತಿದ್ದರಂತೆ 'Hen comes out of egg. Egg comes out of hen. Therefore, egg comes out of egg. ಎಂದು. ಆ ರೀತಿಯಾಗಬೇಕಾಗಿರುವುದು ಅಲ್ಲ. ಯಾವುದಾದರೂ ವಿತ್ತೀಯವಾಗಿರತಕ್ಕಂತಹ ವೆಚ್ಚವನ್ನು ಮಾಡುವುದಾಗಿದ್ದರೆ ಆ ವಿತ್ತೀಯ ವೆಚ್ಚಕ್ಕೆ ನಾವು ಒಂದು ಹೇಳಿಕೆಯನ್ನು ಕೊಡ ಬೇಕಾಗಿರತಕ್ಕಂಥಾದ್ದು ಸಹಜವೂ ಕೂಡ ಆಗಿದೆ. 78ನೇ ವಿಧಿಯಲ್ಲಿ ಕೂಡ ಸಂಬಂಧಿಸಿದಂಥಾದ್ದು ಹೊಸ ಜಿಲ್ಲಾ ಪಂಚಾಯತಿಗಳನ್ನು ನಾವು ಸೃಷ್ಟಿ ಮಾಡುವುದಿಲ್ಲ ಇರುವಂತಹ ಜಿಲ್ಲಾ ಪಂಚಾಯತಿಗಳೇ 31-3-98 ರವರೆಗೆ ಮುಂದುವರಿಯುತ್ತವೆ. ಅದಕ್ಕೆ ಬೇಕಾಗಿರುವಂತಹ ಮಧ್ಯಕಾಲಿಕವಾಗಿರತಕ್ಕಂತಹ ಒಂದು ವಿಚಾರವನ್ನು ನಾವು ಇಲ್ಲಿ ಪ್ರಸ್ತಾಪ ಮಾಡಿದ್ದೇವೆ. ಬೇರೆ ಬೇರೆ ಅಧಿಕಾರಿಗಳನ್ನು ಇಲ್ಲಿ ಹಾಕುತ್ತಾರೆ ಅದಕ್ಕಾಗಿ ಖರ್ಚು ಬರುತ್ತದೆಂದು ಇವರು ಹೇಳುತ್ತಿದ್ದಾರೆ. ಆ ವಿಚಾರಗಳು ಇಲ್ಲಿ ಬರುವುದಿಲ್ಲ. ಜಿಲ್ಲಾ ಪಂಚಾಯತಿ ಒಳಗೆ ಇರುವಂತಹ ವ್ಯಾಪ್ತಿಯಲ್ಲಿ ನಾವು ಈಗಾಗಲೇ ಕೊಟ್ಟಿರುವ ಹಣಕಾಸಿನ ರೀತಿಯಲ್ಲಿ ಅದನ್ನು ಮಾಡುವುದರಿಂದ ಹೊಸದಾಗಿ ಒಂದು ನಯಾಪೈಸೆ ಖರ್ಚು ಕೂಡ ಇದರಿಂದ ಬರುವುದಿಲ್ಲ. ಅವರ ಕ್ರಿಯಾಲೋಪವನ್ನು ತಳ್ಳಿಹಾಕಿ ವಿಧೇಯವನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಕೊಟ್ಟಿದ್ದೇ ಅವರು ಓದಿರಬಹುದೆಂದು ನಾನು ತಿಳಿದಿದ್ದೇನೆ. ಇದು ಅಷ್ಟಕ್ಕೇ ಸೀಮಿತವಾಗಿಲ್ಲ. 'Effect of amalgamation of Panchayat Areas' ಅಲ್ಲಿ ಬಂದಾಗ ಕೂಡ ಯಾವ್ಯಾವ ಏರಿಯಾದಿಂದ ಸದಸ್ಯರು ಬೈಫರ್‌ಕೇಷನ್ ಆದಾಗ ಟ್ರಾನ್ಸ್‌ಫರ್ ಆಗುತ್ತಾರೋ ಅಥವಾ ಬೇರೆ ಪಂಚಾಯತಿಗೆ ಹೋಗುತ್ತಾರೋ ಅವರ ಪೀರಿಯಡ್

ಅನ್ನು ಫಿಕ್ಸ್ ಮಾಡಿ 6 ತಿಂಗಳವರೆಗೆ ಒಂದು ಸಮಿತಿಯಲ್ಲಿ ಇರಬಹುದು 6 ತಿಂಗಳಾದ ಮೇಲೆ ಚುನಾವಣೆ ಮಾಡಬಹುದೆಂದು ಅಂದಾಗ ಇನ್ನೊಂದು ಪಂಚಾಯತಿ ಮತ್ತೊಂದು ಪಂಚಾಯತಿಯಲ್ಲಿ ಅಮಾಲ್ಗಮೇಟ್ ಆಗಬೇಕಾದರೆ ಅವರ ಟಿ.ಎ.ಡಿ.ಎ. ಪ್ರಶ್ನೆ ಆಮೇಲೆ ಎಲೆಕ್ಷನ್ ಎಕ್ಸ್‌ಪೆಂಡಿಚರ್ ಪ್ರಶ್ನೆ ಬರುತ್ತದೆ. ನೀವು ಏನೂ ಇಲ್ಲ ಎಂದರೆ ಹತ್ತು ಪೈಸವೇ ಇರಬಹುದು. Within six months you are going to conduct election. ನೀವು ಇಲ್ಲ ಎಂದರೆ ಹೇಗೆ? ಇದರಲ್ಲಿ ನೋಡಿ. When you are going to conduct elections within six months. ಏಪ್ರಿಲ್‌ನಲ್ಲಿ ನಾವು ಮಾಡುತ್ತೇವೆ ಎಂದಾಗ ಆರು ತಿಂಗಳು ಯಾವಾಗ ಆಗುತ್ತದೆ? ನೀವು ಆಮೇಲೆ ಹೇಳಿ.

ಶ್ರೀ ಎಂ.ಪಿ. ಪ್ರಕಾಶ್ : ಕ್ರಿಯಾಲೋಪ ಎತ್ತಿರುವುದಕ್ಕೆ ಸೀಮಿತಗೊಳಿಸಿಕೊಳ್ಳಿ. ಬೇರೆ ಬೇರೆ ವಿಷಯಗಳನ್ನು ತಾವು ಸೇರಿಸಬೇಡಿ. ಅಮಾಲ್ಗಮೇಷನ್ ಕ್ಲಾಸ್‌ಗೂ ಇದಕ್ಕೂ ಏನೂ ಸಂಬಂಧವಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಏತಕ್ಕೆ ಸಂಬಂಧ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಈಗ ಅದನ್ನು ಹೇಳುತ್ತೇನೆ.

SRI. M. MALLIKARJUNA KHARGE : This is the Bill which you have introduced. You have said that you are going to conduct elections within six months. When you are going to conduct elections. Expenditure will incur, when the expenditure will incur means, you have to provide the Financial Memorandum.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಉಪಾಧ್ಯಕ್ಷರೇ, ಈ ಅಮಾಲ್ಗಮೇಷನ್‌ಗೆ ಸಂಬಂಧಿಸಿರುವ ವಿಧಿನಿಯಮ 117ರದು ಏನು ಇದೆ, ಅದರಲ್ಲಿ ಬಂದಿರುವುದು ಒಂದೇ ವಿಷಯ 117ರಲ್ಲಿ ಕಾಣಿಸಿರುವುದರಲ್ಲಿ ಒಂದು ರೀತಿಯಾಗಿ ಭೌಗೋಳಿಕ ಪರಿಸರದ ವ್ಯತ್ಯಾಸವಾಗಿ ಒಂದರಲ್ಲಿ ಒಂದು ಸೇರಿರುವ ಗ್ರಾಮ ಪಂಚಾಯಿತಿಗಳಾಗಿ ಪರಿವರ್ತನೆ ಗೊಂಡಂಥ ಸಮಯದಲ್ಲಿ ಈಗ ಇರುವ ಕಾನೂನಿನಲ್ಲಿ ಆಡಳಿತಾಧಿಕಾರಿಗಳನ್ನು ನೇಮಕ ಮಾಡಬೇಕೆನ್ನುವಂಥದ್ದು ಇದೆ. ಈ ಆಡಳಿತಾಧಿಕಾರಿಯನ್ನು ನೇಮಕ ಮಾಡದೆ ಅಲ್ಲಿರುವ ಸದಸ್ಯರುಗಳನ್ನೇ ಸಾಧ್ಯವಾದಷ್ಟು ಮಟ್ಟಿಗೆ ಆ ಹೊಸ ಪಂಚಾಯಿತಿಗಳಲ್ಲಿ ಆಗಲಿ ಅಥವಾ ಕೂಡಲ್ಪಟ್ಟಿರುವ ಪಂಚಾಯಿತಿಯಲ್ಲಿ ಆಗಲಿ ನೇಮಕಾತಿ ಮಾಡಿ ಆರು ತಿಂಗಳೊಳಗಾಗಿ ಚುನಾವಣೆಗಳನ್ನು ಮಾಡಬೇಕೆನ್ನುವಂಥದ್ದನ್ನು ತಂದಿದ್ದೇವೆಯೇ ವಿನಃ ಇದು ಒಂದು ನಿಜವಾದ ಅರ್ಥದಲ್ಲಿ ಅಧಿಕಾರದ ವಿಕೇಂದ್ರೀಕರಣ. ಅದರದ್ದೇ ಈಗ ಇರುವ ಕಾನೂನಿನಲ್ಲಿ ಆಡಳಿತಾಧಿಕಾರಿಯನ್ನು ನೇಮಿಸಬೇಕು ಎನ್ನುವ ಮಾತು ಇದೆ. ಅದರಿಂದ ನಾನು ವಿವರಗಳನ್ನು ಹೇಳುವಂಥ ಸಂದರ್ಭದಲ್ಲಿ ಅದರ ಮುಖ್ಯ ಲಕ್ಷಣಗಳನ್ನು ನಾನು ತಮಗೆ ಅರಿಕೆ ಮಾಡಿಕೊಡುತ್ತೇನೆ. ಅದಕ್ಕೇನಾದರೂ ಮಾನ್ಯ ವಿರೋಧ ಪಕ್ಷದ ನಾಯಕರ ಆಕ್ಷೇಪಣೆಗಳು ಇದ್ದರೆ ಆ ಬಗ್ಗೆ ಮಾತನಾಡಬಹುದೇ ವಿನಃ ಇದು ಸಮ್ಮತವಾಗದಂಥ ಮತ್ತು ಅಸಿಂಧುವಾಗಿರುವ ಒಂದು ತರ್ಕ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತರ್ಕವಲ್ಲ. ತಮ್ಮ ಗಮನಕ್ಕೆ ನಾನು ತರುತ್ತೇನೆ.

(a) The Grama Panchayats of such Local area (hereinafater in this section referred to as the existing Grama Panchayats) shall cease to exist and all the members of such Grama Panchayats shall vacate office;

(b) The term of the interim Grama Panchayat so constituted shall be for such period, but not exceeding six months as the Deputy Commissioner shall by order specify" ಅಂದರೆ ಆರು ತಿಂಗಳೊಳಗಾಗಿ ನೀವು ಎಲೆಕ್ಷನ್ ಮಾಡಬೇಕಾಗುತ್ತದೆ. Before April you have to conduct elections. ಅದಕ್ಕಾಗಿ ನಾನು ಕೇಳುತ್ತೇನೆ, ಒಂದು ಕಡೆ you have to conduct elections. election expenditure is there ಮೆಂಬರ್ಸ್‌ದು ಟಿಎ ಡಿಎ ಪ್ರಶ್ನೆ ಇದೆ. ಆಮೇಲೆ ನಿಮ್ಮ ಉಳಿದ ಜಿಲ್ಲೆಗಳಿಗಂತೂ ನಮಗೆ ಅವರು ಹೇಳಿಬಿಟ್ಟರು, ಇದರಲ್ಲಿ ಬರುವುದಿಲ್ಲ, ಏಪ್ರಿಲ್ ಆದಮೇಲೆ ಬರುತ್ತದೆ ಎಂದು. ನೀವು ಯಾವ ವಾದವನ್ನು ತೆಗೆದುಕೊಂಡರೂ Even ten paise expenditure you have to explain. You have to show the expenditure.

ಉಪಾಧ್ಯಕ್ಷರು : ಅಧಿಕಾರಿಗಳು ಇದ್ದವರು, ಸದಸ್ಯರು ಇದ್ದವರು ಇಲ್ಲಿ ಟಿಎ ಡಿಎ ತೆಗೆದುಕೊಳ್ಳುವವರು ಅಲ್ಲಿ ತೆಗೆದುಕೊಳ್ಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಗುಲ್ಬರ್ಗದಿಂದ ಟಿಎ ಡಿಎ ತೆಗೆದುಕೊಳ್ಳುವುದಕ್ಕೆ ಬೆಂಗಳೂರಿನಿಂದ ತೆಗೆದುಕೊಳ್ಳುವುದಕ್ಕೆ there will be lot of expenditure expenditure you have to show ಆಮೇಲೆ ಇಂಟರಿಮ್ ಎಲೆಕ್ಷನ್ ಆಗುತ್ತದೆ. ಎಂದರೆ ಅರ್ಥವೇನು? ಆರು ತಿಂಗಳೊಳಗೆ ಎಲೆಕ್ಷನ್ ಎಕ್ಸ್‌ಪೆಂಡಿಚರ್ ಬರುತ್ತದೋ ಇಲ್ಲವೋ?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೇ, ನಾನು ವಿರೋಧ ಪಕ್ಷದ ನಾಯಕರಿಗೆ ವಿನಯದಿಂದ ನಾನು ಕೇಳಿಕೊಳ್ಳುವುದು ಇಷ್ಟೇ. ಈಗಾಗಲೇ ಚುನಾವಣೆಗೆ ವೆಚ್ಚವನ್ನು ಭರಿಸಲಿಕ್ಕೆ ಚುನಾವಣಾ ಆಯೋಗಕ್ಕೆ ಕೊಟ್ಟಿರುವ ಹಣಕಾಸಿನ ವ್ಯವಸ್ಥೆ ಇರುತ್ತದೆ. ಈಗ ಇರುವುದು ಒಂದು ಸಣ್ಣ ತಾಂತ್ರಿಕವಾಗಿರುವುದು ಮತ್ತು ಪರಿಣಾಮಕಾರಿಯಾದಂಥ ಅಧಿಕಾರ ವಿಕೇಂದ್ರೀಕರಣದ ಪ್ರಶ್ನೆ. ಮೂಲ ಕಾನೂನು ಕರ್ನಾಟಕ ಪಂಚಾಯತ್ ರಾಜ್ ಕಾನೂನು 1993ರ 117 ನೇ ವಿಧಿಯ 'ಎ' ಯಲ್ಲಿ ಏನು ಹೇಳುತ್ತಾರೆ. "The Grama Panchayats of such local areas shall cease to exist and all the members of such Grama Panchayats shall vacate office" 'ಬಿ' ಯಲ್ಲಿ ಏನು ಹೇಳುತ್ತಾರೆ. "All powers and duties of such Grama Panchayats Shall be exercised and performed by such person (hereinafter referred to as the administrator) as the deputy Commissioner appoints in this behalf"

(c) the unexpended balance of the Grama Panchayat Funds all the properties (including arrears of rate, taxes and fees) belonging to such Grama Panchyats and all rights and powers which prior to the specified date, Vested in such Grama Panchayats shall, subject to all charges and liabilities affecting the same, vest as the Grama Panchayat Fund" ಈ ತರಹದಲ್ಲಿ ಅದು ಬರುತ್ತದೆ. ಅದನ್ನು ನಾವು ಏನು ಮಾಡಿದ್ದೇವೆ, ಸ್ವಲ್ಪ ದಯಮಾಡಿ ತಾವು ಕೇಳಿ. ತಮ್ಮನ್ನು ನಾನು ಒಪ್ಪಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಇದರಲ್ಲಿ ನಾವು ಏನು ಹೇಳುತ್ತಿದ್ದೇವೆ ಎಂದರೆ ಎರಡನೆಯ ವಿಧಿಯಲ್ಲಿ

a) "The Grama Panchayats of such local area (hereinafter in this saction referred to as the existing Grama Panchayats) shall cease to exist and all the members of such Grama Panchayats shall Vacate office." 'ಬಿ' ಯಲ್ಲಿ ಏನು ಹೇಳುತ್ತಾರೆ.

b) "There shall be constituted for the amalgamated panchayat area a Grama Panchayat (hereinafter in this section referred to as Interim Gram Panchayat) Consisting of members nominated by the Deputy Commissioner and such members shall, as far as may be practicable be persons who are the members of our existing Grama Panchayats."

ಈ ಆರು ತಿಂಗಳೊಳಗಾಗಿ ಚುನಾವಣೆ ಮಾಡಬೇಕೆಂದರೆ ಚುನಾವಣೆ ಆಯೋಗಕ್ಕೆ ಈಗ ಕೊಟ್ಟಿರುವ ಹಣಕಾಸಿನ ವ್ಯವಸ್ಥೆ ಇದೆ. ಅದು ಬಂದಿರುವುದು ಹತ್ತೇ ಪೈಸೆ ಖರ್ಚು ಮಾಡತಕ್ಕಂಥಾದ್ದಾಗಲಿ, ಎಷ್ಟೇ ಹಣ ಖರ್ಚು ಮಾಡತಕ್ಕಂಥದ್ದಾದರೂ ಕೂಡ ಈ ಒಂದು ತಿದ್ದುಪಡಿಯನ್ನು ತರುವುದರ ಮೂಲಕವಾಗಿ ಹಣಕಾಸಿನ ಖರ್ಚು ಹೊಸದಾಗಿ ಹಾಕುವುದು ಏನೂ ಇಲ್ಲ. ಯಾವುದನ್ನು ತಾವು ಮಂಜೂರಾತಿ ಮಾಡಿ ನಮಗೆ ಕೊಟ್ಟಿದ್ದೀರಿ, ಆ ಸಂಚಿತ ನಿಧಿಯಿಂದಲೇ ಚುನಾವಣೆಗಳನ್ನು ನಡೆಸುತ್ತಾರೆ. ಮತ್ತೆ ಗ್ರಾಮ ಪಂಚಾಯಿತಿಗಳಿಗೆ ಕೊಡಬೇಕಾಗಿರುವ ಈ ಭತ್ಯೆ ಮೊದಲಾಗಿರುವ ಖರ್ಚುಗಳು ಎನ್ನುವಂಥ ಮಾತನ್ನು ಅವರೇನು ಹೇಳುತ್ತಾರೆ ಅದನ್ನು ಮಾನ್ಯ ವಿರೋಧ ಪಕ್ಷದ ನಾಯಕರೇ ತಾವು ತಪ್ಪಾಗಿ ಗ್ರಹಿಸಿದ್ದೀರಿ. ಆ ಗ್ರಾಮ ಪಂಚಾಯಿತಿಗಳಿಗೆ ಒಂದು ಲಕ್ಷ ರೂಪಾಯಿಗಳ ಅನುದಾನವನ್ನು ಕೊಡುತ್ತಿದ್ದೇನೆ. ಆ ಒಂದು ಲಕ್ಷ ರೂಪಾಯಿಗಳ ಅನುದಾನದಲ್ಲಿ ಬೇರೆ ಬೇರೆ ಖರ್ಚು ಮಾಡತಕ್ಕಂಥದ್ದು ಇದೆ. ಮತ್ತು ಅವರದೇ ಆಗಿರುವ ಸಂಪನ್ಮೂಲಗಳ ಕ್ರೋಢೀಕರಣ ಇದೆ. ಈಗ ಒಂದಾಗಿರುವಂಥ ಗ್ರಾಮ ಪಂಚಾಯಿತಿಗಳು ಅಥವಾ ವಿಭಜಿಸಲ್ಪಟ್ಟಿರುವ ಗ್ರಾಮಪಂಚಾಯಿತಿಗಳು ತಮ್ಮ ಕರ್ತವ್ಯವನ್ನು ನಿರ್ವಹಿಸುವಾಗ ನೀವು ಸಂಚಿತ ನಿಧಿಯಿಂದ ಈ ಸದನ ಏನು ಒಪ್ಪಿಗೆ ಕೊಟ್ಟಿದೆ , ಅದರ ಮೇಲೆ ಒಂದು ನಯಾಪೈಸೆ ಖರ್ಚಾಗತಕ್ಕಂಥದ್ದು ಇಲ್ಲ. ಆದ್ದರಿಂದ ನಾವು ವಿತ್ತೀಯವಾದ ಹೇಳಿಕೆಯನ್ನು ಇದರಲ್ಲಿ ಕೊಡಬೇಕಾದ ಅಗತ್ಯವಿಲ್ಲ. ದಯವಿಟ್ಟು

ಈಗಾಗಲೇ ಪರ್ಯಾಲೋಚನೆಗೆ ಈ ವಿಧೇಯಕವನ್ನು ತೆಗೆದುಕೊಂಡಿರುವುದರಿಂದ ನಾನು ಅದರ ಉದ್ದೇಶವನ್ನು ಹೇಳುವುದಕ್ಕೆ ತಾವು ಅವಕಾಶ ಕಲ್ಪಿಸಿಕೊಡಬೇಕು ಎಂದು ಹೇಳಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ಇದನ್ನು ಸ್ಪಷ್ಟವಾಗಿ ರೂಲ್ 78 ರಲ್ಲಿ ರೈಜ್ ಮಾಡಿ ತಮ್ಮ ಮುಂದೆ ಇಟ್ಟಿದ್ದೇನೆ. ಎಲೆಕ್ಷನ್ ಬಗ್ಗೆಯೂ ಹೇಳಿದ್ದೇನೆ. ಹೊಸ ಜಿಲ್ಲೆಯನ್ನು ಕಾನ್‌ಸ್ಟಿಟ್ಯೂಟ್ ಮಾಡುವುದಕ್ಕೆ ಸ್ಪೆಷಲ್ ಆಫೀಸರ್ ಕಳುಹಿಸಿ ಅದೂ ಸರ್ವೆ ಮಾಡುತ್ತಿದ್ದಾರೆ. ಈಗ ಏಪ್ರಿಲ್ ತಿಂಗಳಲ್ಲಿ ಅದು ಆಗಬೇಕೆಂದರೆ ನ್ಯಾಚುರಲಿ ಇದು ಜನವರಿ, ಫೆಬ್ರವರಿ, ಮಾರ್ಚಿಯಲ್ಲಿ ಈ ಪ್ರೋಸೆಸ್ ಸ್ಟಾರ್ಟ್ ಆಗುತ್ತದೆ. ಜಿಲ್ಲಾಧಿಕಾರಿಗಳು ಅಥವಾ ಅದರ ಬಗ್ಗೆ ಎಕ್ಸ್‌ಪೆಂಡಿಚರ್ ಎಲ್ಲಾ ಕೂಡ ಜಿಲ್ಲಾ ಪರಿಷತ್ತಿನಲ್ಲೂ ಕೂಡ ಬರುತ್ತದೆ. ಯಾವ ಯಾವ ಜಿಲ್ಲೆ ಮಾಡುತ್ತೇವೆ ಎಂದು ನಿಮ್ಮ ಅಮೆಂಡ್‌ಮೆಂಟ್‌ನಲ್ಲಿ ಕೊಟ್ಟಿದ್ದೀರಿ. "Notwithstanding anything contained in Section 302A of the Principal Act, in the case of the newly constituted districts of Bagalkot Chamarajanagar, Davanagere. Gadag...“ ಈ ಒಂದು ಬೋರ್ಡ್ ಬರೆಯುವುದಕ್ಕೆ ದುಡ್ಡು ಬೇಕಾದರೂ ನಿಮ್ಮ ಜಿಲ್ಲಾ ಪರಿಷತ್, ದಾವಣಗೆರೆ ಎಂದು ಹೇಳಿ ಬರೆಯಬೇಕಾದರೆ ದುಡ್ಡು ಬೇಕಾಗುತ್ತದೆ. ರೂಲ್ 78ರ ಪ್ರಕಾರ ಫೈನಾನ್ಸಿಯಲ್ ಮೆಮೊರಾಂಡಂ ಬಿಲ್ಲಿನ ಜೊತೆಗೆ ಬೇಕು. ಇಲ್ಲಾ, ಇದು ಬೇಕಾಗಿಲ್ಲ ಎಂದು ತಾವು ರೂಲಿಂಗ್‌ನ್ನು ಕೊಟ್ಟರೆ ನಾನು ಒಪ್ಪಿಕೊಳ್ಳುತ್ತೇನೆ. I have raised this point of order. It is valid. It is a defective Bill ಈ ರೀತಿಯಾಗಿ ಡಿಫೆಕ್ಟೀವ್ ಬಿಲ್‌ಗಳನ್ನು ಈ ಸದನದಲ್ಲಿ ಪ್ರಸ್ತಾಪ ಮಾಡುವುದು ಆಗಬಾರದು. ಅದಕ್ಕೆ ದಯವಿಟ್ಟು ಇದನ್ನು ವಾಪಸ್ ತೆಗೆದುಕೊಂಡು ಪ್ರಿಂಟ್ ಮಾಡಿ ಬೇಕಾದರೆ ಮಧ್ಯಾಹ್ನ ತಾವು ಹಂಚಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇದರಲ್ಲಿ ಹಣಕಾಸು ವೆಚ್ಚ ಇಲ್ಲ ಎನ್ನುವುದಾದರೆ ಇಲ್ಲಾ ಎಂದಾದರೂ ಅದರಲ್ಲಿ ತಿಳಿಸಿಬಿಡಬಹುದಲ್ಲ.

ಉಪಾಧ್ಯಕ್ಷರು : ಅದು ಇಲ್ಲ ಎಂದು ಹೇಳಿದ್ದಾರಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ವಿತಂಡವಾದವನ್ನು ತಾವು ಹೇಳುತ್ತಿದ್ದೀರಿ ;

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಉಪಾಧ್ಯಕ್ಷರೇ, ಬಿಲ್ಲನ್ನು ಕನ್‌ಸಿಡರೇಷನ್‌ಗ ತೆಗೆದುಕೊಳ್ಳುವುದಕ್ಕೆ ಬಂದಾಗ ಮಾಡುವುದಕ್ಕೆ ಬರುವುದಿಲ್ಲವೆಂದು ವಿರೋಧ ಪಕ್ಷದ ನಾಯಕರು ರೈಸ್ ಮಾಡಿದ್ದಾರೆ. 74ರಲ್ಲಿ ಕ್ಲಿಯರ್ ಆಗಿ ಹೇಳುತ್ತದೆ. ಬಿಲ್ ಇಂಟ್ರಡ್ಯೂಸ್ ಮಾಡಿದಾಗ ಬಿಲ್ ಸ್ಟೇಟ್‌ಮೆಂಟ್ ಬಗ್ಗೆ ಪ್ರಶ್ನೆ ಮಾಡಬೇಕೇ ವಿನಃ the Bill is already introducted in thi House. ಬಿಲ್ ಇಂಟ್ರಡ್ಯೂಸ್ ಆಗಿ ಕನ್‌ಸಿಡರೇಷನ್‌ಗೆ ತೆಗೆದುಕೊಂಡಾಗ ಬಿಲ್, ಸ್ಟೇಟ್‌ಮೆಂಟ ಬಗ್ಗೆ ಅಬ್ಜೆಕ್ಷನ್ ಮಾಡುವುದಕ್ಕೆ there is no provision under the rules ಅದರಿಂದ ಅವರ ಪಾಯಿಂಟ್ ಆಫ್ ಆರ್ಡರ್ totally you should reject.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ರಿಜೆಕ್ಟ್ ಮಾಡಿದರೆ ಮಾಡಿ. ರೂಲ್ 78 ರ ಪ್ರಕಾರ ಅವರು ಇಂಟ್ರಡ್ಯೂಸ್ ಮಾಡುವುದಕ್ಕೂ ಬರುವುದಿಲ್ಲ. ಯಾವುದೋ ಒಂದು ಡಿಫೆಕ್ಟೀವ್ ಆಕ್ಟ್ ಇದ್ದರೆ ನೀವೇನು ಪ್ರೊಸೀಜರ್ ರಾಂಗ್ ಇದೆ ಎಂದು ಹೇಳಿ ಹೇಗೆ ಸಮರ್ಥನೆ ಮಾಡಿಕೊಂಡಿರಿ?

Sri. K.N. Nage Gowda : You are exactly correct ಬಿಲ್ ಇಂಟ್ರಡ್ಯೂಸ್ ಮಾಡುವುದಕ್ಕೆ ಬರುವುದಿಲ್ಲ ಎಂದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರೂಲ್ 78ರ ಪ್ರಾಕಾರ ಇದನ್ನು ಇಂಟ್ರಡ್ಯೂಸ್ ಮಾಡಿದ್ದು ಕರೆಕ್ಟ್ ಇದೆ. ಈ ಬಿಲ್ಲನ್ನು ತೆಗೆದುಕೊಳ್ಳಬಹುದು. ಕಾನೂನು ಪ್ರಕಾರ ಇದು ಸಿಂಧು ಇದೆ, ಒಳ್ಳೆಯದು ಎಂದು ತಾವು ರೂಲಿಂಗ್ ಕೊಟ್ಟರೆ ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೇ, ಅವರು ಹೇಳಿರುವಂಥ ಕ್ರಿಯಾಲೋಪ ಏನು ಇದೆ, ಅದು ಪ್ರಾಯಶಃ ತಪ್ಪು ಗ್ರಹಿಕೆಯಿಂದ ಅಥವಾ ಅರ್ಥೈಸುವ ವಿಚಾರದಲ್ಲಿ ತಪ್ಪು ಗ್ರಹಿಕೆಯಿಂದ ಅವರು ಮಾಡಿರತಕ್ಕಂಥದ್ದು ಆಗಿದೆ. ಒಂದು ಸನ್ಮಾನ್ಯ ನಾಗೇಗೌಡರು ಎತ್ತಿರುವ ವಿಷಯ ಅವರು ಹೇಳಿರುವಂಥದ್ದು ಅದು ಅನದರ್ ಎಕ್ಸ್‌ಟ್ರೀಮ್ ಪಾಯಿಂಟ್. ಟೆಕ್ನಿಕಲಿ ಒಂದು ಸಾರಿ ಇಂಟ್ರಡ್ಯೂಸ್ ಆದಮೇಲೆ ಅದರ ಆಕ್ಷೇಪಣೆ ಮಾಡಬೇಕಾದ ಅಗತ್ಯವಿಲ್ಲ. ಪರ್ಯಾಲೋಚನೆಗೆ ತೆಗೆದುಕೊಳ್ಳಬಹುದು ಎಂದು ಹೇಳುತ್ತಾರೆ. ಆದರೆ ಅದರ ಕೆಳಗಡೆ ಏನೂ ಆಶ್ರಯವನ್ನು ಪಡೆಯುವುದಿಲ್ಲ. ಇಲ್ಲಿ ಯಾವುದೇ ತರಹವಾಗಿರುವ ಹಣಕಾಸಿನ ಖರ್ಚು ಇದರಲ್ಲಿ ಆಗುವುದಿಲ್ಲದೇ ಇರುವುದರಿಂದ ಅವರು ಹೇಳಿದಂತೆ ಒಂದು ಬೋರ್ಡ್ ಬರೆಯುವುದಕ್ಕಾದರೂ ಹಣ ಬೇಕಾಗುತ್ತದೆ ಎಂದರೆ ಏಪ್ರಿಲ್ ತಿಂಗಳಲ್ಲಿ ಕಾನ್‌ಸ್ಟಿಟ್ಯೂಟ್ ಆಗುವ ಸಂದರ್ಭದಲ್ಲಿ ಆ ಹೊಸ ಜಿಲ್ಲೆಗಳಿಗೆ ಬೇಕಾಗಿರುವ ಪ್ರತ್ಯೇಕ ಹಣವನ್ನು ಈ ಸದನವೇ ಮಂಜೂರು ಮಾಡಿಕೊಡುತ್ತದೆ. ಅದಕ್ಕೆ ಬೇಕಾಗಿರುವಂಥ ವಿಧಿವಿಧಾನಗಳನ್ನು ನಾವು ಈಗಾಗಲೇ ಮಾಡಿರುತ್ತೇವೆ. ಆ ಮುಂಗಡಪತ್ರದಲ್ಲಿ ಅದಕ್ಕಾಗಿ ಸಂಪನ್ಮೂಲಗಳನ್ನು ಕಾದಿರಿಸಿರುತ್ತೇವೆ. ಆದ್ದರಿಂದ ಈ ಪ್ರಶ್ನೆ ಉದ್ಭವವಾಗುವುದಿಲ್ಲ. ದಯಮಾಡಿ ಆ ಕ್ರಿಯಾಲೋಪವನ್ನು ತಳ್ಳಿಹಾಕಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

ಉಪಾಧ್ಯಕ್ಷರು : ಸನ್ಮಾನ್ಯ ವಿರೋಧಪಕ್ಷದ ನಾಯಕರು ತಂದಂಥ ಕ್ರಿಯಾಲೋಪದ ಬಗ್ಗೆಯೂ ಕೇಳಿದ್ದೇನೆ. ಸನ್ಮಾನ್ಯ ಸಚಿವರು ಕೊಟ್ಟಿರುವ ಉತ್ತರದಿಂದ ಇದರಲ್ಲಿ ಆರ್ಥಿಕ ಹೊರೆ ಇಲ್ಲ ಎಂಬುದನ್ನು ಸ್ಪಷ್ಟಪಡಿಸಿರುವುದರಿಂದ ತಮ್ಮ ಕ್ರಿಯಾ ಲೋಪವನ್ನು ತಳ್ಳಿಹಾಕಲಾಗಿದೆ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ವಿಷಯವನ್ನು ಪರ್ಯಾಲೋಚಿಸುವ ಸಂದರ್ಭದಲ್ಲಿ 117ನೇ ವಿಚಾರದ ಬಗ್ಗೆ ತಂದಂಥ ವಿಧಿನಿಯಮಕ್ಕೆ ತಂದಿರುವ ತಿದ್ದುಪಡಿಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ. ಅಲ್ಲಿ ಆಡಳಿತಾಧಿಕಾರಿಗಳನ್ನು ನೇಮಕ ಮಾಡಬೇಕೆಂಬುದನ್ನು ತೆಗೆದುಹಾಕಿ ನಾವು 6 ತಿಂಗಳೊಳಗೆ ಚುನಾವಣೆಗಳನ್ನು ನಡೆಸತಕ್ಕಂಥದ್ದು ಮತ್ತು ಸಾಧ್ಯವಾದ ಮಟ್ಟಿಗೆ ಅಲ್ಲಿರುವ ಗ್ರಾಮ ಪಂಚಾಯಿತಿ ಸದಸ್ಯರನ್ನೇ ಸದಸ್ಯರನ್ನಾಗಿ ಮಾಡಬೇಕೆಂಬ

ವಿಚಾರವನ್ನು ಇದರಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದು ನಿಜವಾದಂಥ ವಿಕೇಂದ್ರೀಕರಣವನ್ನು ತರುವಂಥ ಹಾದಿಯಲ್ಲಿ ಮುಖ್ಯವಾಗಿರುವಂಥ ಒಂದು ಹೆಜ್ಜೆ. ಈ ದೃಷ್ಟಿಯಿಂದ ತಂದಿರುವಂಥ ಒಂದು ತಿದ್ದುಪಡಿಯಾಗಿದೆ. ಎರಡನೆಯದು ಸೆಕ್ಷನ್ 138ನೇ ವಿಚಾರದಲ್ಲಿ ತಂದಿರತಕ್ಕಂಥ ತಿದ್ದುಪಡಿಯಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಅವಧಿ 20 ತಿಂಗಳು ಎಂಬುದು ಈಗಾಗಲೇ ನಿರ್ಧರಿಸಲ್ಪಟ್ಟಿದೆ. ಆ ರೀತಿಯಾಗಿ ಶಾಸನಬದ್ಧವಾಗಿ ನಿರ್ಧರಿಸಿರತಕ್ಕಂಥದ್ದರ ಸಿಂಧುತ್ವವನ್ನು ಪ್ರಶ್ನೆ ಮಾಡಿ ಸುಪ್ರೀಂ ಕೋರ್ಟ್‌ಗೆ ಹೋದಾಗ ಸುಪ್ರೀಂ ಕೋರ್ಟ್‌ನವರು ಆ ರೀತಿಯಾಗಿ 20 ತಿಂಗಳ ಅವಧಿಯನ್ನು ಮಾಡಬಹುದಾಗಿರುವಂಥದ್ದು ಸರಿಯಾದಂಥ ಕ್ರಮ. ಅದಕ್ಕೆ ಶಾಸನಸಭೆಗೆ ಮತ್ತು ಸರ್ಕಾರಕ್ಕೆ ಅಧಿಕಾರ ಇದೆ ಎನ್ನುವ ತೀರ್ಪಿನ ಹಿನ್ನೆಲೆಯಲ್ಲಿ ಇದರಲ್ಲಿ ನಿರ್ದಿಷ್ಟವಾದಂಥ ಶಬ್ದಗಳು ಬಳಕೆಯಾಗಿಲ್ಲ ಎಂದು ಹಾಸನದ ಜಿಲ್ಲಾಪಂಚಾಯಿತಿ ಅಧ್ಯಕ್ಷರು ತೆಗೆದುಕೊಂಡು ಹೋದಂಥ ಒಂದು ರಿಟ್ ಅರ್ಜಿಯಲ್ಲಿ ಆ ವಿಚಾರವನ್ನು ಪ್ರಸ್ತಾಪ ಮಾಡಿದ್ದರಿಂದ ಇದರಲ್ಲಿ ನಿರ್ಧಿಷ್ಟತೆ ಬರಬೇಕೆಂಬ ಕಾರಣದಿಂದ ಈ ತಿದ್ದುಪಡಿಯನ್ನು ತಂದಿದ್ದೇವೆ. ಅಂದರೆ 20 ತಿಂಗಳ ಅವಧಿಯಲ್ಲಿ ಯಾವುದೇ ಸಂದರ್ಭದಲ್ಲಿ ಉಂಟಾಗಬಹುದಾದ ಆಕಸ್ಮಿಕ ಸ್ಥಾನಗಳು ಖಾಲಿಯಾದಂಥ ಸಂದರ್ಭದಲ್ಲಿ ಉಳಿದಿರತಕ್ಕಂಥ ಅವಧಿಗೆ ರಿಮೆಂಡರ್ ಪೀರಿಯಡ್ ಆಫ್ ದಿ ಟೆನ್ಯೂರ್ ಎನ್ನುವಂಥ ತಿದ್ದುಪಡಿಯನ್ನು ತಂದಿದ್ದೇವೆ ಅಷ್ಟೆ. ಅದರಲ್ಲಿ ನಿರ್ದಿಷ್ಟತೆಯನ್ನು ತರಬೇಕೆಂಬ ಉದ್ದೇಶದಿಂದ ಇದನ್ನು ತಂದಿದ್ದೇವೆ. ಅದೇ ರೀತಿಯಲ್ಲಿ 177ನೇ ತಿದ್ದುಪಡಿಯಲ್ಲಿ ಮಾಡಿದ್ದೇವೆ. ಸೆಕ್ಷನ್ 301 ಮತ್ತು 302ಎ ನಲ್ಲಿ ನಾವು ಈ ವಿಚಾರವನ್ನು ಹೊಸ ಜಿಲ್ಲಾ ಪಂಚಾಯತ್‌ಗಳಿದ್ದಾಗ ಏನೆಲ್ಲಾ ಇರಬೇಕು ಎನ್ನುವ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಸೆಕ್ಷನ್ 302ಎ ಯನ್ನು ಹೊಸದಾಗಿ ಇದರಲ್ಲಿ ತಂದಿರತಕ್ಕಂಥದನ್ನು ನಾವು ಈ ಜಿಲ್ಲಾ ಪಂಚಾಯ್ತಿಗಳ ಸ್ಥಾಪನೆಗೆ ಸಂಬಂಧಿಸಿದಂತೆ ತಂದಿದ್ದೇವೆ. ಇದರ ಜೊತೆಗೆ ಈ 7 ಟ್ರಾನ್ಸಿಸ್ಟರಿ ಪ್ರಾವಿಜನ್‌ಗಳನ್ನು ಏತಕ್ಕೆ ತಂದಿದ್ದೇವೆ ಎಂದರೆ ಹೊಸದಾಗಿ ಬರುವಂಥ ಬಾಗಲಕೋಟೆ, ಚಾಮರಾಜನಗರ, ದಾವಣಗೆರೆ, ಗದಗ, ಹಾವೇರಿ ಕೊಪ್ಪಳ ಮತ್ತು ಉಡುಪಿ ಈ ಜಿಲ್ಲೆಗಳು ಹೊಸದಾಗಿ ಅಸ್ತಿತ್ವಕ್ಕೆ ಬರುವಂಥ ಸಂದರ್ಭದಲ್ಲಿ ನಾವು ಬೇಗನೆ ಜಿಲ್ಲಾ ಪಂಚಾಯ್ತಿಗಳನ್ನು ಇದರ ಜೊತೆಜೊತೆಗೆ ಸ್ಥಾಪನೆ ಮಾಡಬೇಕೆಂದು ಬಯಸಿದೆವು. ಆದರೆ ಈಗ ನಮಗೆ ಜಿಲ್ಲಾಪಂಚಾಯತ್‌ಗಳಿಗೆ ಹಣವನ್ನು ಮಂಜೂರಾತಿ ಮಾಡವುದರ ಜೊತೆಗೆ 20 ಬೇರೆ ಬೇರೆ ಇಲಾಖೆಗಳ ಖರ್ಚುಮಾಡತಕ್ಕಂಥದ್ದು ಇದೆ. ಈ ರೀತಿ ಖರ್ಚು ಮಾಡುವುದನ್ನು ನೋಡುವಂಥ ಬೇರೆ ಬೇರೆ ಇಲಾಖೆಗಳ ಮುಖ್ಯಸ್ಥರುಗಳು ಕೂಡ ಈ ಜಿಲ್ಲಾಪಂಚಾಯತ್ ಅಧೀನದಲ್ಲಿ ಕೆಲಸ ಮಾಡುವಂಥವರಿದ್ದಾರೆ. ಅವರನ್ನು ನಾವು ವರ್ಗಾವಣೆ ಮಾಡತಕ್ಕಂಥದ್ದು ಆಗಲಿ ಅಥವಾ ಈಗ ಬಂದಿರುವ ಅಭಿವೃದ್ಧಿ ಕಾರ್ಯಗಳನ್ನು ಕಡೆಗಣಿಸಬೇಕಾದ ಸಂದರ್ಭ ಬರುತ್ತದೆ. ಇದರ ಜೊತೆಗೆ ಈಗಾಗಲೇ ನಾವು ಮಂಜೂರಾತಿ ಕೊಟ್ಟಿರುತಕ್ಕಂಥ ಅನೇಕ ಯೋಜನೆಗಳೇನಿವೆ ಅವುಗಳನ್ನು 2 ತಾಲ್ಲೂಕು, 3 ತಾಲ್ಲೂಕುಗಳ ಭೌಗೋಳಿಕ ವಿಸ್ತೀರ್ಣಕ್ಕೆ ಹಂಚಿರತಕ್ಕಂಥದ್ದಾಗಿದೆ. ಜಲಾನಯನ ಪ್ರದೇಶದ ಅಭಿವೃದ್ಧಿಗೆ ಸಂಬಂಧಿಸಿದ್ದು ಪ್ರಾಯಶಃ ಒಂದು ತಾಲ್ಲೂಕು, ಒಂದು ಜಿಲ್ಲೆಗೆ ಹೋದಾಗ ಮತ್ತೊಂದು ತಾಲ್ಲೂಕು ಮತ್ತೊಂದು ಜಿಲ್ಲೆಯಲ್ಲಿ ಇದ್ದಾಗ ಅದರ ಹಣ ಕೂಡ ಅದರಲ್ಲಿರುತ್ತದೆ. ಈ ಸನ್ನಿವೇಶ ಇರುವುದರಿಂದ ಇವೆಲ್ಲವುಗಳನ್ನೂ

ಸರಿಪಡಿಸಬೇಕಾಗಿರುವುದರಿಂದ ಸ್ವಲ್ಪ ದಿವಸಗಳ ಕಾಲಾವಧಿ ಬೇಕಾಗಿದೆ. ಅಧಿಕೃತವಾಗಿ ಆ ಜಿಲ್ಲೆಗಳು ಅಸ್ತಿತ್ವಕ್ಕೆ ಬಂದಿವೆ ಎನ್ನುವುದರ ಅಧಿಸೂಚನೆ ಬಂದಿರತಕ್ಕಂಥದ್ದು ಕೇವಲ ಒಂದು ತಿಂಗಳ ಇತ್ತೀಚಿನ ದಿನಗಳಲ್ಲಿ. ಈ ಒಂದು ತಿಂಗಳ ಇತ್ತೀಚಿನ ಅವಧಿಯಲ್ಲಿ ಈ ಎಲ್ಲಾ ವಿತ್ತೀಯವಾಗಿರುವಂಥ ವಿಚಾರಗಳನ್ನು ಹಂಚಿ ಹಾಕುವಂಥದ್ದಾಗಲಿ ಅಥವಾ ಅದಕ್ಕೆ ಬೇಕಾಗಿರುವಂಥ ಅಭಿವೃದ್ಧಿ ಕಾರ್ಯಗಳನ್ನು ಅಷ್ಟೇ ಬೇಗ ಮತ್ತು ಒತ್ತು ಕೊಟ್ಟು ಕೆಲಸ ನಿರ್ವಹಿಸುವಂಥದ್ದಾಗಲಿ, ಅದಕ್ಕೆ ಬೇಕಾಗಿರುವಂಥ ಅಧಿಕಾರಿ ವರ್ಗವನ್ನು ಸಿಬ್ಬಂದಿ ವರ್ಗವನ್ನು ನೇಮಕ ಮಾಡುವಂಥ ವಿಷಯವಾಗಲಿ ಈ ಒಂದು ತಿಂಗಳಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವ ಕಾರಣಕ್ಕಾಗಿ ಈ ಜಿಲ್ಲೆಗಳು ಈ ಕಾನೂನಿನ ದೃಷ್ಟಿಯಲ್ಲಿ ಅಸ್ತಿತ್ವಕ್ಕೆ ಬಂದಿವೆ ಎಂಬುದನ್ನು ಯೋಚನೆ ಮಾಡದೆ ಏಪ್ರಿಲ್ ಒಂದನೇ ತಾರೀಖಿನಿಂದ ಈ ಜಿಲ್ಲೆಗಳು ಅಸ್ತಿತ್ವಕ್ಕೆ ಬರುತ್ತವೆ ಎಂದು ಹೇಳಿದ್ದೇವೆ. ಕೆಲವರು ಯೋಚನೆ ಮಾಡಬಹುದು, ನೀವು ಭರವಸೆಯನ್ನೇ ಕೊಟ್ಟಿಲ್ಲ, ಜಿಲ್ಲಾ ಪಂಚಾಯ್ತಿಗಳು ಅಸ್ತಿತ್ವಕ್ಕೆ ಬರದೆ ಹೋಗಬಹುದು ಎನ್ನುವ ಮಾತು ಇರುವುದರಿಂದ ಈ ನಮ್ಮ ಮಧ್ಯಕಾಲೀನ ವಿಧೇಯಕದಲ್ಲಿ ಈ ಮಾತನ್ನು ಹೇಳಿದ್ದೇವೆ. ಇದು ದಿಂನಾಂಕ : 1.4.1998 ರಿಂದ ಈ ಜಿಲ್ಲೆಗಳು ಅಸ್ತಿತ್ವಕ್ಕೆ ಬರುತ್ತವೆ. ಆಗ ಜಿಲ್ಲಾ ಪಂಚಾಯ್ತಿಗಳೂ ಕೂಡ ಅಸ್ತಿತ್ವಕ್ಕೆ ಬಂದು ಈಗಿರುವಂಥ ಜಿಲ್ಲಾಪಂಚಾಯಿತಿಗಳು ಹೊರಗಡೆಗೆ ಹೋಗಿರತಕ್ಕಂಥ ತಾಲ್ಲೂಕುಗಳಲ್ಲಿದ್ದರೂ ಕೂಡ ತಮ್ಮ ಅಧಿಕಾರವನ್ನು ಚಲಾಯಿಸುತ್ತವೆ ಮತ್ತು ಆ ವ್ಯಾಪ್ತಿಗಳಿಗೆ ಬರುತ್ತವೆ ಎನ್ನುವಂಥ ಈ 3 ತಿದ್ದುಪಡಿಗಳನ್ನು ತಂದಿದ್ದೇವೆ. ಇದು ಬಹಳ ಅಗತ್ಯವಾಗಿರುವಂಥ ತಿದ್ದುಪಡಿಯಾಗಿರುವುದರಿಂದ ಸನ್ಮಾನ್ಯ ಉಪಾಧ್ಯಕ್ಷರ ಮೂಲಕವಾಗಿ ನಾನು ಸದನದ ಎಲ್ಲ ಮಾನ್ಯ ಸದಸ್ಯರುಗಳನ್ನು ವಿನಂತಿಸಿಕೊಳ್ಳುತ್ತೇನೆ, ದಯವಿಟ್ಟು ಅದಕ್ಕೆ ಒಪ್ಪಿಗೆಯನ್ನು ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಉಪಾಧ್ಯಕ್ಷರೆ, ಇವತ್ತು ಮಂಡಿಸಿದಂಥ ಈ ಕರ್ನಾಟಕ ಪಂಚಾಯತ್ ರಾಜ್ ಸೆಕೆಂಡ್ ಅಮೆಂಡ್‌ಮೆಂಟ್ ಬಿಲ್ - 1997 ಇದರಲ್ಲಿ ಈಗಾಗಲೇ ಮಾನ್ಯ ಮಂತ್ರಿಗಳು ಹೇಳಿದಂತೆ 3 ವಿಶೇಷ ತಿದ್ದುಪಡಿಗಳನ್ನು ಈ ಸದನದ ಮುಂದೆ ಮಂಡಿಸಿದ್ದಾರೆ. ಒಂದು ಅಮೆಂಡ್‌ಮೆಂಟ್ ಸೆಕ್ಷನ್ 138ಕ್ಕೆ ಇನ್ನೊಂದು ಅಮೆಂಡ್‌ಮೆಂಟ್ ಸಬ್ಸಿಟಿಟ್ಯುಷನ್ ಸೆಕ್ಷನ್ 117ಕ್ಕೆ ಮತ್ತು ಸಬ್ಸಿಟಿಟ್ಯುಷನ್ 302 ಇದಲ್ಲದೆ ಹೊಸದೊಂದನ್ನು ಕೂಡ ಇದರಲ್ಲಿ ಸೇರಿಸಿದ್ದಾರೆ. ಈಗಾಗಲೇ ಇದರ ಬಗ್ಗೆ ನಾನು ವಾದ ಮಾಡುತ್ತಿದ್ದೆ ಮತ್ತು ಅವರೂ ಕೂಡ ಹೇಳಿದರು ಮ್ಯಾಂಡಿಟರಿ ಪ್ರಾವಿಜನ್ ಎಂಬುದನ್ನೂ ಮಾಡಿಕೊಂಡಿದ್ದೇವೆ ಎಂದು. ಈ ರೀತಿ ಪ್ರತಿಯೊಂದು ಪಂಚಾಯತ್ ಆಗಲಿ, ತಾಲ್ಲೂಕು ಪಂಚಾಯತ್, ಜಿಲ್ಲಾಪರಿಷತ್‌ನಲ್ಲಿ ಒಂದು ಪ್ರಾವಿಜನ್ ಮಾಡಬೇಕು ಎನ್ನುವುದು ಒಂದು ಕಡೆ ಇದ್ದರೆ ಇನ್ನೊಂದು ಕಡೆ ಅಮಾಲ್ಗಮೇಷನ್ ಮಾಡತಕ್ಕಂಥದ್ದು. ಹೊಸ ಜಿಲ್ಲೆಗಳಾದರೆ ಅದಕ್ಕೂ ಕೂಡ ಅನುಕೂಲವಾಗಲಿ ಎನ್ನುವಂಥ ದೃಷ್ಟಿಯಿಂದ ಇದನ್ನು ತಂದಿದ್ದಾರೆ. ಇದರ ಬಗ್ಗೆ ಹೆಚ್ಚಿನ ನಮ್ಮ ಆಕ್ಷೇಪಣೆಗಳೇನೂ ಇಲ್ಲ. ಆದರೆ ನಮ್ಮ ಮುಖ್ಯ ಆಕ್ಷೇಪಣೆ ಎಂದರೆ ಅದನ್ನು ನೀವು ತಪ್ಪಿಹಾಕಿದ್ದೀರಿ. ಫೈನಾನ್ಸಿಯಲ್ ಮೆಮೋರೆಂಡಮ್ ಇಲ್ಲ ಎಂಬುದನ್ನು ಈಗಾಗಲೇ ಅವರೂ ಹೇಳಿದರು. ಜಿಲ್ಲಾ ಪರಿಷತ್ ಆಯಿತು ಎಂದು ಹೇಳಿದರೆ ಸುಮಾರು 20 ಇಲಾಖೆಗಳು ಇದರಲ್ಲಿ ಸೇರುತವೆ. ಅವರವರ ಇಲಾಖೆಯಲ್ಲಿ ಅವರು ಪ್ರಾವಿಜನ್ ಮಾಡಿಕೊಂಡು ಅವರು ಬರಬೇಕಾಗುತ್ತದೆ,

ಖರ್ಚು ಮಾಡಬೇಕಾಗುತ್ತದೆ ಎಂಬುದು ತಮಗೂ ಕೂಡ ಗೊತ್ತಿದೆ. ಅವರೂ ಸಹ ಹೇಳಿದರು. ಅಂದರೆ 20 ಇಲಾಖೆಗಳಿಂದ ಕೂಡಿದ ಒಂದು ಜಿಲ್ಲಾಪರಿಷತ್‌ಗೆ ವಾಸ್ತವವಾಗಿ ಖರ್ಚುಮಾಡಲೇ ಬೇಕಾಗುತ್ತದೆ. ಮತ್ತು ಈ ಪ್ರೋಸೆಸ್ಸನ್ನು ಏಪ್ರಿಲ್ ಒಂದಕ್ಕೆ ಹೊಸ ಜಿಲ್ಲೆ, ಹೊಸ ಜಿಲ್ಲಾಪರಿಷತ್ ಮಾಡಬೇಕು ಎಂದರೆ ಜನವರಿ, ಫೆಬ್ರವರಿ, ಮಾರ್ಚಿಯಲ್ಲಿ ಹಣ ಖರ್ಚು ಮಾಡದೆ ಸಡನ್ ಆಗಿ ಏಪ್ರಿಲ್ ತಿಂಗಳಿನಲ್ಲಿ ಯಾರೂ ಮಾಡವುದಿಲ್ಲ. ಅದಕ್ಕೆ ಮೊದಲೇ ತಯಾರಿ ಬೇಕಾಗುತ್ತದೆ. ಅಧ್ಯಕ್ಷರೆ ಒಂದು ಲಗ್ನ ಮಾಡಬೇಕೆಂದರೆ ಲಗ್ನದ ದಿವಸವೇ ಎಲ್ಲ ಹಣ ಖರ್ಚಾಗುವುದಿಲ್ಲ. ಅದರ ಹಿಂದಿನಿಂದಲೇ ಖರ್ಚುಮಾಡಿಕೊಂಡು ಬರುತ್ತಾರೆ. ಸುಮಾರು ಎರಡು ಮೂರು ತಿಂಗಳಿನಿಂದ ತಯಾರಿ ನಡೆಯುತ್ತದೆ. ಹಾಗೆ ಇದರಲ್ಲಿ ಕೂಡ ಹೊಸ ಜಿಲ್ಲೆಯಾಗಲಿ, ಜಿಲ್ಲಾಪರಿಷತ್ ಆಗಲಿ ಅದಕ್ಕೆ ಸಾಕಷ್ಟು ತಯಾರಿ ಮಾಡಬೇಕು. ಅದಕ್ಕೆ ಇದರಲ್ಲಿ ಎಕ್ಸ್‌ಪೆಂಡಿಚರ್ ಬರುತ್ತದೆ ಎಂದರೆ ಅವರು ಒಪ್ಪುತ್ತಿಲ್ಲ. ಪ್ರಕಾಶ್ ಅವರು ತಮ್ಮದೇ ಹಠ ಹಿಡಿದಿದ್ದಾರೆ, ಹಿಡಿಯಲಿ. ಅವರು ಇನ್ನೊಂದು ಸಲ ಇದರ ಬಗ್ಗೆ ಯೋಜನೆ ಮಾಡಿ ನೋಡಲಿ ಅದಕ್ಕೆ ಇದು ಡಿಫೆಕ್ಟೀವ್ ಬಿಲ್ ಆದರೆ ಇದನ್ನು ವಾಪಸ್ ತೆಗೆದುಕೊಳ್ಳಿ ಎಂದರೆ ಅವರು ಇಲ್ಲ ಇದು ಸರಿಯಾಗಿದೆ ಎನ್ನುತ್ತಾರೆ. ಆದರೆ ವಿಶೇಷವಾಗಿ ಇದೇ ಸಂದರ್ಭದಲ್ಲಿ ಏನಾಗಿದೆ ಎಂದರೆ ನಾನು ಇದಕ್ಕೆ ರಿಲವೆಂಟ್ ಇಲ್ಲದಿದ್ದರೂ ಕೂಡ ಇದನ್ನು ಹೇಳಬೇಕಾದ ಪರಿಸ್ಥಿತಿ ಏನೆಂದರೆ ಈ ಸಂದರ್ಭದಲ್ಲಿ ವಿಕೇಂದ್ರೀಕರಣದ ಹೆಸರಿನಲ್ಲಿ ಏನಾಗಿದೆ ಎಂದರೆ ಇವತ್ತು ನಾವೆಲ್ಲರೂ ಕೂಡ ಪಂಚಾಯತ್‌ರಾಜ್ ವ್ಯವಸ್ಥೆಗೆ ಬರುತ್ತೇವೆ. ಜಿಲ್ಲಾ ಪಂಚಾಯತ್ ಆಗಬೇಕು, ತಾಲ್ಲೂಕು ಪಂಚಾಯತ್ ಆಗಬೇಕು, ಪಂಚಾಯತ್ ಆಗಬೇಕು ಎಂಬುದರ ಬಗ್ಗೆ ನಿರ್ವಿವಾದ. ಇದು ಎಲ್ಲರೂ ಒಪ್ಪಿಕೊಂಡಿರುವಂಥದ್ದು. ನಮ್ಮ ಎಲ್ಲಾ ಸಾಮಾಜಿಕ ಕಾರ್ಯಕರ್ತರಿಂದ ಹಿಡಿದು ಲೆಜಿಸ್ಲೇಚರ್ ಪಾರ್ಲಿಮೆಂಟ್ ಸದಸ್ಯರು, ಈ ದೇಶದ ಪ್ರಧಾನ ಮಂತ್ರಿಗಳೂ ಸಹ ಪಂಚಾಯತ್ ರಾಜ್ಯದ ಬಗ್ಗೆ ಮಾತನಾಡಿದ್ದಾರೆ. ಆದರೆ ವಾಸ್ತವಿಕವಾಗಿ ಏನಾಗಿದೆ ಎಂದರೆ ಅದನ್ನು ಹೆಚ್ಚಿನ ರೀತಿಯಲ್ಲಿ ದುರುಪಯೋಗ ಮಾಡಿಕೊಳ್ಳತಕ್ಕಂಥ ಜನ ಇವತ್ತು ಹೋಗುತ್ತಿದ್ದಾರೆ.

11.00 ಎ. ಎಂ.

ಅದಕ್ಕೆ ಹೇಗೆ ಕಡಿವಾಣ ಹಾಕುವುದು? ಇದು ಏನೆಂದರೆ ಎಲ್ಲೋ ಕೆಲವು ಕಡೆ ಕರಪ್ಷನ್ ಇತ್ತು. ಜನ ಹಿಂದೆ ಮಾತನಾಡುತ್ತಿದ್ದರು. ಆದರೆ ಈಗ ಏನಾಗಿದೆ ಎಂದರೆ ನೇರವಾಗಿ ತಮ್ಮಿಂದ ಹೋಗತಕ್ಕದ್ದು. ಜಿಲ್ಲಾ ಪರಿಷತ್ತಿಗೆ ಹೋಗತಕ್ಕದ್ದು. ಸರ್ಕಾರದಿಂದ ಹೋಗತಕ್ಕಂಥ ಹಣ ಕೇಂದ್ರ ಸರ್ಕಾರದಿಂದ ಹೋಗತಕ್ಕ ಹಣ ನೇರವಾಗಿ ಮಿಸ್ ಯೂಸ್ ಆಗುತ್ತದೆ. ಇವತ್ತು ಪ್ರತಿ ಒಂದು ಆರ್ಡಿನರಿ ಪಂಚಾಯತಿ ಮೆಂಬರ್ ಏನು ಹೇಳುತ್ತಾನೆ ಅಂದರೆ ಒಂದು ಲಕ್ಷ ರೂಪಾಯಿ ಕೆಲಸ ಒಂದು ಊರಿಗೆ ಹೋದರೆ ಅಲ್ಲಿ ನಾಲ್ಕು ಜನ ಮೆಂಬರ್ ಇದ್ದರೆ ಪ್ರತಿ ಒಬ್ಬರೂ ಹತ್ತು ಸಾವಿರ, ಹದಿನೈದು ಸಾವಿರ, ಇಪ್ಪತ್ತು ಸಾವಿರ ರೂಪಾಯಿ ಕೆಲಸ ನನಗೆ ಕೊಡಿ, ನನಗೆ ಕೊಡಿ ಎಂದು ಕೇಳುತ್ತಾರೆ. ಅದು ಅವಶ್ಯ ಇದೆಯೋ ಇಲ್ಲವೋ ಎನ್ನುವುದನ್ನು ಅವರು ಹೇಳುವುದಿಲ್ಲ. ನಾಲ್ಕು ಮಂದಿ ಹಂಚಿಕೊಳ್ಳಬೇಕು. ಅದು ಪ್ರತಿ ಒಬ್ಬರಿಗೆ 25,25 ಸಾವಿರ ರೂಪಾಯಿ ಪಂಚಾಯತಿ

ಧ್ಯಕ್ಷರಾದವರು ಹಂಚಬೇಕು. ಸಪೋಸ್ ಅವನು ಮಾಡದೇ ಇದ್ದರೆ ನೋ ಕಾನ್‌ಫಿಡೆನ್ಸ್ ಮೋಷನ್ ರುವುದು ನಡೆಯುತ್ತದೆ. ಅವರು ಯಾವುದೇ ಪಾರ್ಟಿಯವರು ಇರಬಹುದು. ಆ ಪಾರ್ಟಿಯವರು ರಬಹುದು, ಈ ಪಾರ್ಟಿಯವರು ಇರಬಹುದು. ಆದರೆ ಪಾರ್ಟಿ ಬಂದರೆ ಪ್ರಶ್ನೆ ಇಲ್ಲ. ಯಾವುದೇ ರ್ಟಿ ಇರಬಹುದು. ಇವತ್ತು ಮೆಂಬರ್ಸ್ ಏನಾಗಿದ್ದಾರೆ ಎಂದರೆ ಬಾಟಮ್ ಲೆವೆಲ್‌ನಲ್ಲಿ ನಮಗೆ ಲ್ಲಿ ನ್ಯಾಯ ಸಿಗುತ್ತದೆ, ಇದರಿಂದ ಒಳ್ಳೆಯದಾಗುತ್ತದೆ ಎಂದು ಹೇಳಿ ಅಪೇಕ್ಷೆಪಟ್ಟು ಇವತ್ತು ೋಟ್ಯಾಂತರ ರೂಪಾಯಿ ನಾವೇನು ಹಳ್ಳಿಗಳಿಗೆ ಕಳಿಸುತ್ತಿದ್ದೇವೆ, ಅದರ ದುರುಪಯೋಗ ಇಷ್ಟೊಂದು ಗುತ್ತಿದೆ. ಸಾಮಾನ್ಯ ಒಂದು ರೋಡ್ ಮಾಡಬೇಕು ಎಂದರೂ ಕೂಡ ಒಂದು ಲಕ್ಷ ರೂಪಾಯಿ ಸ್ಟಿಮೇಟ್ ಇದ್ದರೆ ಇದರಲ್ಲಿ 25,30 ಸಾವಿರ ರೂಪಾಯಿ ಕೆಲಸ ಆಗುವುದು ಕಷ್ಟ. ಕೆಲವು ಕಡೆ ಂಬರ್ಸ್ ಜೂನಿಯರ್ ಇಂಜಿನಿಯರ್ಸ್‌ಗೆ ಹೊಡೆಯುತ್ತಾರೆ, ಈ ಬಿಲ್ ಮಾಡಿಕೊಡು, ನಾನು ಂಗಳೂರಿಗೆ ಹೋಗಬೇಕು. ಹತ್ತು ಸಾವಿರ ರೂಪಾಯಿ ಬಿಲ್ ರೆಕಾರ್ಡ್ ಮಾಡಿ ಕೊಟ್ಟು ಹೋಗು ಂದು ಹೇಳುತ್ತಾರೆ. ಹೀಗೆ ಎಷ್ಟು ಉದಾಹರಣೆಗಳು ಇವೆ. ನಾವು ನಿಮಗೆ ಕೂಡ ಹೇಳಿದೆ. ರ್ಚೇಸ್‌ನಲ್ಲಿ ಯಾವ ರೀತಿಯಾಗಿ ಎಕ್ಸಿಕ್ಯುಟೀವ್ ಇಂಜಿನಿಯರ್ಸ್ ಮಾಡುತ್ತಾರೆ. ಆದರೆ ಎಕ್ಸಿಕ್ಯುಟೀವ್ ಂಜಿನಿಯರ್‌ಗಾದರೂ ಸರಿ ಅನ್ಯಾಯವಾಗಿ ಪರ್ಚೇಸ್ ಮಾಡಿದಂತಹವರಿಗೆ ತಾವು ಸಸ್ಪೆಂಡ್ ಾಡಿ, ಅವರಿಗೆ ಮನೆಗೆ ಕಳಿಸಲಿಲ್ಲ. ನಾನು ಆಳಂದ್ ವಿಚಾರ ಹೇಳಿದೆ ಆದರೆ ಎನ್‌ಕ್ವೈರಿನೂ ರಲಿಲ್ಲ, ಮುಂದೆ ಏನು ಆಯಿತು ಎನ್ನುವುದನ್ನು ನಮಗೆ ಹೇಳಲಿಲ್ಲ. ನಾನು ಈ ಸದನದಲ್ಲಿ ವಿಚಾರ ತ್ತಿದೆ. ಅದು ಅಲ್ಲಿಗೇ ನಿಂತು ಹೋಯಿತು. ಇದು ಬೀದರ್ ಜಿಲ್ಲೆಯಲ್ಲಿ ನಡೆಯಿತು. ನಮ್ಮ ಾದ್‌ಗೀರ್ ಸಬ್ ಡಿವಿಜನ್‌ನಲ್ಲಿ ನಡೆಯಿತು. ಆಮೇಲೆ ಎಲ್ಲಾ ಕಡೆ ಇರಬಹುದು, ನಿಮ್ಮ ಕಡೆ ೂಡ ನಡೆದಿರಬಹುದು. ಮೊನ್ನೆ ಲಾಸ್ಟ್ ಟೈಮ್ ನಾರ್ತ್ ಕೆನರಾದಲ್ಲಿ, ಬೆಳಗಾಂನಲ್ಲಿ ಆಗಿದೆ. ಂದು ಕಡೆ ಅಲ್ಲ. ಈಗೇನು ಆಗಿದೆ ಎಂದರೆ ನಮ್ಮ ಉದ್ದೇಶ ಎಷ್ಟೇ ಒಳ್ಳೆಯದು ಇದ್ದರೂ ಕೂಡ ಮ್ಮ ಉದ್ದೇಶಕ್ಕೆ ತಕ್ಕಂತೆ ಕೆಲಸ ಮಾಡದೇ ಇರತಕ್ಕ ಜನ ಅಧಿಕಾರಕ್ಕೆ ಬಂದರೆ ಖಂಡಿತವಾಗಿ ಅದು ರ್ವನಾಶ ಆಗುತ್ತದೆ. ಮತ್ತು ನೂರಾರು ವರ್ಷದ ಇತಿಹಾಸ, ಸಾವಿರಾರು ವರ್ಷದ ಇತಿಹಾಸ, ಆ ತಿಹಾಸ ಹಳ್ಳಿಗಳಲ್ಲಿ ರಿಪೀಟ್ ಆಗತಕ್ಕ ಸಾಧ್ಯತೆ ಇದೆ. ಇದೇ ದುಡ್ಡು ತೆಗೆದುಕೊಳ್ಳುವುದು, ಅಲ್ಲಿ ಬ್ಬಾಳಿಕೆ ನಡೆಸುವುದು. ಏಕೆಂದರೆ ಪುಕ್ಕಸಟ್ಟೆ ದುಡ್ಡು ಸಿಗುತ್ತದೆ. ಕೆಲವು ಜನ ಗುಂಪು ಕಟ್ಟಿಕೊಳ್ಳುವುದು, ಈ ರೀತಿಯಾಗಿ ದಬ್ಬಾಳಿಕೆ ಮಾಡತಕ್ಕದ್ದು. ಅನ್ಯಾಯ ಮಾಡತಕ್ಕದ್ದು ಇನ್ನೂ ಕೂಡ ನಡೆದಿದೆ. ನ್ನತಕ್ಕದ್ದನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಇದು ಯಾವ ರೀತಿಯಾಗಿ ನೀವು ಮಾಡುತ್ತೀರಿ? ತ್ತು ಕೆಲವು ಕಡೆ ನ್ಯಾಚುರಲಿ 32 ಪರ್ಸೆಂಟ್ ಕೊಡಬೇಕು ಎಂದು ಎಲ್ಲರೂ ಹೇಳುತ್ತಾರೆ. 33 ರ್ಸೆಂಟ್ ಬಂದಿದ್ದು ಇಲ್ಲೇ ಅಲ್ಲ. ಕಾನ್‌ಸ್ಟಿಟ್ಯೂಷನಲ್ ಅಮೆಂಡ್‌ಮೆಂಟ್ ಆಗಿ ಅಮೆಂಡ್‌ಮೆಂಟ್ ಯಿತು. ಆದರೆ ಕೆಲವು ಕಡೆ ಏನಾಗಿದೆ ಎಂದರೆ ಆ ಹೆಣ್ಣುಮಗಳು ಹೋಗುವುದಿಲ್ಲ. ಆಕೆಯ ಗಂಡ ೋಗುವುದು. ಕರೆದುಕೊಂಡು ಹೋದರೂ ಈಕೆ ಕುರ್ಚಿ ಮೇಲೆ ಕುಳಿತರೆ ಆಕೆಯನ್ನು ನೆಲದ ೇಲೆ ಕೂರಿಸುವುದು. ಶೆಡ್ಯೂಲ್ಡ್ ಕಾಸ್ಟ್‌ನ ಅನೇಕ ಹೆಣ್ಣು ಮಕ್ಕಳು ಮೆಂಬರ್ಸ್ ಇದ್ದಾರೆ. ಅವರನ್ನು ೊರಗಡೆ ಕೂಡಿಸುವುದು, ಅವರ ಹೆಸರ ಮೇಲೆ ದುಡ್ಡು ತೆಗೆದುಕೊಳ್ಳುವುದು. ಅವರ ಹೆಸರ

ಮೇಲೆ ಕೆಲಸ ಅಲಾಟ್ ಮಾಡಿಕೊಳ್ಳುವುದು, ಇವರು ಕೆಲಸ ಮಾಡುವುದು. ಆಮೇಲೆ 10ಸಾವಿರವೋ, 20 ಸಾವಿರವೋ ಇರಬಹುದು, ಒಂದು ಡ್ರೈನೇಜ್ ಕೆಲಸ ಇದ್ದರೆ ಕೇವಲ ನಾಲ್ಕೈದು ಸಾವಿರ ಖರ್ಚು ಮಾಡುವುದು, ಹತ್ತು ಸಾವಿರ ಜೇಬಿಗೆ ಹಾಕಿಕೊಳ್ಳುವುದು. ಇಂತಹದ್ದು ನೂರಾರು, ಸಾವಿರಾರು ಇದೆ. ಅದನ್ನು ನೀವು ಹೇಗೆ ಸರಿಪಡಿಸುತ್ತೀರಿ? ಏಕೆಂದರೆ ನಾವು ಸ್ಟ್ರೀಮ್‌ಲೈನ್ ಮಾಡಬೇಕು ಎಂದರೆ ಕೋಟ್ಯಾಂತರ ರೂಪಾಯಿ ಹಳ್ಳಿಗಳಿಗೆ ಕೊಡತಕ್ಕ ಉದ್ದೇಶ ಏನು ಎಂದರೆ ಅವರ ಬೇಡಿಕೆ, ಅವರ ಅನಿಸಿಕೆ, ಅಲ್ಲಿಯ ವಾತಾವರಣ ಏನು ಇರುತ್ತದೆ. ಅದನ್ನು ನೋಡಿಕೊಂಡು ಈ ಕೆಲಸಗಳನ್ನು ಮಾಡುತ್ತಾರೆ ಎನ್ನತಕ್ಕ ಉದ್ದೇಶದಿಂದಲೇ ನಾವು ಈ ಅಧಿಕಾರವನ್ನು ಅವರಿಗೆ ವಹಿಸಿಕೊಟ್ಟಿದ್ದೇವೆ.

(ಮಾನ್ಯ ಅಧ್ಯಕ್ಷರಾದ ರಮೇಶ್ ಕುಮಾರ್, ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅಂದರೆ ಆ ಹಳ್ಳಿಯ ಪ್ರಗತಿ ಹೇಗೆ ಮಾಡಬೇಕು ಅಥವಾ ಡೆವಲಪ್ ಯಾವ ರೀತಿ ಮಾಡಬೇಕು ಎನ್ನುವುದರ ಬಗ್ಗೆ ಸಾಮಾನ್ಯ ಜ್ಞಾನ ಅವರಿಗೆ ಇರುತ್ತದೆ. ಈ ಹಣವನ್ನು ಆ ಪಂಚಾಯತಿಗೆ ಕೊಟ್ಟರೆ ಸರಿಯಾಗಿ ಉಪಯೋಗ ಮಾಡಿಕೊಳ್ಳುತ್ತಾರೆ, ಎನ್ನತಕ್ಕ ದೃಷ್ಟಿಯಿಂದ ಲಕ್ಷಾಂತರ ರೂಪಾಯಿ ಇವತ್ತು ಕೊಡುತ್ತಿದ್ದೇವೆ. ಆದರೆ ಕೆಲವು ಕಡೆ ಒಂದು ಬೋರ್‌ವೆಲ್ ರಿಪೇರಿ ಮಾಡಿಸಬೇಕಾದರೂ ಪಂಚಾಯತಿಯ ಅಧ್ಯಕ್ಷರಾಗಲೀ ಸದಸ್ಯರಾಗಲೀ ಗಮನ ಕೊಡವುದಿಲ್ಲ. ಕೊನೆಗೆ ಯಾರೋ ಎಂಎಲ್ಎ ಹೋದಾಗ ಅಥವಾ ಮಂತ್ರಿಗಳು ಹೋದಾಗ ಅಪ್ಲಿಕೇಶನ್ ಕೊಡುತ್ತಾರೆ, ನಮ್ಮ ಊರಿಗೆ ನೀರು ಇಲ್ಲ ನೋಡಿ ಎಂದು ಹೇಳುತ್ತಾರೆ. ಅಂದರೆ ಯಾವ ಕೆಲಸಕ್ಕಾಗಿ ಪಂಚಾಯತಿ ಮಾಡಿದ್ದೇವೆ. ಯಾವ ಕೆಲಸಕ್ಕಾಗಿ ನಾವು ತಾಲ್ಲೂಕಾ ಪಂಚಾಯತಿ ಮಾಡಿದ್ದೇರೆ? ಯಾವ ಕೆಲಸಕ್ಕಾಗಿ ನಾವು ಜಿಲ್ಲಾ ಪಂಚಾಯತಿ ಮಾಡಿದ್ದೇವೆ. ಎಂಎಲ್ಎಗಳು ಮಂತ್ರಿಗಳು ಹೋದರೆ ಅವರಿಗೆ ಮಾತ್ರ ತಗಲಿಸಿಬಿಟ್ಟು ಇದು ನಿಮ್ಮ ಕೆಲಸ ಎಂದು ಹೇಳುತ್ತಾರೆ. ಇಲ್ಲಪ್ಪ ಇದು ನಮ್ಮ ಕೆಲಸವಲ್ಲ ಈಗ ಹೊಸ ಕಾನೂನು ಪ್ರಕಾರ ನಮ್ಮ ಅಧಿಕಾರಗಳನ್ನು ಕಿತ್ತುಕೊಂಡಿದ್ದಾರೆ. ನಾವೇ ನಿಮಗೆ ಕೊಟ್ಟಿದ್ದೇವೆ. ದಯವಿಟ್ಟು ನೀರು ಕೊಡುವುದು, ಚರಂಡಿ ಮಾಡುವುದು ನಿಮ್ಮ ಕೆಲಸ, ನಿಮ್ಮ ಹಳ್ಳಿ ಸುಧಾರಣೆ ಮಾಡುವುದು ನಿಮ್ಮ ಕೆಲಸ ಇದೆ ಎಂದರೆ ನಿಮ್ಮ ಮಾತು ಕೇಳಿ ನಾವು ಓಟು ಕೊಟ್ಟಿದ್ದೇವೆ, ಏನು ಅವರ ಮಾತು ನಾವು ಕೇಳುತ್ತಿದ್ದೆವಾ? ಎಂದು ಹೇಳುತ್ತಾರೆ. ಈ ರೀತಿಯಿಂದ ಇವತ್ತು ಪಂಚಾಯತಿಗಳು ನಡೆದಿವೆ. ನ್ಯಾಚುರಲಿ 52ಸಾವಿರ ಹಳ್ಳಿಗಳಲ್ಲಿ ಈ ಪರಿಸ್ಥಿತಿ ಇದ್ದರೆ ನಾವು ಯಾವ ರೀತಿ ಸುಧಾರಣೆ ಮಾಡುವುದು? ಎನ್ನತಕ್ಕದ್ದನ್ನು ಕೂಡ ತಾವು ಚಿಂತನೆ ಮಾಡಬೇಕು. ಏಕೆಂದರೆ ತಾವು ಸಾಕಷ್ಟು ಜಿಲ್ಲಾ ಮಂತ್ರಿಗಳನ್ನು ಮಾಡಿದಿರಿ. ಒಂದು ದಿವಸವಾದರೂ ಜಿಲ್ಲಾ ಪರಿಷತ್ತಿನಲ್ಲಿ ಏನು ಕೆಲಸ ನಡೆದಿದೆ ಎಂದು ರಿವ್ಯೂ ಮಾಡುತ್ತಾರಾ? ಕುಡಿಯುವುದಕ್ಕೆ ಯಾವ ಊರಿಗೆ ನೀರು ಇಲ್ಲ, ಬೋರ್‌ವೆಲ್‌ಗಳು ಎಷ್ಟು ಕೆಟ್ಟು ಹೋಗಿದೆ? ಅಥವಾ ರಸ್ತೆಗಳು ಎಲ್ಲಿ ಕೆಟ್ಟು ಹೋಗಿದೆ ಎಂಧು ನೋಡುತ್ತಾರೆಯೇ? ಮತ್ತೊಂದು ವಿಶೇಷವಾಗಿ ನೀವು ಜಿಲ್ಲಾ ಪರಿಷತ್ತಿನಲ್ಲಿ ರಸ್ತೆಯ ಫಾರ್ಮೇಷನ್ ಅನ್ನು ಯಾವುದೋ ಒಂದು ಫಂಡ್‌ನಲ್ಲಿ ಮಾಡುತ್ತೀರಿ. ನಮ್ಮ ಸೆಂಟ್ರಲ್ ಫಂಡ್‌ನಿಂದ ಬರತಕ್ಕ ರೋಜಗಾರ್ ಯೋಜನೆಯಲ್ಲಿ ಮಾಡುತ್ತೀರಿ. ಅದಕ್ಕೆ ಮೇಂಟೆನೆನ್ಸ್ ಮಾಡತಕ್ಕದ್ದಕ್ಕೆ ಪ್ರಾವಿಜನ್ನೇ

ಇಲ್ಲ. ಬಹುಶಃ ನೀವು ನೋಡಿ. ಅವರೇನು ಹೇಳುತ್ತಾರೆ? ನಿಮ್ಮ ಆಕ್ಷನ್ ಪ್ಲಾನ್‌ನಲ್ಲಿ ಹಾಕಿಕೊಂಡು ಮಾಡಿಕೊಡಿ. ಆವಾಗ ಇದು ಏನಾಗುತ್ತದೆ. ಕಂಟಿನ್ಯೂಯಸ್‌ಲಿ ಮಣ್ಣಿನ ಕೆಲಸ ಮಾಡುವುದಕ್ಕೇನೆ ಜಿಲ್ಲಾ ಪರಿಷತ್ ಮೆಂಬರ್ಸ್, ತಾಲ್ಲೂಕಾ ಪಂಚಾಯತಿ ಮೆಂಬರ್ಸ್ ಒಪ್ಪುತ್ತಾರೆಯೇ ಹೊರತಾಗಿ ನೀವು ಮೆಟಲ್ ರೋಡ್ ಮಾಡಿರಿ ಎಂದರೆ ಒಬ್ಬರೂ ಒಪ್ಪುವುದಿಲ್ಲ. ಏಕೆ ಒಪ್ಪುವುದಿಲ್ಲ ಎಂದರೆ ಅವನು ಟ್ರಾಕ್ಟರ್ ಹಾಕಿ ತೆಗೆದುಕೊಂಡು ಹೋಗಿ ಮಣ್ಣು ಹಾಕಬೇಕಲ್ಲ. ಮಣ್ಣು ಹಾಕಿ ಬಿಲ್ ಮಾಡಿ ಹೆದರಿಸಿಕೊಂಡು ಜೇಬಿಗೆ ಹಾಕಿಕೊಂಡು ಬರಬೇಕು.

ಅಧ್ಯಕ್ಷರು : ಏನು ಕೆಲಸ ಅದು, ಮಣ್ಣು ತಿನ್ನುವ ಕೆಲಸವೇ. ನಾನು ಸರಿಯಾಗಿ ಕೇಳಿಸಿಕೊಳ್ಳಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರೋಡಿನ ಮೇಲೆ ಮಣ್ಣು ಹಾಕುವುದು.

ಶ್ರೀ ಚಂದ್ರಕಾಂತ್ ಗುರಪ್ಪ ಬೆಲ್ಲದ್ : ಮಣ್ಣು ಕೊಡುವ ಕೆಲಸ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಣ್ಣು ತಿನ್ನುತ್ತಾರೆ, ರೋಡ್ ಮೇಲೂ ಇಷ್ಟು ಮಣ್ಣು ಹಾಕುವುದು.

ಅಧ್ಯಕ್ಷರು : ನನಗೆ ಸರಿಯಾಗಿ ಕೇಳಿಸಲಿಲ್ಲ, ಅದಕ್ಕೇ ಹೇಳಿದೆ.

ಶ್ರೀ ಚಂದ್ರಕಾಂತ್ ಗುರಪ್ಪ ಬೆಲ್ಲದ್ : ಮಣ್ಣು ಕೆಲಸ ಮಾಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದಕ್ಕೆ ಅಟ್‌ಲೀಸ್ಟ್ ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಹೋಗಿ ತಿಂಗಳಿಗೊಮ್ಮೆಯಾದರೂ ರಿವ್ಯೂ ಮಾಡುತ್ತಾರಾ? ಅವರ ಜಿಲ್ಲೆ ಎಂದರೆ ಒಂದು ಹೆದರಿಕೆ ಇರುತ್ತದೆ. ಯಾರಾದರೂ ಸರ್ಕಾರದವರು ಕೇಳುತ್ತಾರೆ, ನಾವು ತಪ್ಪು ಮಾಡಿದರೆ ಕೇಳುವವರು ಇದ್ದಾರೆ, ಎನ್ನತಕ್ಕದ್ದು ಬರಬೇಕು. ಕೆಲವು ಸಲ ನಾವೇನು ಮಾಡುತ್ತೇವೆ ಫಾರ್ಮಲಿ ಹೋಗುತ್ತೇವೆ. ಒಂದು ಅರ್ಧ ತಾಸು, ಒಂದು ತಾಸು ಸುಮ್ಮನೇ ಕೂಡುವುದು. ಅದೇನಾಯಿತು, ಇದೇನಾಯಿತು ಎಂದು ಹೇಳಿ ಕೆಲವು ಇಂಪಾರ್ಟೆಂಟ್ ಅವರಿಗೆ ಬೇಕಾದ್ದನ್ನು ರಿವ್ಯೂ ಮಾಡಿದರು, ಹೊರಟರು. ಇದರಿಂದ ಏನಾಗಿದೆಯೆಂದರೆ ಆ ಒಂದು ಹಿಡಿತ ತಾಲ್ಲೂಕು ಪಂಚಾಯತಿ ಮೇಲೆ ನಮ್ಮ ವಿಲೇಜ್ ಪಂಚಾಯತಿಯ ಮೇಲೆ ಬರಬೇಕಾಗಿತ್ತು, ಅದು ಬರುತ್ತಿಲ್ಲ. ಅದರಿಂದ ಲೋಕೋಪಯೋಗಿ ಕೆಲಸ ಏನು? ನಮ್ಮ ಜಿಲ್ಲಾ ಪರಿಷತ್ ರಸ್ತೆ ಮತ್ತು ಕಟ್ಟಡ ಕೆಲಸಕ್ಕೆ ಕೊಡತಕ್ಕ ಹಣ ಮತ್ತು ಲೋಕೋಪಯೋಗಿ ಇಲಾಖೆಗೆ ಕೊಡುತ್ತಿರುವಂತಹ ಹಣವನ್ನು ಕಂಪೇರ್ ಮಾಡಿ ನೋಡಿದರೆ ಅಜಗಜಾಂತರ ವ್ಯತ್ಯಾಸ ಇದೆ. ಲೋಕೋಪಯೋಗಿ ಇಲಾಖೆಯವರ ಹಣ ಒಂದು ಹತ್ತು ಪರ್ಸೆಂಟ್ ಸಹ ಇಲ್ಲ, ಇಲ್ಲಿಗೆ ಹೋಲಿಸಿದರೆ. ಆದರೆ ಎಲ್ಲಾ ಕೆಲಸ ಕೂಡ ಇಲ್ಲಿದ್ದಾಗಲೂ ಕೂಡ ನಾವು ಅದಕ್ಕೆ ಹೆಚ್ಚಿನ ರಿವ್ಯೂ ಮಾಡತಕ್ಕದ್ದು, ಹೆಚ್ಚಿನ ಜವಾಬ್ದಾರಿ ವಹಿಸಿ ಮಾಡತಕ್ಕದ್ದು ಆಗುತ್ತಿಲ್ಲ. ಅದಕ್ಕೆ ಇವತ್ತು ಡೀಸೆಂಟ್ರಲೈಸೇಷನ್ ಆಫ್ ಲಂಚ ಆಗಿದೆಯೇ ಹೊರತಾಗಿ ಕರಪ್ಷನ್ ಆಗಿದೆ. ಆದರೆ ಡೀಸೆಂಟ್ರಲೈಸೇಷನ್ ಆಫ್ ಪವರ್ ಇಟ್ಟು ಕೊಂಡು ಆ ಕೆಲಸವನು ಬಡವರಿಗೆ ಮಾಡಬೇಕು.

ಚರಂಡಿ ಕೆಲಸ ಮಾಡಬೇಕು ಅಥವಾ ಹಳ್ಳಿಯನ್ನು ಉದ್ಧಾರ ಮಾಡಬೇಕು ಎನ್ನತಕ್ಕದ್ದು ಇಲ್ಲ. ತಮಗೆ ಗೊತ್ತಿದೆ. 1200 ಹಳ್ಳಿಗಳು ಈ ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್‌ನಲ್ಲಿ ಬಂದಿದೆ. ಅನೇಕ ಕಡೆ ನಾವು ಆ ಹಳ್ಳಿಯ ಪಂಚಾಯತಿಯವರನ್ನು ಎನ್‌ಕರೇಜ್ ಮಾಡುತ್ತೇವೆ. ಏಕೆಂದರೆ 10 ಪರ್ಸೆಂಟೋ ಅಥವಾ 30 ಪರ್ಸೆಂಟೋ ಕಾಂಟ್ರಿಬ್ಯೂಷನ್ ಐಟಂವೈಸ್ ಮಾಡುತ್ತೇವೆ. ಅದಕ್ಕಾಗಿ ಒಬ್ಬರೂ ಪಂಚಾಯತಿ ಛೇರ್ಮನರವರು ಕಾಂಟ್ರಿಬ್ಯೂಷನ್ ಕೊಡುವುದಿಲ್ಲ. ನಾವು ನೀವು ಮಾಡಿ ಎಂದು ಹೇಳಿದರೂ, ನಿಮ್ಮ ಹಳ್ಳಿಗೆ ಇದು ಬರುತ್ತದೆ ಒಂದು ಕೋಟಿ ರೂಪಾಯಿ ಹಣ, ನೀವು ಮುಂದೆ ಬಂದು ಮಾಡಿ ಎಂದರೂ ಕೂಡ ಮಾಡುವುದಿಲ್ಲ. ಕೆಲವು ಕಡೆ ಅಂತೂ ಅವನ ಮನಸ್ಸಿಗೆ ಕೆಲಸ ಸಿಗಲಿಲ್ಲ ಎಂದರೆ ಅವನು ಈ ಕೆಲಸ ತೆಗೆದುಕೊಳ್ಳಬೇಕೆಂದು ಹೇಳಿ ರೆಸಲ್ಯೂಷನ್ ಪಾಸ್ ಮಾಡುವುದಿಲ್ಲ. ನಮ್ಮಲ್ಲಿ ಒಂದು ಚಂಡ್ರಿಕೆ ಎಂಬ ಗ್ರಾಮ ಇದೆ. ಆ ಗ್ರಾಮಕ್ಕೆ ಸುಮಾರು 60-70 ಲಕ್ಷ ರೂಪಾಯಿ ಸ್ಯಾಂಕ್ಷನ್ ಆಗಿ ಈ ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್‌ನಲ್ಲಿ ಬಂದಿದೆ. ಈ ಹಳ್ಳಿಯ ಕೆಳಕಂಡ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ನಿರ್ಣಯ ಪಾಸುಮಾಡಿ ಸ್ವಲ್ಪ ಕಳಿಸಪ್ಪ ಅಂದರೆ ಆ ಸಭೆಗೆ ಅಟೆಂಡ್ ಮಾಡವುದಿಲ್ಲ ಕೋರಮ್ ಮಾಡಿಕೊಡುವಹಾಗಿಲ್ಲ. ಕೋರಂ ಆಗುವುದಿಲ್ಲವೆಂದರೆ ಯಾವ ಮೀಟಿಂಗ್ ಆಗುವುದಿಲ್ಲವೆಂದರೆ ಯಾವ ನಿರ್ಣಯವನ್ನೂ ಪಾಸ್ ಮಾಡುವುದಿಲ್ಲವೆಂದರೆ ಇಲ್ಲಿ ಸ್ಪೆಷಲ್ ಆಫೀಸರ್ ಅಥವಾ ಎನ್‌ವೈರನ್‌ಮೆಂಟಲ್ ಎಕ್ಸಿಕ್ಯುಟೀವ್ ಒಪ್ಪುವುದಿಲ್ಲ. ಅವರು ಒಪ್ಪಲಿಲ್ಲವೆಂದರೆ ಡೈರೆಕ್ಟರ್ ಒಪ್ಪಲ್ಲ ಹೀಗಾಗಿ ಮೂರ್ನಾಲ್ಕು ವರ್ಷದಿಂದ ಸತತವಾಗಿ ಆ ಹಣ ಹಾಗೇ ಬಿದ್ದಿದೆ. ಕೊನೆಗೆ ನಾವು ಬೇಸತ್ತುಕೊಂಡು ಏನಾದರೂ ಮಾಡಿರಪ್ಪ ನಿಮ್ಮ ಇಲಾಖೆಯಿಂದಲೇ ಮಾಡಿರಿ ಎಂಬ ಪರಿಸ್ಥಿತಿ ಬಂದರೂ ಆಗಲೂ ಒಂದು ನಿರ್ಣಯ ಬೇಕಾಗುತ್ತದೆ. ಇಂತಹ ಅನೇಕ ಕೆಲಸಗಳು ಇವತ್ತು ನಿಂತಿವೆ. ಅದಕ್ಕೆ ನಾನು ಎಲ್ಲವನ್ನೂ ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದಿಲ್ಲ. ಸುಮ್ಮನೆ ಒಂದೆರಡು ಉದಾಹರಣೆ ಹೇಳಿದೆ. ಯಾವರೀತಿಯಾಗಿ ಇವತ್ತು ವಿಕೇಂದ್ರೀಕರಣದ ಹೆಸರಿನಲ್ಲಿ ಲೋಕಲ್ ಲೀಡರ್ಸ್ ಅನ್ನು ಪವರ್‌ಫುಲ್ ಮಾಡುತ್ತಿದ್ದೇವೆ, ಉದ್ದೇಶ ಒಳ್ಳೆಯದಿದೆ ವಿಕೇಂದ್ರೀಕರಣ ವಾಗಬೇಕು ಎಲ್ಲರಿಗೆ ಅನುಕೂಲವಾಗಬೇಕು. ಆದರೆ ಕೆಲವು ಕಡೆ ಪವರ್‌ಫುಲ್ ಕ್ಲಾಸ್ ಇನ್ನೂನೂ ತನ್ನ ಹಿಡಿತದಲ್ಲೇ ಇಟ್ಟುಕೊಂಡು ತನಗೆ ಬೇಕಾದವರನ್ನು ಆರಿಸಿಕೊಂಡು ಅವರನ್ನು ಕೆಳಗೆ ಕೂರಿಸಿ ಇವರು ಮೇಲಕ್ಕೆ ನಿಂತು ನಿರ್ಣಯ ಪಾಸು ಮಾಡಿಕೊಂಡು ಬೇಕಾದಂತಹ ಕೆಲಸಗಳನ್ನು ತೆಗೆದುಕೊಂಡು ಇವರೇ ಕೆಲಸಗಳನ್ನು ಮಾಡಿ ಟ್ರಾಕ್ಟರ್ ಹೊಡೆದುಕೊಂಡು ಕೆಲಸಗಳನ್ನು ಮಾಡುತ್ತಿದ್ದಾರೆ. ಆದ್ದರಿಂದ ದಯವಿಟ್ಟು ಹೆದರಿಕೆ ಬರುವ ರೀತಿಯಲ್ಲಿ, ಪಂಚಾಯತಿದಾರರು ಕೆಲಸ ಮಾಡಲಿಲ್ಲವೆಂದರೆ ಸೂಪರ್‌ಸೀಡ್ ಮಾಡುತ್ತಾರೆ ಅಥವಾ ತಾಲ್ಲೂಕಾಪಂಚಾಯತಿಯವರು ಕೆಲಸ ಮಾಡಲಿಲ್ಲವೆಂದರೆ ಅವರ ಮೇಲೆ ಆಕ್ಷನ್ ತೆಗೆದುಕೊಳ್ಳುತ್ತಾರೆ ರಾಜಕೀಯವಾಗಿ ಅಲ್ಲ, ಮತ್ತೆ ಅದೂ ಬರುತ್ತದೆ, ಕಾಂಗ್ರೆಸ್ಸೋ ಜನತಾದಳವೋ ಎಂದು ಎಲ್ಲೆಲ್ಲಿ ದುರದ್ದೇಶದಿಂದ ಇಂತಹ ಪಂಚಾಯಿತಿಗಳಿವೆ ಅಂತಹವನ್ನು ಕಂಡುಹಿಡಿಯಿರಿ ರಿವ್ಯೂ ಮಾಡಿ, ಅಟ್‌ಲಿಸ್ಟ್ ಅವರಿಗೆ ಹೆದರಿಕೆಯಿರುತ್ತದೆ, ಒಂದು ಕೇಳುವ ಸರ್ಕಾರ ಇದೆಯಪ್ಪ ಇದರ ಬಗ್ಗೆ ಆಸಕ್ತಿ ವಹಿಸಿದ್ದಾರೆ ಅನ್ನುವುದಾದರೂ ಬರುತ್ತದೆ. ಅದಕ್ಕೆ ದಯವಿಟ್ಟು ಇದರ ಕಡೆಗೂ ಕೂಡ ಗಮನಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಿ. ಅಧ್ಯಕ್ಷರೇ ತಾವು ಇರಲಿಲ್ಲ

ನಾನೊಂದು ಕ್ರಿಯಾಲೋಪವನ್ನು ಎತ್ತಿದ್ದೆ ಅದನ್ನು ಉಪಾಧ್ಯಕ್ಷರು ತಳ್ಳಿಹಾಕಿದರು, ಮಂತ್ರಿಗಳು ಕೂಡ ಅದಕ್ಕೆ ಒಪ್ಪಲಿಲ್ಲ. ನಿಜವಾಗಲೂ ಅದು ಪ್ರೊಸಿಜರ್ ಪ್ರಕಾರ ಇರಲಿಲ್ಲ, ಬಿಲ್ ಇಂಟ್ರಡ್ಯೂಸ್ ಮಾಡಿಲ್ಲ ಮಂತ್ರಿಗಳು, ತಾವು ಬೇಕಾದರೆ ಇನ್ನೊಂದು ಸಲ ನೋಡಿ. ಏಕೆಂದರೆ ಇದು ಪ್ರಿಸಿಡೆಂಟಾಗಬಾರದು. ಅದಕ್ಕಾಗಿ ಅದನ್ನು ನೋಡಿ. ಮತ್ತೆ ಇದರ ಬಗ್ಗೆ ನಾನು ಹೇಳುತ್ತೇನೆ. ಕಟ್ಟುನಿಟ್ಟಾಗಿ ಅಟ್‌ಲೀಸ್ಟಾಗಿ ನೀವು ನಿಮ್ಮ ಮಂತ್ರಿ ಉಸ್ತುವಾರಿ ಮಂತ್ರಿಗಳಿಗೆ ಆದೇಶಕೊಟ್ಟರೆ ರೆವ್ಯೂ ಮಾಡಿ, ಶಾಸಕರಿಗಾದರೂ ಮೂರು ತಿಂಗಳಿಗೊಮ್ಮೆ ರಿವ್ಯೂ ಮಾಡಲಿಕ್ಕೆ ಅವಕಾಶ ಕೊಡಿ ಮತ್ತು ಕೊಟ್ಟಂತಹ ಫಿಜಿಕಲ್ ಫೈನಾನ್ಸಿಯಲ್ ಟಾರ್ಗೆಟೇನು, ಅವರ ಅಚೀವ್‌ಮೆಂಟೇನು? ಅವರು ಮಾಡಿದ್ದಾರೋ ಇಲ್ಲವೋ ಎಂದು ನೋಡಿಕೊಳ್ಳುವುದಕ್ಕೆ ಒಂದು ಆದೇಶ ಕೊಡಬೇಕೆಂದು ಹೇಳಿ ಮತ್ತು ಎಲ್ಲೆಲ್ಲಿ ಇಂತಹ ಲಂಚದ ಹಾವಳಿ ನಡೆದಿದೆ ಅಥವಾ ಹೆಚ್ಚಿನ ರೀತಿಯಲ್ಲಿ ಕೊಟ್ಟಂತಹ ಹಣ ದುರುಪಯೋಗ ಮಾಡುವುದು ನಡೆದಿದೆ ಅದಕ್ಕೆ ಒಂದು ಕಡಿವಾಣ ಹಾಕುವ ಕೆಲಸ ತಾವು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತು ಮುಗಿಸುತ್ತೇನೆ.

+ಶ್ರೀ ಜೆ.ಸಿ. ಮಾಧುಸ್ವಾಮಿ : ಅಧ್ಯಕ್ಷರೇ, ಈ ಬಿಲ್ ಅನ್ನು ಸೀಮಿತವಾಗಿ ನಾನು ಸ್ವಾಗತಿಸುತ್ತೇನೆ. ಏಕೆಂದರೆ ತಾತ್ವಿಕವಾಗಿ ಈ ಸರ್ಕಾರದ ನಿಲುವು ನಮಗೆ ಸ್ಪಷ್ಟವಾಗಬೇಕು. ಇದರಲ್ಲಿ ಮೂರು ಭಾಗ ಮಾಡಿದ್ದಾರೆ. ಒಂದು ಅಮಾಲ್ಗಮೇಶನ್, ಒಂದು ಪೋಶನ್ ಆಫ್ ಎ ಪಂಚಾಯತಿ ಅದು ಮುನಿಸಿಪಾಲಿಟಿಗೆ ಮರ್ಜ್ ಆದಾಗ ಏನು ಮಾಡುವುದು ಇನ್ನೊಂದು ಹೊಸ ಜಿಲ್ಲೆಗಳಾದಾಗ ಆ ಮೆಂಬರ್‌ಗಳ ಸ್ಥಾನಮಾನ ಏನು ಎಂದು ಮಾನ್ಯ ಪ್ರಕಾಶ್ ಅವರು ಹೊಸ ಜಿಲ್ಲೆ ಹೊಸ ತಾಲ್ಲೂಕು ಆದವರಿಗೆ ಅದೇ ಸ್ಥಾನ ಮತ್ತು ಅದೇ ಅವಧಿಯನ್ನು ಉಳಿಸಿಕೊಟ್ಟಿದ್ದಾರೆ. ಅಮಾಲ್ಗಮೇಶನ್ ಸದಸ್ಯರಿಗೆ ಮಾತ್ರ 6 ತಿಂಗಳಿಗೆ ನಾಮಿನೇಟಾಗಬೇಕು, ಆಮೇಲೆ ಬೇರೆಯವರು ಎಲೆಕ್ಟಾಗಬೇಕು ಎಂಬ ಹಳೆ ಸರ್ಕಾರದ ಕಾನ್‌ಸೆಪ್ಟನ್ನೇ ಮತ್ತೆ ಇಲ್ಲಿ ಒತ್ತಿ ಹೇಳಿದ್ದಾರೆ. ಒಂದು ವ್ಯತ್ಯಾಸ ಮಾಡಿದ್ದಾರೆ ಸ್ವಾಮಿ, ಡಿಸಿ ಅಡ್ಮಿನಿಸ್ಟ್ರೇಟರಾಗಿ ಇರುತ್ತಿದ್ದುದನ್ನು ತಪ್ಪಿಸಿ ಪ್ರತಿನಿಧಿಗಳೇ ಕೂತುಕೊಳ್ಳಲಿ ಎಂದು ಇನ್ನು ಪಾರ್ಟ್ ಆಫ್ ಪಂಚಾಯತ್ಸೇನು ಬೇರೆ ಮುನಿಸಿಪಾಲಿಟಿ ಅಥವಾ ಅರ್ಬನ್‌ಬಾಡಿಗೆ ಹೋಗಿ ಉಳಿದಿದೆ ಅವರ ಸ್ಥಿತಿಯಂತೂ ಇನ್ನೂ ವಿಕಾರವಾಗಿಬಿಟ್ಟಿದೆ. ಅವರು ಇನ್ನೂ ಒಂದೆರಡು ವರ್ಷ ಟರ್ಮ್ ಉಳಿಸಿಕೊಂಡಿದ್ದರೂ ಈಗ ಅವರು ನಾಮಿನೇಟೆಡ್ ಸದಸ್ಯರಾಗುತ್ತಾರೆ. ಅವರು ಅಲ್ಲಿಗೆ ಅಧ್ಯಕ್ಷ ಒಂದು ತಿಂಗಳಿಗೆ ಆಯ್ಕೆಯಾಗಿಬಿಟ್ಟು 6 ತಿಂಗಳಿಗೆ ಅವಧಿ ಮುಗಿದುಹೋಗಿಬಿಡುತ್ತದೆ. ಮತ್ತೆ ಅವರು ಎಲೆಕ್ಟಾಗಬೇಕಾಗಿದೆ. ಒಬ್ಬರು ಇಬ್ಬರು ಅಥವಾ ಮೂರು ಜನ ಒಂದು ಪಂಚಾಯ್ತಿಯಲ್ಲಿ ಎಲೆಕ್ಟಾಗಿದ್ದವರು ಖಾಲಿಯಾಗಿರುವ ತಪ್ಪಿಗೆ ಎಲ್ಲಾ ಪಂಚಾಯಿತಿ ಸದಸ್ಯರೂ ಸ್ಥಾನ ಕಳೆದುಕೊಳ್ಳುವ ಸ್ಥಿತಿ ನಿರ್ಮಾಣವಾಗಿದೆ. ಪ್ರಿನ್ಸಿಪಲಿ ಇದು ಎಲ್ಲ ಕಡೆ ಅಪ್ಲೈ ಆಗಿದ್ದರೆ ನಾನು ತಕರಾರು ಮಾಡುತ್ತಿರಲಿಲ್ಲ. ತಾವೇನು ಹೊಸ ಜಿಲ್ಲೆ ತಾಲ್ಲೂಕು ಮಾಡುತ್ತೀರಿ ಆ ಸದಸ್ಯರಿಗೆ ಪೂರಾ ಟರ್ಮನ್ನು ತಾವು ಎನ್‌ಶೂರ್ ಮಾಡಿ ಅಲ್ಲೊಂದು ಹೊಸ ಆರ್ಗನೈಜೇಶನ್ನನ್ನು ಎಸ್ಟಾಬ್ಲಿಶ್ ಮಾಡುವಾಗ ಡೆಮಾಕ್ರೆಟಿಕ್ ಆಗಿ ಬಿಹೇವ್ ಮಾಡುವ ನೀವು ಈ ಕಡೆ ಬಂದಾಗ ಏಕೆ ತಾರತಮ್ಯ ತೋರಿಸುತ್ತೀರಿ ಎಂದು ಈ ಬಿಲ್‌ನಲ್ಲಿ ಉತ್ತರ ಹೇಳಬೇಕಾಗುತ್ತದೆ ಸ್ವಾಮಿ. ಎರಡನೆಯದು, ಈ ಪಂಚಾಯಿತಿಗಳ ಸ್ಥಿತಿ ನೋಡಬೇಕು

ಸ್ವಾಮಿ, ಪಂಚಾಯಿತಿಗಳಾದ ಮೇಲೆ ಮುನಿಸಿಪಲ್ ಎಲೆಕ್ಷನ್ಸ್ ಡಿಕ್ಲೇರ್ ಆಗಿಬಿಟ್ಟಿತು ತರಾತುರಿಯಲ್ಲಿ, ಅವತ್ತಲ್ಲಿ ಮೆಂಬರ್‌ಗಳು ಯಾರು ಇದ್ದರು ಅವರ್ಯಾರನ್ನೂ ಲೆಕ್ಕಕ್ಕೆ ತೆಗೆದು ಕೊಳ್ಳಲಿಲ್ಲ ಮುನಿಸಿಪಾಲಿಟಿ ಎಂದು ನೋಟಿಫೈ ಮಾಡಿಬಿಟ್ಟು ಅಲ್ಲಿ ಎಲೆಕ್ಷನ್ ಮಾಡಿದರು. ನಾವೆಲ್ಲ ಕೋರ್ಟ್ ಮುಂದೆ ಹೋದೆವು, ಎಲೆಕ್ಟಾಗಿರುವ ಸದಸ್ಯರನ್ನು ಏನು ಮಾಡಬೇಕೂಂತ. ಕೋರ್ಟಿನಲ್ಲಿ ಹೇಳಿದರು ಎಲೆಕ್ಷನ್ಸ್ ಯಾವುದಕ್ಕೂ ಸ್ಟೇ ಕೊಡುವುದಕ್ಕೆ ಬರುವುದಿಲ್ಲ, ಕೋರ್ಟೆ ಇಂಪೋಸ್ ಮಾಡಿಬಿಟ್ಟಿದೆ ಮುನಿಸಿಪಾಲಿಟಿ ಎಲೆಕ್ಷನ್ಸ್ ಅನ್ನು ಹಂಗಾಗಿ ನೀವು ಹಾಗೇ ಇರಿ ಎಂದು ಒಂದು ವರ್ಷ ಕಾಲ ಆ ಊರಿನಲ್ಲಿ ಪಂಚಾಯಿತಿಗೆ ಮೆಂಬರಿದ್ದುಕೊಂಡು ಬಂದಿದ್ದಾನೆ, ಮುನಿಸಿಪಾಲಿಟಿ ಮೆಂಬರ್ ಇದ್ದುಕೊಂಡು ಬಂದಿದ್ದಾನೆ. ಯಾರು ಏನು ಮಾಡಬೇಕು ಅರ್ಥ ಆಗಿಲ್ಲ, ಮುನಿಸಿಪಾಲಿಟಿಯವರೂ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಿಲ್ಲ, ಪಂಚಾಯಿತಿಯವರೂ ಹಾಕಿಕೊಳ್ಳಲಿಲ್ಲ ಮಧ್ಯೆ ಸರ್ಕಾರವೂ ಇಂಟರ್‌ವಿನ್ ಆಗಲಿಲ್ಲ ಏನು ಮಾಡಬೇಕಾಗಿತ್ತು ಇಲ್ಲಿ ಎಂದು ಈ ಸ್ಥಿತಿ ಕನಿಷ್ಟಪಕ್ಷ ಈಗ ಆಲೋಚನೆಗೆ ಬಂದು ಇವರನ್ನು ಮುನಿಸಿಪಾಲಿಟಿ ಎಂದು ಡಿಕ್ಲೇರ್ ಮಾಡಿ ಅಲ್ಲಿ ಗೆದ್ದ ಮೆಂಬರನ್ನು ಮನೆಗೆ ಕಳಿಸಿಬಿಟ್ಟಿದ್ದಾರೆ ನನ್ನ ಬೇಡಿಕೆ, ತಾವು ಈ ಬಿಲ್ ಮೂಲಕ, ಅಲ್ಲಿ ಎಲೆಕ್ಟಾಗಿದ್ದ ಸದಸ್ಯರಿಗೆ ಕನಿಷ್ಟ ಅವರ ಅವಧಿ ಮುಗಿಯುವವರೆಗೆ ಉಳಿದ ಸದಸ್ಯರಿಗೆ ಉಳಿದುಕೊಂಡು ಹೋಗಲಿಕ್ಕೆ ಮಾಡುವ ಅವಕಾಶ ಇತ್ತಲ್ಲ, ತಾವು ಏಕೆ ಮಾಡುತ್ತಿಲ್ಲ? ಮತ್ತಲ್ಲಿ ಒಬ್ಬ ಎಲೆಕ್ಟೆಡ್ ಅಧ್ಯಕ್ಷನಿದ್ದಾನೆ Unless he is impeased ಏನೋ ಮೆಂಬರ್ಸ್ ಸಂಖ್ಯೆ ಕಡಿಮೆಯಾಗಿ ಕೋರಂ ಇಲ್ಲದಂತೆ ಮೆಜಾರಿಟಿ ಕಡಿಮೆಯಾಗಿ ಅವನ ಅಧಿಕಾರಾನ ಕಿತ್ತುಹಾಕದೇ ಹೋದರೆ ಅವನು ರಿ ಎಲೆಕ್ಟ್ ಏಕಾಗಬೇಕು ಅಥವಾ ಅಲ್ಲೊಬ್ಬ ಅಡ್ಮಿನಿಸ್ಟ್ರೇಟರನ್ನು ಇಟ್ಟುಕೊಂಡು ನಾಮಿನೇಟಾದ ಪಂಚಾಯಿತಿ ಎಂದು ಏಕೆ ಟ್ರೀಟ್ ಮಾಡಬೇಕು ತಾವು ಹೇಳಿದ್ದೀರಿ. ಕೊನೆಯದು ಸ್ವಾಮಿ. ಅಫಿಶಿಯಲ್ಸ್ ಬಗ್ಗೆ ಅವರೊಂದು ಕ್ಲಾಸನ್ನು ಸೇರಿಸಿದ್ದಾರೆ. ಆ ಪಂಚಾಯಿತಿಗೆ ಸೇರಿದ ಅಧಿಕಾರಿಗಳನ್ನು ಅಬ್ಸರ್ವ್ ಮಾಡಿಕೊಳ್ಳುವುದು ಅಥವಾ ಪರ್ಮನೆಂಟ್ ಮಾಡುವುದು through a legal notice ಹೊಸ ಪಂಚಾಯಿತಿಗಳಿಗೆ ಬಿಟ್ಟಿದ್ದು ಎಂದು ಹೇಳಿದ್ದಾರೆ. ಅಮಾಲ್ಗಮೇಶನಾಗುವ ಸಾಧ್ಯತೆ ಬಹಳ ಕಡಿಮೆ. ಅಧ್ಯಕ್ಷರೆ, ಏಕೆಂದರೆ ಜನಸಂಖ್ಯೆ ಆಧಾರದ ಮೇಲೆ ಪಂಚಾಯಿತಿಗಳನ್ನು ನಿರ್ಮಾಣ ಮಾಡಿದ್ದಾರೆ ಐದರಿಂದ 6 ಸಾವಿರ ಜನಸಂಖ್ಯೆಗೆ ಒಂದು ಪಂಚಾಯಿತಿ ಇದೆ, ಎರಡು ಪಂಚಾಯಿತಿ ಸೇರಿ 12 ಸಾವಿರವಾದರೆ ಒಂದು ಪಂಚಾಯಿತಿ ಮಾಡುವುದಕ್ಕೆ ಬರುವುದಿಲ್ಲ. ಅಮಾಲ್ಗಮೇಶನಾದಾಗ ಅಧಿಕಾರಿಗಳು ಉಳಿಯುತ್ತಾರೆ ಅದರಲ್ಲಿ ಯಾರನ್ನು ತೆಗಿಯಬೇಕು ಯಾರನ್ನು ಬಿಡಬೇಕು. ನೀವು ಅಲ್ಲಿ ಬಿಲ್ ಕಲೆಕ್ಟರ್ ತೆಗಿಯುತ್ತೀರಾ, ವಾಟರ್‌ವರ್ಕ್ಸ್‌ನಲ್ಲಿರುವ ವಾಟರ್‌ಮೆನ್ ತೆಗಿತೀರಾ, ಆ ಪಂಚಾಯಿತಿಗೆ ಬಿಡಬಹುದು. ಪಾರ್ಟ್ ಆಫ್ ದಿ ಪಂಚಾಯಿತಿ ಆಚೆ ಹೋಗಿರುವವರಿಗೆ ಕೂಡ ಇದು ಅನ್ವಯುವಾಗುತ್ತದೆ. ನೀವಿಟ್ಟುಕೋಬೇಕಾಬೇಡವ? ಆಮೇಲೆ ಹೆಡ್‌ಕ್ವಾಟ್ರಸ್ ಕೂಡ ಪಂಚಾಯಿತಿ ಏರಿಯ ಬದಲಾದ ಮೇಲೆ ಹೆಡ್‌ಕ್ವಾಟ್ರಸ್ ನಿಗದಿಯಾಗುವುದಕ್ಕೆ ಏನು ಮಾನದಂಡ ಎಂದು ತಾವು ಬಿಲ್‌ನಲ್ಲಿ ಹೇಳಲಿಲ್ಲ. ಯಾವ ಆಧಾರದ ಮೇಲೆ ಹೊಸ ಪಂಚಾಯಿತಿ ಹೆಡ್‌ಕ್ವಾಟ್ರಸ್ ನಿಗದಿಮಾಡಲಾಗುವುದು? ಇದೆಲ್ಲ ಕಾರ್ಯಕ್ರಮಗಳು ಆಗಿಹೋಗಿಬಿಟ್ಟಿವೆ. ಇಂತಹ ಹಂತದಲ್ಲಿ ಏನು ಈ ಬಿಲ್ ಇದೆ, ಸ್ವಲ್ಪ ತಾವು

ಇದನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು ತಾವು ಪ್ರಜಾಪ್ರಭುತ್ವದ ಹಿರಿಮೆಗೆ ಹೆಸರಾದ ಸರ್ಕಾರ ಎಂದು ಹೇಳಿಕೊಳ್ಳುವವರು ಕನಿಷ್ಟ ಚುನಾಯಿತ ಸದಸ್ಯರನ್ನು ಉಳಿಸಿಕೊಡಬೇಕು. ಜೊತೆಗೆ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಸದಸ್ಯರುಗಳೇನು ಆ ಭಾಗದಿಂದ ಎಲೆಕ್ಟಾಗುತ್ತಿದ್ದರು ಪೂರ್ಣ ಆ ಭಾಗ ಹೋದರೆ ಅದು ಸ್ಟ್ಯಾಂಡ್ಸ್ ಡಿಸಾಲ್ವ್ಡ್ ಎಂದು ಹೇಳಿದ್ದೀರಿ, ಅವರ ಅಧಿಕಾರ ಅಲ್ಲಿಗೆ ಕ್ಷೀಣಿಸುತ್ತದೆ ಎಂದು ಹೇಳಿದ್ದೀರಿ. ಹೆಚ್ಚು ಭಾಗ ಹೋದವರನ್ನು ಏನು ಮಾಡಿತ್ತೀರಿ? 80 ಪರ್ಸೆಂಟ್ 90 ಪರ್ಸೆಂಟ್ ಇವತ್ತು ಮುನಿಸಿಪಾಲಿಟಿಗೆ ಮರ್ಜಾಗಿ ಕೇವಲ ಎರಡು ಹಳ್ಳಿ ಮೂರು ಹಳ್ಳಿ ಉಳಿದಿರುವ ಸದಸ್ಯ ಏನು ಮಾಡಬೇಕು ಅವನಿಗೆ ನೀವು ನಾಳೆ ಪಂಚಾಯಿತಿಯಲ್ಲಿ ಅಥವಾ ತಾಲ್ಲೂಕು ಪಂಚಾಯಿತಿಯಲ್ಲಿ ಅಥವಾ ಜಿಲ್ಲಾ ಪಂಚಾಯಿತಿಯಲ್ಲಿ ಯಾವ ಕ್ರಮ ಅನುಸರಿಸಿ ಅವನ ಕ್ಷೇತ್ರದ ಕೆಲಸಗಳನ್ನು ಮಾಡುತ್ತೀರಿ? ಅಥವಾ ಕಡಿಮೆ ಹಳ್ಳಿ ಉಳಿಸಿಕೊಂಡವನದೇನು ಅಥವಾ ಹೆಚ್ಚು ಹಳ್ಳಿ ಉಳಿಸಿಕೊಂಡವನದೇನು ಏನಾದರೂ ಸ್ಪಷ್ಟೀಕರಣ ಹೇಳಬೇಕಾಗುತ್ತದೆ. ಹೋಲ್ ಏರಿಯಾ ಆದರೂ ಹೋದರೆ ಯೆಸ್ ಅವರಿಗೆ ಹಳ್ಳೀನೆ ಇಲ್ಲಾಂದರೆ ಅವರು ಉಳಿಯುವ ಅಗತ್ಯಾನೇ ಇಲ್ಲ. ಇದಕ್ಕೆ ತಾವೇನಾದರೂ ಕ್ಲಾರಿಫಿಕೇಶನ್ ಕೊಡಬೇಕೂಂತ ಕೇಳಿ ಕೊನೆಯದಾಗಿ ಈ ಬಿಲ್‌ನ ವ್ಯಾಪ್ತಿ ಬಿಟ್ಟು ಒಂದು ಮಾತು ಹೇಳಬೇಕಾಗುತ್ತದೆ ಸ್ವಾಮಿ ಇವತ್ತೇನು ಗ್ರಾಮಸಭೆಗಳು ಪ್ರೈಮರಿ ಯೂನಿಟ್ ಆಫ್ ದಿ ಪ್ಲಾನ್ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ. ಪಂಚಾಯಿತಿಯವರು ಗ್ರಾಮಸಭೆ ಮಾಡಬೇಕು ತಾಲ್ಲೂಕು ಸಮಿತಿಯವರು ಸ್ಥಳನಿಗದಿ ಮಾಡಬೇಕೂಂತ ಹೇಳಿ ಫಲಾನುಭವಿಗಳನ್ನು ಸೆಲೆಕ್ಟ್ ಮಾಡಬೇಕೂಂತ ಹೇಳಿದ್ದೀರಿ. ಈ ಕೆಲಸ ನಾವೂ ನೀವೂ ಯೋಚನೆ ಮಾಡುವಷ್ಟು ಚೆನ್ನಾಗಿ ನಡೆಯುತ್ತಿಲ್ಲ ಮೊದಲನೇ ಹಂತದಲ್ಲೇ ಈ ಕಾರ್ಯಕ್ರಮ ಟೊಳ್ಳಾಗುತ್ತಿದೆ. ಗ್ರಾಮಸಭೆ ಏನಾಗುತ್ತದೆ ಅಧ್ಯಕ್ಷರ ಇಚ್ಛೆ ಮೇರೆಗೆ ಅಥವಾ ಆ ಊರಿನ ಪಂಚಾಯಿತಿ ಇಚ್ಛೆ ಮೇರೆಗೆ ಫಲಾನುಭವಿಗಳನ್ನು ಲಿಸ್ಟ್ ಕೊಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಬೇಕಾದವರು ಮಾತ್ರ ಇದ್ದು ಗ್ರಾಮಸಭೆ ನಡೆಸುತ್ತಿದ್ದಾರೆ. ಈ ಎಲ್ಲಾ ಕಡೆ ತಾವು ಗಮನ ಕೊಟ್ಟು ಈ ಬಿಲ್ಲನ್ನು ತಾವು ಕ್ಲಾರಿಫೈ ಮಾಡಬೇಕೂಂತ ಕೇಳುತ್ತೇನೆ.

+ ಶ್ರೀಮತಿ ಪ್ರಮಿಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೆ, ಇದು ವಿಕೇಂದ್ರೀಕರಣ ಅಲ್ಲ ನನ್ನ ಪ್ರಕಾರ ವಿಚ್ಛೇದ್ರಕರಣ ಆಗುತ್ತದೆ. ಈ ತಿದ್ದುಪಡಿ ಏನು ತಂದಿದ್ದಾರೆ ಅಧ್ಯಕ್ಷರೇ, ಗೊತ್ತಿತ್ತು ಜಿಲ್ಲಾ ಮಾಡುತ್ತೇವೆ ಎಂದು ಮುಂಚೆ ತರಬಹುದಾಗಿತ್ತು, ಇದರ ಬಗ್ಗೆ ಸಮಗ್ರವಾದ ತಿದ್ದುಪಡಿ ತಂದು ನಾವೆಲ್ಲಾ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕಾಗಿತ್ತು. ಆದರೆ ತರಾತುರಿಯಲ್ಲಿ ತಂದು ನಾಳೆ ಕೌನ್ಸಿಲ್‌ಗೆ ಹೋಗಬೇಕು ಅದ್ದರಿಂದ ಇವತ್ತೇ ಆಗಬೇಕೂಂತ ಏನು ತಂದಿದ್ದೀರಿ, ಇದು ನಿಜವಾಗಿಯೂ ಮುಂದೆ ಈ ರೀತಿ ಆಗಬಾರದು ಎನ್ನುವುದನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಈ ರೀತಿ ಬಿಲ್‌ಗಳನ್ನು ತರಬೇಕಾದರೆ ಮುಂಚೆ ಸ್ವಲ್ಪ ದಿವಸ ಕೊಟ್ಟು ನಮಗೆ ಅವಕಾಶ ಮಾಡಿ ಕೊಡಬೇಕೂಂತ ಕೇಳಿಕೊಳ್ಳುತ್ತೇನೆ, ಇನ್ನು ಮುಂದೆ ಈ ರೀತಿ ಆಗಬಾರದು. ಅಧ್ಯಕ್ಷರೆ, ಇದರಲ್ಲಿ ಏನಾಗಿದೆ ಎಂದರೆ ಒಂದು ಪಿತೂರಿ ಇದೆ. ನಮ್ಮ ಲೆಜಿಸ್ಲೇಟೀವ್ ಕೌನ್‌ಸಿಲ್‌ಗೆ ಎಲೆಕ್ಷನ್ ಆಗಬೇಕಾದರೆ ಎಲೆಕ್ಟರೇಟ್ಸ್ ಯಾರು, ಮೆಂಬರ್‌ಗಳು ಯಾರು ಅಂದರೆ ಇಲ್ಲಿ ಇರತಕ್ಕಂಹ ಮೆಂಬರ್‌ಗಳು. ಇದರಲ್ಲಿ ಏನಾಗಿದೆ ಅಂದರೆ ಈಗ ಇರತಕ್ಕಂತಹ ಸೆಕ್ಷನ್‌ನಲ್ಲಿ ಮೆಂಬರ್ಸ್‌ನ ನಾಮಿನೇಟ್ ಮಾಡಬಹುದು,

ಅಥವಾ ತೆಗೆದುಹಾಕಬಹುದು ಅಂದರೆ ಎಂಎಲ್‌ಸಿ ಎಲೆಕ್ಷನ್ ಆಗಬೇಕಾದರೆ ತಮಗೆ ಬೇಕಾದವರನ ಇಟ್ಟುಕೊಂಡು ಬೇಡವಾದವರನ್ನು ತೆಗೆದುಹಾಕಿ ಎಲೆಕ್ಷನ್ ಮಾಡುವುದಕ್ಕೋಸ್ಕರ ತರಾತುರಿಯಲ್ಲಿ ಈ ಬಿಲ್ಲನ್ನು ತಂದಿದ್ದಾರೆ ಎಂದು ನನಗೆ ಕಾಣಿಸುತ್ತದೆ. ಅದು ಎಲ್ಲಿ ಇದೆ. ಎಂದು ನಾನು ಹೇಳುತ್ತೇನೆ ಅಧ್ಯಕ್ಷರೆ; ಸೆಕ್ಷನ್ 117 ಬಿ ನಲ್ಲಿ There shall be constituted for the amalgamated panchayat, ಒಂದು ಮಾತು ಹೇಳುತ್ತೇನೆ, nominated by the Deputy Commissioner and Such members shall, as far as may be practicable, ಅಂದರೆ ತಮಗೆ ಬೇಕಾದವ ಇಟ್ಟುಕೊಳ್ಳಬಹುದು, ಇಲ್ಲದೆ ಇದ್ದರೆ as far as may be practicable, ಅಂದಾಗ, ಬೇಕಾದವರನ್ನು ಬಿಡದೆ ಇಟ್ಟುಕೊಳ್ಳುವಂತಹ ಅವಕಾಶ ಮಾಡಿಕೊಂಡಿದ್ದಾರೆ. ನಾನು ದಯವಿಟ್ಟು ಶ್ರೀ ಪ್ರಕಾಶ್ ಅವರನ್ನು ಕೇಳಿಕೊಳ್ಳುತ್ತೇನೆ. ಈ ಸೆಕ್ಷನ್ 'ಬಿ' ನಲ್ಲಿ discretion ಕೊಟ್ಟಿದ್ದೀರಲ್ಲ, ಅದನ್ನು ದಯವಿಟ್ಟು ತೆಗೆದುಹಾಕಿ. ಈಗ ಎಲೆಕ್ಟ್ ಆಗಿ ಮೆಂಬರ್ಸ್ ಯಾರು ಬಂದಿದ್ದಾರೆ ಅವರನ್ನು ಕಂಟಿನ್ಯೂ ಆಗುವುದಕ್ಕೆ ಅವಕಾಶವನ್ನು ಮಾಡಿಕೊಡಿ. ಯಾವುದೇ ಸಂದರ್ಭದಲ್ಲಿ ಇವರನ್ನು ತೆಗೆದು ಹಾಕುವುದಕ್ಕೆ ಡೆಪ್ಯುಟಿ ಕಮೀಷನರ್‌ಗೆ ಅವಕಾಶ ಕೊಡಬೇಡಿ. ಎಲೆಕ್‌ಟೆಡ್ ಮೆಂಬರ್ಸ್ ಜನ ಎಲೆಕ್ಟ್ ಮಾಡಿರುವುದು ಡೆಪ್ಯುಟಿ ಕಮೀಷನರ್‌ಗೆ ನಾಮಿನೇಟ್ ಮಾಡುವುದಕ್ಕೆ ಅವರನ್ನು ತೆಗೆದುಹಾಕಿ ಬೇರೆಯವರನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಡತಕ್ಕಂತಹದ್ದು ಇದು ನಿಜವಾಗಿ ಕೂಡ ಅಬ್ಜೆಕ್ಷನಬಲ್, ಇದನ್ನು ಮಾಡಬಾರದು ಎಂದು ನಾನು ಕೇಳಿಕೊಳ್ಳುತ್ತೇನೆ. ಈ ಸೆಕ್ಷನ್ ಡಿಲಿಟ್ ಮಾಡುವುದಕ್ಕೆ ದಯವಿಟ್ಟು ತಾವೇ ಮುಂದೆ ಬಂದು ಈ ಸೆಕ್ಷನ್‌ಗೆ as far as practicable nominations, ನಾಮಿನೇಷನ್ ಇದೆಯಲ್ಲ, ಆ ಸೆಕ್ಷನ್, ಆ ಕಲಂನ ದಯವಿಟ್ಟು ತೆಗೆದುಹಾಕಿ. ಇನ್ನು ಎರಡನೆಯದು, ಅಧ್ಯಕ್ಷರೆ, 117ರ ಮೂರನೇ ಕಲಂನಲ್ಲಿ The rights and liabilities of the existing Gram Panchayats in respect of ಸಿವಿಲ್ ಎನ್ನುವುದನ್ನೇನೋ ಒಪ್ಪಿಕೊಳ್ಳುತ್ತೇನೆ. ಸಾಮಾಜಿಕ ನ್ಯಾಯದಲ್ಲಿ ಒಪ್ಪಿಕೊಳ್ಳುತ್ತೇನೆ. ಆದರೆ ಕ್ರಿಮಿನಲ್ ಪ್ರೊಸೀಡಿಂಗ್ಸ್ ಕಂಟಿನ್ಯೂ ಆಗುತ್ತದೆ ಎಂದು ಹೇಳುತ್ತೀರಲ್ಲ ಇದು ಯಾವ ಕಾರಣ ಇದು ನನಗಂತೂ ಅರ್ಥ ಆಗುವುದಿಲ್ಲ. ಕ್ರಿಮಿನಲ್ ಲಯಾಬಿಲಿಟೀಸ್ ಮುಂದೆ ಬರತಕ್ಕಂತಹ ಪಂಚಾಯತ್ ಮೇಲೆ ಕಂಟಿನ್ಯೂ ಆಗತಕ್ಕಂತಹದ್ದನ್ನು ನಾನು ಎಲ್ಲೂ ಕೇಳಿಲ್ಲ, ಒಬ್ಬರ ಮೇಲೆ ಇರತಕ್ಕಂತಹ ಕ್ರಿಮಿನಲ್ ಲಯಾಬಿಲಿಟಿ ಇನ್ನು ಒಬ್ಬರ ಮೇಲೆ, ಇನ್ನೊಂದು ಗ್ರಾಮಪಂಚಾಯಿತಿ ಮೇಲೆ ಹಾಕುವುದಕ್ಕೆ ಎಂದೂ ಕೂಡ ಯಾವ ಕಾನೂನಿನಲ್ಲೂ ಸಾಧ್ಯ ಇಲ್ಲ. ಸಿವಿಲ್ ಲಯಾಬಿಲಿಟಿ ಅಗ್ರಿಮೆಂಟ್ ಬೇಕಾದರೆ ಆಗಬಹುದು. ಅಗ್ರಿಮೆಂಟ್ ಎನ್‌ಟ್ರೆಸ್ಟ್ ಮಾಡಿದ್ದರೆ, ಕಾಂಟ್ರ್ಯಾಕ್ಟ್ ಕೊಟ್ಟಿದ್ದರೆ ಆಗಬಹುದು. ಆದರೆ ಕ್ರಿಮಿನಲ್ ಲಯಾಬಿಲಿಟಿ ಒಬ್ಬರು ಮಾಡಿದ್ದನ್ನು ಇನ್ನೊಬ್ಬರ ಮೇಲೆ ಜಾರಿ ಮಾಡುವುದಕ್ಕೆ ಆಗುವುದಿಲ್ಲ. ಪರ್ಸನಲ್ ಲಯಾಬಿಲಿಟಿ, ಕ್ರಿಮಿನಲ್ ಲಯಾಬಿಲಿಟಿ ಎನ್ನುವ ಆ ಪದವನ್ನು ಮೂರನೇ ಸೆಕ್ಷನ್‌ನಲ್ಲಿ ತಾವು ದಯವಿಟ್ಟು ತೆಗೆದುಹಾಕಬೇಕು. ಬೇಕಾದರೆ ಇದರ ಬಗ್ಗೆ ಯೋಚನೆ ಮಾಡಿ ಕಾನೂನು ತಜ್ಞರನ್ನು ಕೇಳಿ ನೋಡಿ, ನಾನು ಹೇಳುತ್ತೇನೆ ಎಂದು ಅಲ್ಲ, ಇವತ್ತು ಗ್ರಾಮ ಪಂಚಾಯಿತಿ ಅಧ್ಯಕ್ಷನಾದರೆ, ಅದರಿಂದ ಅವನನ್ನು ಮುಂದೆ ಬರುತ್ತಾನೆ ಎಂದು ಹೇಳಿದರೆ ಅದು ಸರಿ ಅಲ್ಲ.

ಅಧ್ಯಕ್ಷರು : ಕ್ರಿಮಿನಲ್ ಲಯಾಬಿಲಿಟಿ, ಇಂಡಿವಿಜಿಯಲ್ ಆಗಿರುತ್ತದೆ ಹೊರತು ಇನ್ಸ್‌ಟಿಟ್ಯೂಷನ್‌ಗೆ ಹೇಗೆ ಆಗುತ್ತದೆ?

ಶ್ರೀಮತಿ ಪ್ರಮೀಳಾ ನೇಸರ್ಗಿ : ಇಲ್ಲಾ ಹಾಗೆ ಹೇಳಿದ್ದಾರೆ, ಶಲ್ ಕಂಟಿನ್ಯೂ ಎಂದು ಬರೆದಿದ್ದಾರೆ.

MR. SPEAKER : A Criminal liability could only be with regard to an individual. How it could be with regard to a institution?

ಶ್ರೀಮತಿ ಪ್ರಮೀಳ ನೇಸರ್ಗಿ : ಇಲ್ಲಾ ಹಾಗೆ ಬರೆದಿದ್ದಾರೆ. ತಾವು ಹೇಳುತ್ತಿರುವುದನ್ನೇ ನಾನು ಹೇಳುತ್ತಿರುವುದು. ಕ್ರಿಮಿನಲ್ ಲಯಾಬಿಲಿಟಿ ಶಲ್ ಕನ್‌ಟಿನ್ಯೂ ಎಂದು ಹೇಳಿದ್ದಾರೆ. ಹಾಗೆ ಆಗ ಬಾರದು ಎಂದು ನಾನು ಹೇಳುತ್ತಾ ಇದ್ದೇನೆ. ಸಿವಿಲ್ ಲಯಾಬಿಲಿಟಿ ಕಾಂಟ್ರಾಕ್ಟ್ ಒಪ್ಪಿಕೊಳ್ಳಬಹುದು.

MR. SPEAKER : If an individual is charge-sheeted or treated as accused in any criminal offence, it shall continue against him till such time he is proved innoncent..

ಶ್ರೀಮತಿ ಪ್ರಮೀಳಾ ನೇಸರ್ಗಿ : ಎಗೆನೆಸ್ಟ್ ಹಿಮ್ ಎಂದು ಅವರು ಹೇಳಲಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರು, ಇಲ್ಲಿ ಸರಿಯಾದಂತಹ ಮಾತನ್ನು ಪ್ರಸ್ತಾಪಿಸಿದ್ದಾರೆ. ಈಗ ಯಾರೋ ಹಣದ ದುರುಪಯೋಗ ಮಾಡಿರತಕ್ಕಂತ ಕ್ರಿಮಿನಲ್ ಪ್ರಕರಣ ಒಬ್ಬ ಕಾರ್ಯದರ್ಶಿ ಮೇಲೆ, ಒಬ್ಬ ಸಿಬ್ಬಂದಿ ಮೇಲೆ ಇರುತ್ತದೆ. ಆದರೆ ಅದು ಗ್ರಾಮ ಪಂಚಾಯಿತಿ ಹೋಗಿ, ಅಮಾಲ್ಗಮೇಟ್ ಪಂಚಾಯಿತಿ ಆದಂತಹ ಸಂದರ್ಭದಲ್ಲಿ ಆತನ ಮೇಲೆ ಇರುವ ಕ್ರಿಮಿನಲ್ ಮುಂದುವರೆಯುತ್ತದೆ ಎಂದು ಅರ್ಥ. ಸನ್ಮಾನ್ಯ ಅದ್ಯಕ್ಷರೇ, ತಮ್ಮ ಅರ್ಥವೇ ಸರಿಯಾದುದು.

MR. SPEAKER : Naturally, It is always safer to be a non-advocate.

SRI. M.P. PRAKASH : It cannot be anything like that. Against an institution how there could be a Criminal Proceedings. There would be charge-sheeted as under the Co-operative Act.

ಅಧ್ಯಕ್ಷರು : ಈ ಕಾರಣಕ್ಕಾಗಿ ನಾನು, ಯಡಿಯೂರಪ್ಪನವರು ಲಾ ಓದಲಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಅಧ್ಯಕ್ಷರೆ, ನಾವು ಬಹಳ ಸೂಕ್ಷ್ಮವಾಗಿ ಎಷ್ಟು ದಡ್ಡರು ಎಂದರೆ, ಈಗ ಒಂದು ಮಾತು ಹೇಗಿದೆ Ignorance of law is no excuse except the lawyers. ನೀವು ಹೇಳುವ ಮಾತಿನಲ್ಲಿ ಇದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಸದಸ್ಯರ ಮೇಲೆ, ಅಥವಾ ಅಧಿಕಾರಿಗಳ ಮೇಲೆ ಎಂದು ಇದ್ದಿದ್ದರೆ ನಾನು ಒಪ್ಪುತ್ತಾ ಇದ್ದೆ. ಆದರೆ ಗ್ರಾಮ ಪಂಚಾಯಿತಿ ಎಂಬ ಪದವನ್ನು ಉಪಯೋಗಿಸಿದ್ದಾರೆ.

ಅಧ್ಯಕ್ಷರು : ಸಂಯೋಜಿತ ಪಂಚಾಯಿತಿ ಪ್ರದೇಶದಲ್ಲಿ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಉದ್ಭವಿಸುವ ಸಿವಿಲ್ ಮತ್ತು ಕ್ರಿಮಿನಲ್ ವ್ಯವಹಾರಗಳು, ಕರಾರುಗಳು, ಒಪ್ಪಂದಗಳು ಮತ್ತು ವಿಷಯಗಳು, ಅಥವಾ ಸಂಗತಿಗಳಿಗೆ ಸಂಬಂಧಪಟ್ಟಂತೆ ಅಸ್ತಿತ್ವದಲ್ಲಿ ಇದ್ದ ಗ್ರಾಮ ಪಂಚಾಯಿತಿಗಳ ಹಕ್ಕುಗಳು ಹಾಗೂ ಹೊಣೆಗಾರಿಕೆಗಳು, ಪ್ರಕರಣದ ಅಡಿ ಸ್ಥಾಪಿತವಾದ ಗ್ರಾಮ ಪಂಚಾಯಿತಿಯಲ್ಲಿ ನಿಹಿತಗೊಂಡಿರತಕ್ಕದ್ದು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅಧ್ಯಕ್ಷರೆ, ಅವರು ಟ್ರಾನ್ಸ್‌ಲೇಷನ್ ಕೊಟ್ಟಿರುವುದು ತಾವು ನೋಡಿ. Rights and liabilities of the existing Grama Panchayats in respect of civil and criminal proceedings, ಅಧಿಕಾರಿಗಳು ಎಂದು ಅಲ್ಲಿ ಹೇಳಿಲ್ಲ. ಕ್ಲಿಯರ್ ಮಾಡಬೇಕಾಗಿತ್ತು ಅವರು. ಆದ್ದರಿಂದ ನಾನು ಹೇಳಿದ್ದುದು, 'The Rights and liabilities of the existing Grama Panchayats in respect of civil and criminal proceedings, ಅಂದರೆ ಗ್ರಾಮ ಪಂಚಾಯಿತಿಯಲ್ಲಿ ಆಗುತ್ತದೆ ಹೊರತು, ಕ್ರಿಮಿನಲ್ ಲಯಾಬಿಲಿಟಿ ಗ್ರಾಮ ಪಂಚಾಯತ್‌ನಲ್ಲಿ ಆಗುವುದಿಲ್ಲ. ಗ್ರಾಮ ಪಂಚಾಯತ್‌ನಲ್ಲಿ ಇರತಕ್ಕಂತಹ ಅಧಿಕಾರಿಗಳು ಅಥವಾ ಸದಸ್ಯರ ಮೇಲೆ ಏನಾದರೂ ಲಯಾಬಿಲಿಟಿ ಇದ್ದರೆ ಅದು ಕನ್‌ಟಿನ್ಯೂ ಆಗುತ್ತದೆ, ಯಾರು ಇರುತ್ತಾರೋ ಅವರ ಮೇಲೆ ಹೊಣೆಗಾರಿಕೆ ಬೀಳುತ್ತದೆ. ಗ್ರಾಮ ಪಂಚಾಯಿತಿ ಮೇಲೆ ಕ್ರಿಮಿನಲ್ ಲಯಾಬಿಲಿಟಿ ಇರುವುದಿಲ್ಲ.

MR. SPEAKER : Madam, bear with me. The Rights and Liabilities of the existing Grama Panchayat in respect of Civil and criminal proceedings'. Gram Panchayat is not a non-existent body. It is composed of several people. The elected members are there. The Government appointed employees are there. Any criminal proceedings that is pending against any individual which is part of that Grama Panchayat,

ಶ್ರೀಮತಿ ಪ್ರಮೀಳಾ ನೇಸರ್ಗಿ : ಕ್ರಿಮಿನಲ್ ಲಯಾಬಿಲಿಟಿ ಹಾಗೆ ಆಗುವುದಿಲ್ಲ. ಕ್ರಿಮಿನಲ್ ಲಯಾಬಿಲಿಟಿ, ಕ್ರಿಮಿನಲ್ ಕೇಸ್ ಹಾಕಿದಾಗ ಗ್ರಾಮ ಪಂಚಾಯಿತಿ ಮೇಲೆ ಹಾಕುವುದಿಲ್ಲ. ಇನ್‌ಡಿವಿಜ್ಯುಯಲ್ ಮೆಂಬರ್ ಮೇಲೆ ಹಾಕುತ್ತಾರೆ, ಅಥವಾ ಅಧಿಕಾರಿಗಳ ಮೇಲೆ ಹಾಕುತ್ತಾರೆ. ಆದುದರಿಂದ ಇಲ್ಲಿ ಬರಬೇಕಾದಂತಹ ಅಕ್ಷರ in respect of existing Grama Panchayats, ಅನ್ನುವ ಕಡೆ ಕ್ಲಾರಿಫಿಕೇಷನ್ ಮಾಡಬೇಕಾಗಿತ್ತು. In respect of any members of the Grama Panchayats or any official of Grama Panchayats. ಎಂದು ಹಾಕಬೇಕಾಗಿತ್ತು. ಇಲ್ಲದೇ ಇದ್ದರೆ, it should be made clear,

ಅಧ್ಯಕ್ಷರು : ತಾವು ಮುಂದುವರೆಸಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅಧ್ಯಕ್ಷರೇ, ಇನ್ನೊಂದು 5ನೇ ಸೆಕ್ಷನ್ ದಯವಿಟ್ಟು ಇದು ಬಹಳ ಮುಖ್ಯವಾದುದು 'Any appointment, notification, notice, tax, ಎಂದು ಇದೆ. ಅಧ್ಯಕ್ಷರೇ, ನನಗೆ ಬಹಳ ದುಖಃ ಆಗುತ್ತದೆ. ಎಂಟ್ರಿಟ್ಯಾಕ್ಸ್ ಇದ್ದಿದ್ದು, ಎಲ್ಲಾ ಕಡೆ ಗ್ರಾಮಪಂಚಾಯಿತಿ ಮತ್ತು ಮುನಿಸಿಪಾಲಿಟಿಗೆ, ಎಂಟ್ರಿ ಟ್ಯಾಕ್ಸ್ ಇವತ್ತು ಹೈ ಕೋರ್ಟ್‌ನಲ್ಲಿ ಇಲ್ಲೀಗಲ್ ಎಂದು ಹೇಳಿ ಜಡ್ಜ್‌ಮೆಂಟ್ ಮಾಡಿದ್ದಾರೆ. ಇದಾಗಿ ಬಹಳ ದಿವಸ ಆಯಿತು. ಇನ್ನು ಮೇಲೆ ಯಾವ ಮುನಿಸಿಪಾಲಿಟಿಗೂ ಎಂಟ್ರಿ ಟ್ಯಾಕ್ಸ್ ಕಲೆಕ್ಟ್ ಮಾಡುವುದಕ್ಕೆ ಬರುವುದಿಲ್ಲ. ಇವರು ಯಾವ ಟ್ಯಾಕ್ಸ್ ಕೊಡುತ್ತಾರೆ. ಈ ಗ್ರಾಮ ಪಂಚಾಯಿತಿಗಳು, ತಾಲ್ಲೂಕು ಪಂಚಾಯಿತಿಗಳು ಜಿಲ್ಲಾ ಪಂಚಾಯಿತಿಗಳು, ಮುನಿಸಿಪಾಲಿಟಿಗಳು ಇನ್ನು ಮುಂದೆ ಯಾವ ರೀತಿ ಇರಬೇಕು? ಅದಕ್ಕೆ ತಕ್ಕ ಹಾಗೆ ಆಕ್ಟ್ರಾಯ್ ತರುವುದಿಲ್ಲ ಎಂದು ಮೇಲು ಮನೆಯಲ್ಲಿ ಹೇಳಿದ್ದಾರೆಂದು ಮೊನ್ನೆ ಪೇಪರ್‌ನಲ್ಲಿ ಬಂದಿದೆ. ಆಕ್ಟ್ರಾಯ್ ಇಲ್ಲ, ಹೈ ಕೋರ್ಟ್ ಜಡ್ಜ್‌ಮೆಂಟ್ ಪ್ರಕಾರ ಎಂಟ್ರಿ ಟ್ಯಾಕ್ಸ್ ಇಲ್ಲ. ಈಗ ನೀವು ಏನು ಮಾಡುತ್ತೀರಾ? ನೀವು ಟ್ರಾನ್ಸ್‌ಫರ್ ಮಾಡಿ ಏನು ಮಾಡುತ್ತೀರಾ? ಅಮಾಲ್‌ಗಮೇಷನ್ ಮಾಡಿ ಏನು ಮಾಡಿತ್ತೀರಾ? ಡೀ ಲಿಮಿಟೇಷನ್ ಬೇರೆ ಮಾಡಿ, ಅರ್ಬನ್ ಏರಿಯಾ ಚಿಕ್ಕದು ಎಂದು ಮಾಡಿ, ದೊಡ್ಡದು ಎಂದು ಮಾಡಿ, ಯಾವ ರೀತಿ ಅವರು ಮುಂದುವರೆಸಿಕೊಳ್ಳಬೇಕು ಎಂಬುದನ್ನು ಇವತ್ತು ಯೋಚನೆ ಮಾಡಬೇಕು. ಇಡೀ ಕರ್ನಾಟಕಕ್ಕೆ ಅನ್ವಯಿಸುವಂತಹ ಜಡ್ಜ್‌ಮೆಂಟ್ ಆದರೂ ಕೂಡ ಸರ್ಕಾರದಿಂದ ಒಂದು ಚಕಾರ ಬಂದಿಲ್ಲ. ಮತ್ತು ಅದಕ್ಕೆ ಆಲ್‌ಟರ್‌ನೇಟೀವ್ ಏನುಮಾಡತ್ತೀರಿ ಎನ್ನುವ ಬಗ್ಗೆ ಇದೂವರೆವಿಗೂ ಒಂದು ಹೇಳಿಕೆ ಬಂದಿಲ್ಲ, ಇದು ಇವತ್ತಿನ ಪರಿಸ್ಥಿತಿ.

ಅಧ್ಯಕ್ಷರು : ನಿಮ್ಮ ಅಬ್ಜೆಕ್ಷನ್ ರೆವಿನ್ಯೂ ಇರುವುದಿಲ್ಲ ಎಂದು ಹೇಳುತ್ತೀರಾ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅಧ್ಯಕ್ಷರೇ, ನಾನು ಏಕೆ ಹೇಳುತ್ತಾ ಇದ್ದೇನೆ ಅಂದರೆ, ಟ್ಯಾಕ್ಸ್ ಕಳಿಸುತ್ತೇವೆ ಎಂದು ಹೇಳುತ್ತಾರೆ, ಯಾವ ಟ್ಯಾಕ್ಸ್? ಲ್ಯಾಂಡ್ ರೆವಿನ್ಯೂ ಟ್ಯಾಕ್ಸ್? ಇರುವುದಕ್ಕೆ ಒಂದೇ ಆಧಾರ ಎಲ್ಲಾ ಬದುಕಬೇಕಾದರೆ, ಉಳಿಯಬೇಕಾದರೆ, ಮುಂದುವರೆಯಬೇಕಾದರೆ, ಆ ಟ್ಯಾಕ್ಸ್ ಇಲ್ಲ ಈಗ. ಯಾರು ಕಾನೂನು ಮಾಡಿದರೋ, ಟ್ಯಾಕ್ಸ್ ತಂದಾಗಲೇ ಹೇಳಿದೆ, ಇದನ್ನು ಮಾಡಬಾರದು ಎಂದು

MR. SPEAKER : There is a fundamental difference in the functioning of local body institutions now then what it used to be earlier, ಎಲ್ಲಾರಿಂದ ಬರತಕ್ಕಂತಹ ಹಣವನ್ನು ಅವರಿಗೆ ಕೊಟ್ಟು, ಅವರೇ ಅಲ್ಲಿ ರೈಸ್ ಮಾಡತಕ್ಕಂತಹ ರಿಸೋರ್ಸ್‌ಸ್‌ನಿಂದ ಲೋಕಲ್ ಬಾಡೀಸ್ ರನ್ ಮಾಡುತ್ತಾ ಇತ್ತು. ಈಗ ಲೋಕಲ್ ಬಾಡೀಸ್‌ಗೆ ನಾವು ಪವರ್ಸ್‌ನ ಡೀ ಸೆಂಟ್ರಲೈಸ್ ಮಾಡಿ ಇಲ್ಲಿಂದ ಕೊಡತಕ್ಕಂತಹ ಕೆಲವು ಬಜೆಟರಿ ಅಲೋಕೇಶನ್ ಎಲ್ಲಾ ಅವರಿಗೆ ಟ್ರಾನ್ಸ್‌ಫರ್ ಮಾಡಿ ಗೌರ್ನಮೆಂಟ್ ಆಫ್ ಇಂಡಿಯಾದಿಂದ, ಮತ್ತು ಸ್ಟೇಟ್ ಗೌರ್ನಮೆಂಟ್‌ನಿಂದ ಬರತಕ್ಕಂತಹ ಹಣವನ್ನು ಕೊಟ್ಟು ಅವರ ಚಟುವಟಿಕೆಗಳನ್ನು ನಡೆಸುತ್ತಾರೆ. there has been very little responsibility on the local bodies to raise their own resources. I think I am right Mr. Prakash,.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅಧ್ಯಕ್ಷರೆ, ತಾವು ಹೇಳಿದ್ದುದು ನಿಜ.

ಶ್ರೀ ಎಂ.ಪಿ. ಪ್ರಕಾಶ್ : ಈ ಚರ್ಚೆ ಬಹಳ ಅರ್ಥವತ್ತಾಗಿ ನಡೆಯಲಿ ಎಂದು ತಾವು ಮಾರ್ಗದರ್ಶನ ಮಾಡುತ್ತಾ ಇದ್ದೀರಿ ಅದಕ್ಕಾಗಿ ನಾನು ವಂದಿಸುತ್ತೇನೆ. ಅವರ ಪ್ರಶ್ನೆಗಳಿಗೆ ದೀರ್ಘವಾಗಿ ಉತ್ತರ ಕೊಡಬಹುದು, ಆದರೆ ಈಗ ತಾವು ಸರಿಪಡಿಸಿದಿರಿ. ಯಾವುದೇ ಸಂಪನ್ಮೂಲಗಳನ್ನು ಮಾಡದೆ ಇದ್ದರೆ, ಆ ಸ್ಥಳೀಯ ಸಂಸ್ಥೆಗಳ ಅಸ್ತಿತ್ವಕ್ಕೆ ಬೇರೆ ಬೇರೆ ರೂಪದಿಂದ ಹಣಕಾಸು ಬರುತಕ್ಕಂತದ್ದು ಇದೆ. ಜೆಆರ್‌ಒ ನಿಂದ ಕೊಡುತ್ತಾ ಇದ್ದೇವೆ, ಎಎಎಸ್ ನಿಂದ ಕೊಡುತ್ತಾ ಇದ್ದೇವೆ, ಅನುದಾನವನ್ನು ಸರ್ಕಾರದಿಂದ ನೇರವಾಗಿ ಕೊಡುತ್ತಾ ಇದ್ದೇವೆ.

ಅಧ್ಯಕ್ಷರು : ಅವರೇ ಒದಗಿಸಿಕೊಳ್ಳತಕ್ಕಂತಹ ಉತ್ಪನ್ನ ಬಹಳ ಕಡಿಮೆ. ಮೊದಲು ಅವರು ಅದರ ಮೇಲೆ ಆಧಾರ ಕೊಡಬೇಕಾಗಿತ್ತು, ಆದರೆ ಈಗ ಹಾಗಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಇದು ಎಲ್ಲಾ ರೆಕಾರ್ಡ್‌ನಲ್ಲಿ ಇದೆ. ಸೆಂಟ್ರಲ್ ಗೌರ್ನಮೆಂಟ್ ನಿಂದ ಇಷ್ಟು ಹಣ ಕೊಟ್ಟಿದ್ದೇವೆ, ಸ್ಟೇಟ್ ಗೌರ್ನಮೆಂಟ್‌ನಿಂದ ಇಷ್ಟು ಹಣ ಕೊಟ್ಟಿದ್ದೇವೆ ಎಂದು. ಆದರೆ ವಾಸ್ತವಿಕವಾಗಿ ಯಾವುದೇ ಹಣ ಎಲ್ಲಿಯೂ ಕೂಡ ಸಂದಾಯ ಆಗಿಲ್ಲ ಎನ್ನುವುದನ್ನು ನಾವು ಪ್ರಾಕ್ಟಿಕಲ್ ಆಗಿ ನೋಡಬೇಕಾಗುತ್ತದೆ.

ಮಾನ್ಯ ಸದಸ್ಯರು : ಸನ್ಮಾನ್ಯ ಅಧ್ಯಕ್ಷರೇ, ಅವರು ನಗರದಿಂದ ಆರಿಸಿ ಬಂದಿರುವುದರಿಂದ, ಇಲ್ಲಿ ನಮ್ಮ ಸದಸ್ಯರಿಗೆ ಏನು ಗೊತ್ತಿದೆ, ಅದರ ಮಾಹಿತಿ ಅವರಿಗೆ ಗೊತ್ತಿಲ್ಲ. ಈಗ ತಮ್ಮ ಪಕ್ಷದಲ್ಲಿರುವಂತಹ ಗ್ರಾಮೀಣ ಸದಸ್ಯರನ್ನು ಕೇಳಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾನು ಗ್ರಾಮಂತರ ಪ್ರದೇಶದಿಂದ ಬಂದಿರುವುದು ಉಪಾಧ್ಯಾಕ್ಷರು, ಅಧ್ಯಕ್ಷರು ತಂದುಕೊಟ್ಟಂತಹ ಮಾಹಿತಿ ಮೇಲೆ ನಾನು ಈಗಾಗಲೇ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿಯನ್ನು ಹಾಕಿದ್ದೇನೆ. ಅದರ ಬಗ್ಗೆ ತಮಗೆ ನೋಟೀಸ್ ಕೂಡ ಜಾರಿಯಾಗಿದೆ. ಹಣ ಬಂದಿಲ್ಲ ಎಂದು.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಅವರ ನಾಯಕರೇ ಈ ವಿಚಾರವನ್ನು ಸ್ಪಷ್ಟೀಕರಣ ಮಾಡಲಿ. ನಾವು ಪ್ರತಿ ವರ್ಷವೂ ಕೂಡ ಪ್ರತಿ ಗ್ರಾಮಪಂಚಾಯಿತಿಗೆ ಒಂದು ಲಕ್ಷ ರೂಪಾಯಿಗಳನ್ನು ನೇರವಾಗಿ ಅನುದಾನ ಕೊಡುತ್ತೇವೆ. ಜೆಆರ್‌ಒ ದಲ್ಲಿ ಶೇಕಡ 65 ಭಾಗವನ್ನು ಕೊಡುತ್ತಾ ಇದ್ದೇವೆ ಅದೇ ರೀತಿಯಾಗಿ ಇಎಎಸ್ ಹಣವನ್ನು ಕೊಡುತ್ತಾ ಇದ್ದೇವೆ. ಈ ಎಲ್ಲಾ ಸಂಪನ್ಮೂಲ ಎಲ್ಲಾ ಗ್ರಾಮಗಳಿಗೆ ಕೊಟ್ಟಿರತಕ್ಕಂತಹದ್ದು.

ಶ್ರೀ ವಿ. ಮುನಿಯಪ್ಪ : ಜಿಲ್ಲಾ ಪಂಚಾಯಿತಿಗೆ, ಗ್ರಾಮ ಪಂಚಾಯಿತಿಗೆ ಈಗ ಏಕೆ ಕೊಡುತ್ತಾ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಶ್ರೀ ಮುನಿಯಪ್ಪನವರೇ, ತಾವು ಇಎಎಸ್ ಕಮಿಟಿ ಮಾಡಿಕೊಂಡಾಗ ಗ್ರಾಮ ಪಂಚಾಯಿತಿ ಖರ್ಚೂ ಕೂಡ ಕೊಡಬಹುದು. ಅದನ್ನು ಕೊಟ್ಟಿರತಕ್ಕಂತಹದ್ದು ಇದೆ. ಅಂದರೆ ಮಾನ್ಯ ಅಧ್ಯಕ್ಷರು ಹೇಳಿದ್ದು, ಬೇರೆ ಬೇರೆ ಮೂಲಗಳಿಂದಲೂ ಕೂಡ ಸಂಪನ್ಮೂಲಗಳು ಗ್ರಾಮ ಪಂಚಾಯಿತಿಗೆ ಬರುತ್ತವೆ, ಈಗ ಹಳೇ ಗ್ರಾಮಪಂಚಾಯಿತಿಯ ಸ್ವರೂಪದಲ್ಲಿ ಅವು ಇಲ್ಲ ಎಂದು ಹೇಳುತ್ತಿದ್ದಾರೆ.

11.30 ಎ.ಎಂ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾನು ಏತಕ್ಕೆ ಈ ವಿಷಯ ಪ್ರಸ್ತಾಪಿಸಿದೆನೆಂದರೆ, ಸರ್ಕಾರ ಎಚ್ಚೆತ್ತುಕೊಂಡು ಅದರ ಬಗ್ಗೆ ಏನು ಮಾಡಬೇಕೋ ಅದನ್ನು ಮಾಡಲಿ ಎನ್ನುವುದೇ ವಿನಹ ನನ್ನ ಉದ್ದೇಶ ಎಂಟ್ರಿ ಟ್ಯಾಕ್ಸ್‌ನ್ನು ತೆಗೆದು ಹಾಕಿದ್ದರ ಬಗ್ಗೆ ಅಲ್ಲ, ಎಂಟ್ರಿ ಟ್ಯಾಕ್ಸ್‌ನ್ನು ಹೈಕೋರ್ಟಿನಲ್ಲಿ ವಜಾ ಮಾಡಿದ್ದಾರೆ, ಇದರ ಬಗ್ಗೆ ಜಡ್ಜ್‌ಮೆಂಟ್ ಆಗಿ ಒಂದು ವಾರವಾಯಿತು. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದರ ಬಗ್ಗೆ ಏನು ಮಾಡಿಲ್ಲದಿರುವುದರಿಂದ ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ. ಏಕೆಂದರೆ, ಬರುತ್ತಿರುವ ಆದಾಯ ನಮ್ಮಲ್ಲಿ ಏನಿತ್ತು, ಅದು ಹೋಗಿದೆ, ಅದರ ಬಗ್ಗೆ ಸರ್ಕಾರ ಎಚ್ಚೆತ್ತುಕೊಂಡು ಏನು ಮಾಡಬೇಕೋ ಅದನ್ನು ಮಾಡಲಿ. ಇನ್ನೊಂದು ವಿಷಯವೇನೆಂದರೆ, ನಾನು ಇಂಗ್ಲೀಷ್ ಟ್ರಾನ್ಸ್‌ಲೇಶನ್ ಬಗ್ಗೆ ಮಾತನಾಡಲು ಹೋಗುವುದಿಲ್ಲ. ಸೆಕ್ಷನ್ (6)ರಲ್ಲಿ ಎಂಪ್ಲಾಯಿ, ಎಂಪ್ಲಾಯಮೆಂಟ್ ಎಂಬುದನ್ನು ಮಾಡಬೇಕಾಗಿತ್ತು. ಸರ್ಕಾರಿ ಪ್ರೆಸ್‌ನಲ್ಲಿ ಸರಿಯಾಗಿ ಕೆಲಸ ಮಾಡುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಇದರಲ್ಲಿ ಪ್ರಿಂಟ್ ತಪ್ಪಾಗಿರುವುದರಿಂದ ತಾವು ಸರಿಪಡಿಸಿಕೊಳ್ಳುತ್ತೀರೆಂದು ತಿಳಿದಿದ್ದೇನೆ. ಸೆಕ್ಷನ್ 6ರ ಪ್ರಾವಿಶೋದಲ್ಲಿ. "discontinue the services of any officer or servant, who in its opinion is not necessary or suitable" ಎಂದಿದೆ ಇದನ್ನು ದಯವಿಟ್ಟು ತೆಗೆದುಹಾಕಿ. ಮನಸ್ವೇಚ್ಛೆ ಆರ್ಬಿಟ್ರರಿ ಪವರ್ಸ್ ಅನ್ನು ಅಮಾಲ್ಗಮೇಟ್ ಆದಂಥ ಸೊಸೈಟಿಗಳಿಗೆ ಅಥವಾ ಗ್ರಾಮ ಪಂಚಾಯಿತಿಗಳಿಗೆ ಕೊಟ್ಟರೆ ಬೇಕಾದವರನ್ನು ತೆಗೆದು ಹಾಕುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಈಗಾಗಲೇ ಸ್ಟೇಟ್ ರಿ-ಆರ್ಗನೈಜೇಶನ್ ಆದಾಗ ಎಷ್ಟು ಲಿಟಿಗೇಶನ್ ಬಂತೋ ಅದರ ಹತ್ತು ಪಟ್ಟುಮೇಲ್ಪಟ್ಟು ಈ ಒಂದು ಅವಕಾಶ ಇಟ್ಟು ಕೊಂಡರೆ ಇರತಕ್ಕಂಥ ಅಧಿಕಾರಿಗಳನ್ನು ತೆಗೆದು ಹಾಕಿ ಬೇರೆಯವರನ್ನು ತರುವುದಕ್ಕೆ ಅಥವಾ ನಾಟ್ ಸೂಟಬಲ್ ಎಂದು ಹೇಳಿ ತೆಗೆದು ಹಾಕಿದರೆ ಆ ಕೆಲಸ ಆಗುವುದಿಲ್ಲ. ಇದರಿಂದ ಜನರಿಗೆ ಬಹಳ ಅನ್ಯಾಯವಾಗುತ್ತದೆ, ಇದನ್ನು ಮಾಡಬಾರದು. ಒಂದು ವೇಳೆ ನೀವು ತೆಗೆದು ಹಾಕುವುದಾದರೆ ಅವರಿಗೆ ಬೇರೆ ಕಡೆ ಎಲ್ಲಾದರೂ ಆಲ್ಟರ್‌ನೇಟೀವ್ ಪ್ರಾವಿಜನ್ ಮಾಡಬೇಕು ಮತ್ತು ಅವರನ್ನು ತೆಗೆದು ಹಾಕುವ ಮೂಲಕ ಅವರಲ್ಲಿ ಒಂದು ರೀತಿಯ ಅತೃಪ್ತಿಯುಂಟಾಗುವುದಕ್ಕೆ ಅವಕಾಶ ಕೊಡಬಾರದು. ಸೂಟಬಲ್ ಎನ್ನುವ ಪದ ಅಗತ್ಯವಿದ್ದರೆ ಮಾತ್ರ ನಾನು ಒಪ್ಪಿಕೊಳ್ಳುತ್ತೇನೆ. ಅದು ಹೆಚ್ಚುವರಿಯಾದಾಗ ತೆಗೆದುಹಾಕಬಹುದು. ಆದರೆ, ನಾಟ್ ಸೂಟಬಲ್ ಎನ್ನುವ ಮಾತನ್ನು ಅವರ ಜ್ಯುರಿಸ್‌ಡಿಕ್ಷನ್‌ಗೆ ಅಥವಾ ಡಿಸ್ಕ್ರಿಷನ್‌ಗೆ ಕೊಡುವುದು ಅಷ್ಟು ಸರಿಯಲ್ಲ. ಆ ಪದ ತೆಗೆದು ಹಾಕಿ

ಯಾರನ್ನು ಬೇಕಾದರೂ ಇಡಬಹುದು, ಯಾರನ್ನು ಬೇಕಾದರೂ ತೆಗೆದು ಹಾಕುವ ಮನಸ್ವೇಚ್ಛೆ ಮಾಡುವ ಕೆಲಸವನ್ನು ಅವರಿಗೆ ಕೊಡಬಾರದು. ಆ ಡಿಸ್ಕ್ರಿಷನರಿ ಪವರ್ಸ್ ಅವರಿಗೆ ಕೊಡಬಾರದೆಂದು ಈ ಸಂದರ್ಭದಲ್ಲಿ ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.• ಅನಂತರ

(7) "All the pending proceedings immediately before the specified date before the existing gramapanchayats shall be deemed to be transferred and continued before the interim gramapanchayats or the amalgamated gramapanchayats as the case may be." ಎಂದು ಹೇಳಿದ್ದೀರಿ. ಅದು ಸರಿ ಹೋಗುವುದಿಲ್ಲ. ಏಕೆಂದರೆ, ಅದೇ ಗ್ರಾಮ ಪಂಚಾಯಿತಿಯಲ್ಲಿ all the proceedings ಎಂದಾಗ ಆ ಗ್ರಾಮ ಪಂಚಾಯಿತಿ ಜ್ಯುರಿಸ್‌ಡಿಕ್ಷನ್‌ನಲ್ಲಿ ಯಾವುದು ತರುತ್ತೀರಲ್ಲ, ಅಮೂಲ್ಗಮೇಟ್ ಮಾಡುತ್ತೀರಲ್ಲ, ಆ ಏರಿಯಾಗೆ ಸಂಬಂಧಪಟ್ಟಿದ್ದು ಮಾತ್ರ ಆಗಬೇಕೇ ಹೊರತು ಆಲ್ ಪೆಂಡಿಂಗ್ ಪ್ರೊಸೀಡಿಂಗ್ಸ್ ಆಗುವುದಕ್ಕೆ ಸಾಧ್ಯವಿಲ್ಲ. ಬೇರೆ ವಿಭಾಗದಲ್ಲಿರುವ ಎಲ್ಲವೂ ಕೂಡ ಸೇರಿದರೂ ಪೆಂಡಿಂಗ್ ಪ್ರೊಸೀಡಿಂಗ್ಸ್ ಆಗುವುದಿಲ್ಲ. All the pending proceedings pertaining to that particular areas which is amalgamated ಅದು ಮಾತ್ರ ಆಗಬೇಕಾಗುತ್ತದೆ, ಇಲ್ಲದಿದ್ದರೆ ಅಭಾಸವಾಗುತ್ತದೆ. ಎಲ್ಲಾ ಪೆಂಡಿಂಗ್ ಪ್ರೊಸೀಡಿಂಗ್ಸ್ ಅನ್ನು ಇಂಟರಿಮ್ ಗ್ರಾಮ ಪಂಚಾಯಿತಿಗಳಿಗೆ ಕಳುಹಿಸಿಕೊಟ್ಟರೆ ಹಳೆಯ ಗ್ರಾಮ ಪಂಚಾಯಿತಿಗಳಲ್ಲಿ ಇದ್ದಂಥ ಕೇಸುಗಳು ಅವರಿಗೆ ಸಂಬಂಧ ಪಡದಿರುವುದೂ ಕೂಡ ಇಲ್ಲಿ ಬರಲು ಅವಕಾಶವಾಗುತ್ತದೆ. ಇದರ ಬಗ್ಗೆ ತಾವು ಸ್ಪಷ್ಟೀಕರಣ ಕೊಡಬೇಕು. ಅನಂತರ, ಒಂಭತ್ತನೆಯದರಲ್ಲಿ." All Prosecutions instituted by or on behalf of the existing gramapanchayats or any officer of that gramapanchayats pending immediately before the specified date shall be continued by or against the interim gramapanchayat or amalgamated gramapanchayat as the case may be". ಎಂದಿದೆ. ಗ್ರಾಮ ಪಂಚಾಯಿತಿಯಲ್ಲಿ ಕ್ರಿಮಿನಲ್ ಪ್ರೊಸೀಡಿಂಗ್ಸ್ ಇರುವುದಿಲ್ಲವೆನ್ನುವುದರ ಬಗ್ಗೆಯೂ ದಯಮಾಡಿ ಕ್ಲಾರಿಫೈ ಮಾಡಬೇಕಾಗುತ್ತದೆ. ಆ ರೀತಿ ಅದನ್ನು ಮಾಡುವುದಕ್ಕೆ ಬರುವುದಿಲ್ಲ. Interim or amalgamated ಬಂದಾಗ pertaining to that area ಮಾತ್ರ ಆಗಬೇಕಾಗುತ್ತದೆ. ಆಲ್ ಎನ್ನುವ ಪದವೇನಿದೆ, ಇದು ಬಹಳ ತಪ್ಪು ಅಭಿಪ್ರಾಯ ಕೊಡುತ್ತದಾದ್ದರಿಂದ ಅಲ್ಲಿಯೂ ಕೂಡ ಕ್ಲಾರಿಫೈ ಮಾಡಬೇಕಾಗುತ್ತದೆ. ಇನ್ನು ಸೆಕ್ಷನ್ 302ರ 'ಎ' ದಲ್ಲಿ "Such member shall cease to be a Member of the Zilla Panchayat or Taluka Panchayat or Grama Panchayat." ಇದು ಕೂಡ ತಪ್ಪು. ಎಲೆಕ್ಟ್ ಆದ ಮೆಂಬರ್ಸ್ 'Ceased to be a Member' ಎಂದು ಹೇಳುವುದು ತಪ್ಪಾಗುತ್ತದೆ. ಆ ಏರಿಯಾದಿಂದ ಬಂದಂಥ ಸದಸ್ಯರು, ಒಂದು ವೇಳೆ ಅಧ್ಯಕ್ಷರಾಗಿದ್ದರೆ ಹಳೆಯ ಗ್ರಾಮ ಪಂಚಾಯಿತಿಯಲ್ಲಿ ಏನಾಗಬೇಕು ಎಂಬುದನ್ನೂ ಯೋಚಿಸಬೇಕಾಗುತ್ತದೆ. Interregnum ಆರು ತಿಂಗಳುಗಳ ಕಾಲ ಮುಂದುವರೆಸಬೇಕೆಂದು ನೀವು ಏನು ಮಾಡಿದ್ದೀರಿ, 'ಬಿ' ನಲ್ಲಿರುವ "Shall cease to be a Member" ಎನ್ನುವುದು ತಪ್ಪಾಗುತ್ತದೆ. ಸೀಜ್ ಯಾವಾಗ ಆಗುತ್ತದೆಂದರೆ

ಒಬ್ಬ ಮೆಂಬರ್ ತನ್ನ ರೆಸಿಗ್‌ನೇಶನ್ ಕೊಟ್ಟಾಗ, ಅಕಸ್ಮಾತ್ ಸತ್ತಾಗ ಅಥವಾ ಅವನನ್ನು ನೋ ಕಾನ್‌ಫಿಡೆನ್ಸ್ ಮೋಶನ್‌ನಲ್ಲಿ ತೆಗೆದಾಗ, ಈ ಮೂರು ಕಾರಣಗಳಲ್ಲಿ ಮಾತ್ರ ಆ ಮೆಂಬರ್ ಸೀಜ್ ಆಗುತ್ತಾನೆಯೇ ವಿನಾ ಬೇರೆ ಕಾರಣಗಳಲ್ಲಿ ಸೀಜ್ ಆಗುವ ಅವಕಾಶ ಮೈನ್ ಆ್ಯಕ್ಟ್‌ನಲ್ಲಿಲ್ಲ. ಆದುದರಿಂದ, ತಾವು ಒಂದು ಕಾರಣ ಕೊಟ್ಟು ಇದರಲ್ಲಿ "Shall cease to be" ಎಂದರೆ ಅದು ಊರ್ಜಿತ ವಾಗತಕ್ಕದ್ದಲ್ಲ, ಆ ಮೆಂಬರ್ ಕಂಟಿನ್ಯೂ ಆಗಬೇಕಾಗುತ್ತದೆ. ಯಾವುದಾದರೊಂದು ಕಡೆ ಹಳೆಯದರಲ್ಲಾಗಲಿ ಹೊಸದರಲ್ಲಾಗಲಿ ಕಂಟಿನ್ಯೂ ಮಾಡಬೇಕಾಗುತ್ತದೆ. ಅದಕ್ಕೆ ತಮಗೆ ಹೇಳಿದ್ದು. ಇಲ್ಲಿ ಒಂದು ಕಡೆ ಸೀಜ್ ಎಂದು ಹೇಳುತ್ತೀರಿ, ಮತ್ತೊಂದು ಕಡೆ ನಾಮಿನೇಟ್ ಮಾಡುವುದಕ್ಕೆ ಅವಕಾಶ ಎಂದು ಹೇಳುತ್ತೀರಿ. "As far as practicable"ಹೇಳುತ್ತೀರಿ, ಆದುದರಿಂದ, ಇವೆರಡೂ ಕೂಡ ಸರಿಯಾದುದಲ್ಲ. ಇಲ್ಲೂ ಕೂಡ ಅವರನ್ನೇ ಕಂಟಿನ್ಯೂ ಮಾಡಬೇಕು, ಈ ಸೆಕ್ಷನ್ ಕೂಡ ಊರ್ಜಿತವಾಗತಕ್ಕದ್ದಲ್ಲವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಅನಂತರ, ಪುಟ ಏಳರಲ್ಲಿ ಮೂರನೆಯದರಲ್ಲಿ ಅನ್‌ಎಕ್ಸ್‌ಪೆಕ್ಟೆಡ್ ಬ್ಯಾಲೆನ್ಸ್ ಹೀಗೆ ಹೇಳಿದ್ದೀರಿ. "Unexpended balance of the fund and all other properties vesting in the existing the Zilla Panchayat or Taluka Panchayat shall be transferred to the zilla panchayat of new district or Taluka Panchayat or the new taluk as the Government by order.." ಇದು ಕೂಡ ತಪ್ಪಾಗುತ್ತದೆ. ಅನ್‌ಎಕ್ಸ್‌ಪೆಕ್ಟೆಡ್ ಬ್ಯಾಲೆನ್ಸ್ ಆಫ್ ದಿ ಫಂಡ್ ಆ ಏರಿಯಾಗೆ ಸಂಬಂಧಪಟ್ಟದ್ದೇ ಹೊರತು ಎಲ್ಲಾ ಆಗುವುದಕ್ಕೆ ಸಾಧ್ಯವಿಲ್ಲ, ಒಂದು ಭಾಗ ಮಾತ್ರ ನೀವು ತೆಗೆದುಕೊಳ್ಳುತ್ತೀರಿ; ಎಲ್ಲಾ ಭಾಗ ಕೂಡ ಅಮಾಲ್ಗಮೇಟ್ ಆಗತಕ್ಕದ್ದಲ್ಲ. ಇಡೀ ತಾಲ್ಲೂಕು ಆದಾಗ ಆ ಪ್ರಶ್ನೆ ಬೇರೆ. ಆದರೆ, ಒಂದು ಭಾಗ ಅನ್‌ಎಕ್ಸ್‌ಪೆಕ್ಟೆಡ್ ಎಂದಾಗ ಉಳಿತಾಯ ಆ ಭಾಗಕ್ಕೆ ಬಂದದ್ದು ಮಾತ್ರವಾಗುತ್ತದೆಯೇ ವಿನಃ ಎಲ್ಲಾ ಪ್ರಾಪರ್ಟಿಗಳು ಕೂಡ ಅವರಿಗೆ ಟ್ರಾನ್ಸ್‌ಫರ್ ಮಾಡುವುದಕ್ಕೆ ಬರುವುದಿಲ್ಲ. ಇದರ ಬಗ್ಗೆಯೂ ತಾವು ಗಮನಹರಿಸಬೇಕಾಗುತ್ತದೆ. ಇದಕ್ಕೆ ಸೂಕ್ತ ಬದಲಾವಣೆ ಅಥವಾ ಇನ್‌ಸ್ಟ್ರಕ್ಷನ್ ಕೊಡಬೇಕಾಗುತ್ತದೆ. ಅದೇ ಪ್ರಕಾರ ಪುಟ 8ರಲ್ಲಿ "All proceedings including appeals, pending before the existing Zilla Panchayat or Taluka Panchayat or any officer immediately before the constitution of the new district or the new taluk and all prosecutions instituted by or on behalf of the existing Zilla Panchayat or Taluka Panchayat or any officer therefore, pending immediately before such constitution shall be continued by or against or disposed off by, the existing Zilla Panchayat or Taluka Panchayat or such officer" ಎಕ್ಸಿಸ್ಟಿಂಗ್ ಎನ್ನುವ ಪದ ತೆಗೆದು ಹಾಕಿ ಕರೆಸ್ಪಾಂಡಿಂಗ್ ಹಾಕಬೇಕು. ಇಲ್ಲಿಯೂ ಸಹ ತಾವು ಸೂಕ್ತ ಬದಲಾವಣೆ ಮಾಡಬೇಕಾಗುತ್ತದೆ. ಎಕ್ಸಿಸ್ಟಿಂಗ್ ಎಂದಾಗ ಹಳೆಯದಾಗುತ್ತದೆಯೇ ಹೊರತು ಹೊಸದು ಆಗುವುದಿಲ್ಲ. ಕರೆಸ್ಪಾಂಡಿಂಗ್ ಬಂದಾಗ ಯಾವುದು ಸೂಕ್ತವಾಗಿ ಬರುತ್ತದೆಯೇ ಅದಕ್ಕೆ ಸಂಬಂಧಪಟ್ಟದ್ದು ಬರುತ್ತದಾದ್ದರಿಂದ ಇದನ್ನೂ ಸಹ ತಾವು ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಂಡ, ಈ ಕ್ಲಾಸ್ ಅನ್ನು ಇನ್ನು ಮುಂದೆ ದಯವಿಟ್ಟು ತರಬೇಡಿ. ಜಿಲ್ಲಾ ಪಂಚಾಯತಿ ಆ್ಯಕ್ಟ್ ಬಗ್ಗೆ ಸಮಗ್ರ

ತಿದ್ದುಪಡಿ ತರುತ್ತಿದ್ದೇವೆಂದು ತಾವು ಏನು ಹೇಳಿದ್ದೀರಿ, ಅದನ್ನು ಇನ್ನು ಏಕೆ ತಂದಿಲ್ಲವೋ ಗೊತ್ತಾಗುತ್ತಿಲ್ಲ. ಅದನ್ನು ತಾವು ತರಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಮಾತನಾಡುವಾಗ ಒಂದು ಅಭಿಪ್ರಾಯ ವ್ಯಕ್ತಪಡಿಸಿದರು. ಅದರ ಬಗ್ಗೆ ಒಂದು ಸ್ಪಷ್ಟೀಕರಣ ಕೇಳಬಯಸುತ್ತೇನೆ. A criminal case cannot be filled against an institution. In my view a criminal case can be filed and institution can be prosecuted.

MR. SPEAKER : Generally, ಈಗ ತಾಲ್ಲೂಕು ಸೊಸೈಟಿ ಇರುತ್ತದೆ, ಎಂಟೈರ್ ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ ಮಾಡಿರುತ್ತಾರೆ, ಕೇಸ್ ಹಾಕುವಾಗ ತಾಲ್ಲೂಕು ಸೊಸೈಟಿ ಮ್ಯಾನೇಜ್‌ಮೆಂಟ್ ಮೇಲೆ ಹಾಕುವುದು. I know the difference.

ಶ್ರೀ ಎಂ.ಪಿ. ಪ್ರಕಾಶ್ : ಸೊಸೈಟಿಯಲ್ಲಿ ಏನಿದೆಯೆಂದರೆ, ಸರ್‌ಚಾರ್ಜ್ ಹಾಕುತ್ತಾರೆ, ಇಡೀ ಬೋರ್ಡ್‌ನ್ನು ಅದಕ್ಕೆ ಜವಾಬ್ದಾರಿಯನ್ನಾಗಿ ಮಾಡಿ.

MR.SPEAKER : He is Familiar with some institutions in Kunigal, ಹಾಗಾಗಿ ಅವರು ಕೇಳಿದರು. ತಾವು ಏಕೆ ಸ್ಪಷ್ಟೀಕರಣ ಕೇಳುತ್ತಿದ್ದೀರೆಂಬುದು ಕೂಡ ನನಗೆ ಗೊತ್ತಿದೆ. ತಾವು ಕೇಳುತ್ತಿರುವುದು ಕುಣಿಗಲ್ ತಾಲ್ಲೂಕು ಸೊಸೈಟಿ ವಿಚಾರ ತಾನೇ?

SRI MUDDUHANUME GOWDA : In my view institutions can also be prosecuted by designation.

+ ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಸ್ವಲ್ಪ ಗಮನಿಸಬೇಕು. ನಮಗೆ ಎರಡು ಅಂಶಗಳ ಬಗ್ಗೆ ಮಾತ್ರ ಒಂದು ರೀತಿಯ ಗೊಂದಲವಾಗುತ್ತದೆ. ಅಧಿಕಾರದಲ್ಲಿ ಯಾರೂ ಶಾಶ್ವತವಲ್ಲ. ಸೆಕ್ಷನ್ 117 'ಬಿ' ಬಗ್ಗೆ ಮಾನ್ಯ ಸದಸ್ಯರಾದ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಮಾತನಾಡುತ್ತಾ ತಮ್ಮ ಗಮನಕ್ಕೆತಂದಂತೆ " ಸಂಯೋಜಿತ ಪಂಚಾಯಿತಿ ಪ್ರದೇಶಕ್ಕಾಗಿ ಡೆಪ್ಯುಟಿ ಕಮೀಷನರ್‌ರಿಂದ ನಾಮ ನಿರ್ದೇಶಿಸಲ್ಪಟ್ಟ ಸದಸ್ಯರುಗಳನ್ನೊಳಗೊಂಡ ಗ್ರಾಮ ಪಂಚಾಯಿತಿಯು (ಈ ಪ್ರಕರಣದಲ್ಲಿ ಇನ್ನು ಮುಂದೆ ಮಧ್ಯಕಾಲೀನ ಗ್ರಾಮ ಪಂಚಾಯತಿಯೆಂದು ಉಲ್ಲೇಖಿಸಲಾಗುವುದು) ರಚಿತವಾಗತಕ್ಕದ್ದು ಮತ್ತು ಅಂಥ ಸದಸ್ಯರುಗಳು, ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಅಸ್ತಿತ್ವದಲ್ಲಿದ್ದ ಗ್ರಾಮ ಪಂಚಾಯಿತಿಗಳ ಸದಸ್ಯರುಗಳಾಗಿರತಕ್ಕದ್ದು" ಎಂದು ಏನು ಹೇಳುತ್ತಿದ್ದೀರಿ, ಅಂದರೆ, ಯಾವುದೇ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಸದಸ್ಯರಲ್ಲದ ನಿಮಗೆ ಬೇಕಾಗಿರುವಂಥ ವ್ಯಕ್ತಿಗಳನ್ನು ಅಲ್ಲಿ ತೂರಿಸುವುದಕ್ಕೆ ಒಂದು ಪ್ರಾವಿಜನ್ ಮಾಡಿಕೊಂಡಿದ್ದೀರಿ. ಅದಕ್ಕೋಸ್ಕರ ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಎನ್ನುವಂಥ ಶಬ್ಧವನ್ನು ತೆಗೆದುಹಾಕಿದರೆ ನಮ್ಮದೇನೂ ಅಭ್ಯಂತರವಿಲ್ಲ. ಎರಡನೆಯದಾಗಿ ಸೆಕ್ಷನ್ 117 (6) ರಲ್ಲಿ ತಿಳಿಸಿರುವುದನ್ನು ತಾವು ಗಮನಿಸಬೇಕು. ಇವೊತ್ತು ಒಬ್ಬ ಅಧಿಕಾರಿಯ ಕೆರಿಯರ್‌ಗೆ ಸೆಕ್ಯೂರಿಟಿ ಇಲ್ಲದಂತಾಗುತ್ತದೆ, ಆತನ ಟೆನ್ಯೂರ್‌ಗೆ

ೖಾರಿಟಿ ಇಲ್ಲದಂತಾಗುತ್ತದೆ. ಏನೆಂದರೆ, "ಪರಂತು, ಡೆಪ್ಯುಟಿ ಕಮೀಷನರ್‌ನ್ನು ಪೂರ್ವ ಂಜೂರಾತಿಗೆ ಒಳಪಟ್ಟು ಮಧ್ಯಕಾಲೀನ ಗ್ರಾಮ ಪಂಚಾಯತಿಯು ಅಥವಾ ಸಂದರ್ಭಾನುಸಾರವಾಗಿ ಯೋಜಿತ ಗ್ರಾಮ ಪಂಚಾಯಿತಿಯು, ಸಂಯೋಜಿತ ಪಂಚಾಯಿತಿಯ ಪ್ರದೇಶದ ಸಂಬಂಧದಲ್ಲಿ ಮ ಪಂಚಾಯತಿಯ ಸೇವೆಗೆ ಯಾವೊಬ್ಬ ಅಧಿಕಾರಿ ಅಥವಾ ನೌಕರನ ಅವಶ್ಯಕತೆಯಿಲ್ಲ ಅಥವಾ ನು ಸೂಕ್ತನಲ್ಲವೆಂದು ಅಭಿಪ್ರಾಯಪಟ್ಟರೆ, ಅಂಥ ಅಧಿಕಾರಿ ಅಥವಾ ನೌಕರನ ಉದ್ಯೋಗದ ಂಧನೆಗಳ ಮೂಲಕ ನೀಡುವಂತೆ ಅಗತ್ಯಪಡಿಸಲಾದಂಥ ನೋಟೀಸನ್ನು ಆತನಿಗೆ ನೀಡಿದ ವಾಯ, ಆ ಅಧಿಕಾರಿ ಅಥವಾ ನೌಕರನ ಸೇವೆಗಳನ್ನು ಮುಂದುವರೆಸದಿರಲು ಸಕ್ಷಮವಾಗಿರತಕ್ಕದ್ದು ತ್ತು ಸೇವೆಗಳನ್ನು ಹಾಗೆ ಮುಂದುವರೆಸದಿರುವ ಪ್ರತಿಯೊಬ್ಬ ಅಧಿಕಾರಿ ಅಥವಾ ನೌಕರನು ಯಾವ ಮ ಪಂಚಾಯತಿಯಲ್ಲಿ ಆತನು ಉದ್ಯೋಗದಲ್ಲಿರುವನೋ ಅದರ ಸೇವೆಯಲ್ಲಿರುವುದು ತುಹೋಗಿರದಿದ್ದರೆ ಹೇಗೋ ಹಾಗೆ ಸೇವೆಯಿಂದ ಅನೂರ್ಜಿತಗೊಳಿಸಿದ ಮೇಲೆ ತೆಗೆದುಕೊಳ್ಳಲು ವಾ ಪಡೆದುಕೊಳ್ಳಲು ಹಕ್ಕುಳ್ಳಂಥ ರಜೆ, ವಿಶ್ರಾಂತಿ ವೇತನ ಮತ್ತು ಉಪದಾನವನ್ನು ಪಡೆಯಲು ಕ್ಕಳ್ಳವನಾಗಿರತಕ್ಕದ್ದು". ಇಲ್ಲಿ ಯಾವುದಾದರೂ ಸಂದರ್ಭದಲ್ಲಿ ಆ ಗ್ರಾಮ ಪಂಚಾಯತಿಯಲ್ಲಿ ಾರೋ ಅಧಿಕಾರದಲ್ಲಿದ್ದಂಥ ಕಾಲದಲ್ಲಿ ಯಾವನೋ ಒಬ್ಬ ಫ್ಯೂನ್ ಅಥವಾ ಮತ್ತೊಬ್ಬ ಿಕಾರಿಯನ್ನು ತೆಗೆದುಕೊಂಡಿದ್ದರೂ ಪಂಚಾಯತಿ ಬದಲಾವಣೆಯಾದಾಗ ರಾಜಕೀಯ ಸೇಡು ರಿಸಿ ಕೊಳ್ಳುವುದಕ್ಕೆ ಆತ ಒಬ್ಲೈಜ್ ಮಾಡಲಿಲ್ಲವೆನ್ನುವ ಕಾರಣಕ್ಕೆ ಆತನನ್ನು ಯಾವುದೇ ಮಯದಲ್ಲಾದರೂ ಕಿತ್ತುಹಾಕಬಹುದು, ಇದರಿಂದಾಗಿ ಆತನ ಟೆನ್ಯೂರ್‌ಗೆ ಸಮಸ್ಯೆಯಾಗುತ್ತದೆ. ತನ ಒಂದು ನೌಕರಿ ಖಾಯಂ ಇಲ್ಲವೆನ್ನುವಂಥ ಪರಿಸ್ಥಿತಿ ಉದ್ಭವವಾಗುತ್ತದೆ. ಇದು ಈಗಾಗಲೇ ಮ್ಮ ಕಾನೂನಿನಲ್ಲಿದೆ. ಯಾವುದೇ ಒಂದು ಸಂದರ್ಭದಲ್ಲಿ ತಪ್ಪು ಮಾಡಿದರೆ ಕಾನೂನಿನಂತೆ ನೋಟೀಸ್ ಟ್ಟು ಕ್ರಮ ಕೈಗೊಳ್ಳುವುದಕ್ಕೆ ಇಲ್ಲಿ ಒಂದು ಪ್ರಾವಿಜನ್ ತಾವು ಇಟ್ಟುಕೊಂಡಿರುವುದರಿಂದ, ಯಾರನ್ನು ಮಕ ಮಾಡಿಕೊಂಡಿರುತ್ತಾರೋ ಅವರನ್ನು ಖುಷಿ ಬಂದಾಗ ತೆಗೆಯಬಹುದು.

ಅಧ್ಯಕ್ಷರು : ಇದು ತಮಗೂ ಗೊತ್ತಿದೆ. ಊರುಗಳಲ್ಲಿ ರಾಜಕೀಯ ಕಾರಣಗಳಿಗಾಗಿ ವಾಟರ್‌ಮನ್ ವರನ್ನು ನೇಮಕ ಮಾಡಿಕೊಂಡಿರುತ್ತಾರೆ. ಈಗ ಆ ಪಕ್ಷ ಇರುವುದಿಲ್ಲವೆಂದು ಇಟ್ಟುಕೊಳ್ಳೋಣ. ಬ್ಬದ ದಿವಸ ಆತ ಬೇಕೆಂತಲೇ ನೀರು ಬಿಡುವುದಿಲ್ಲವೆನ್ನುತ್ತಾನೆ, ಆತನನ್ನು ಯಾರೂ ಮುಟ್ಟುವಂತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ಪುರಸಭೆಯಿದೆ, ನಗರಸಭೆಗಳನ್ನು ನಾವು ನಡೆಸುತ್ತಿದ್ದೇವೆ, ನೂನು ರೀತ್ಯ ಕ್ರಮ ಕೈಗೊಳ್ಳಲು ಈಗಲೂ ಅವಕಾಶವಿದೆ.

ಅಧ್ಯಕ್ಷರು : ಗ್ರಾಮ ಪಂಚಾಯತಿಗಳಲ್ಲಿ ಕೆಲವು ಕಡೆ ನಮಗೆ ಏನು ಕಷ್ಟವಾಯಿತೆಂದರೆ ನೆಗೆ ಅವರ ಹತ್ತಿರ ನಾವು ಮಾಡಿಕೊಂಡ ಎಲ್ಲಾ ಮನವಿಗಳು ವಿಫಲವಾಗಿ ಹಬ್ಬ ಹರಿದಿನಗಳಲ್ಲಿ ತ್ತು ಮುಖ್ಯವಾದ ದಿನಗಳಲ್ಲಿ ನೀರು ಬಿಡಿಸಬೇಕಾಗಿದ್ದರೆ ನಾವು ಪೋಲೀಸರನ್ನು ಕಳುಹಿಸಿ ನೀರು ಡಿಸುವ ವ್ಯವಸ್ಥೆ ಮಾಡಿಸಿದೆವು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದೇ ಸಮಸ್ಯೆಯನ್ನು ಇವೊತ್ತು ನಾವು ಪುರಸಭೆ ನಗರಸಭೆಗಳಲ್ಲಿ ಮರಿಸುತ್ತಿದ್ದೇವೆ. ಇಲಾಖೆಗಳಲ್ಲಿ ಬಿಗಿ ತಪ್ಪಿದಾಗ ಆತ ಖುಷಿ ಬಂದಾಗ ಬರುತ್ತಾನೆ, ಖುಷಿ ಬಂದಾಗ

ಹೋಗುತ್ತಾನೆ, ಆತ ನನ್ನ ಕೆಲಸ ಮಾಡುವುದಿಲ್ಲ. ಇಲ್ಲಿಯೂ ಸಹ ಆ ರೀತಿಯ ಪರಿಸ್ಥಿ ಬರುವುದಿಲ್ಲವೆಂದು ನಾನು ಹೇಳುವುದಿಲ್ಲ. ಆತನ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವುದ ಈಗಿರುವ ಕಾನೂನಿನಲ್ಲಿ ಅವಕಾಶವಿದೆ. ಯಾವುದೇ ಸರ್ಕಾರಿ ನೌಕರನಿರಬಹುದು. ಆದರೆ, ಅದ ಸಂಬಂಧಿಸಿದಂತೆ ಅದನ್ನು ಇಲ್ಲಿ ತರುವಂಥ ಅಗತ್ಯವಿರಲಿಲ್ಲ.

ಶ್ರೀ ಎಂ.ಪಿ.ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಇದರಲ್ಲಿ ನಾನು ಪದೇ ಪದೇ ಪ್ರವೇ ಮಾಡಬೇಕೆನ್ನುವ ಪ್ರಶ್ನೆಯಲ್ಲ. ಈಗ ಸೇವಾ ನಿಯಮಾವಳಿಗಳನ್ನು ರಚನೆ ಮಾಡುತ್ತಿರತಕ್ಕಂಥಾ ಈಗಿರುವ ಸಂದರ್ಭದಲ್ಲಿ ಒಬ್ಬ ಅಧಿಕಾರಿ ಆತ ಗ್ರಾಮ ಪಂಚಾಯತಿಯ ಅಧಿಕಾರಿಯಾಗಿರುತ್ತಾನೆಯೆ ವಿನಹಃ ಸರ್ಕಾರದ ಅಧಿಕಾರಿಯೇನಲ್ಲ. ಕಾರ್ಯದರ್ಶಿಯೊಬ್ಬರು ಮಾತ್ರ ಸರ್ಕಾರ ಅಧಿಕಾರಿಯಾಗಿದ್ದು, ಗ್ರಾಮ ಪಂಚಾಯತಿ ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಈಗಲ ಕೂಡ ಗ್ರಾಮ ಪಂಚಾಯತಿಗೆ ಅಧಿಕಾರವಿದೆ. ಎರಡು ಅಥವಾ ಮೂರು ಸಂಕೀರ್ಣವಾಗಿರು ಗ್ರಾಮ ಪಂಚಾಯತಿಗಳು ಇದ್ದಂಥ ಸಂದರ್ಭದಲ್ಲಿ ಅವರು ಸೇವಾ ನಿಯಮಾವಳಿ ರೀತ್ಯಾ ನೋಟೀಸ ಕೊಟ್ಟು ಕ್ರಮ ಕೈಗೊಳ್ಳಬೇಕು. ಆತನ ಸೇವೆ ಅಗತ್ಯವಿದೆಯೇ? ಅಥವಾ ಸೂಕ್ತವಾದದ್ದೇ? ಎಂಬುದ ಬಗ್ಗೆ ಚರ್ಚಿಸಿ ಕ್ರಮ ಕೈಗೊಳ್ಳಲು ಆತನಿಗೆ ನೋಟೀಸ್ ಕೊಡಬೇಕೆನ್ನುವ ವಿಚಾರ ಕೂಡ ಇದ ನ್ಯಾಚುರಲ್ ಜಸ್ಟೀಸ್ ಇದ್ದು ನಿಯಮಾವಳಿ ಪ್ರಕಾರ ಕ್ರಮ ಕೈಗೊಳ್ಳಬೇಕೇ ವಿನಹ ಆತ ಒ ನಿರಂಕುಶ ಪ್ರಭು ಎನ್ನುವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಡಿ.ಸಿ. ಯವರು ನಾಮ ನಿರ್ದೇಶನ ಮಾಡುವಂಥ ಕಾಲದ ಆ ಪಂಚಾಯತಿ ಸದಸ್ಯರಲ್ಲದವರನ್ನು ಮಾಡುವುದಕ್ಕೆ ನೀವೇಕೆ ಪ್ರಾವಿಜನ್ ಮಾಡಿ ಕೊಳ್ಳುತ್ತಿದ್ದೀರಿ

ಶ್ರೀ ಎಂ.ಪಿ. ಪ್ರಕಾಶ್: ಮುಖ್ಯವಾಗಿರತಕ್ಕ ಪ್ರಶ್ನೆಯೇನೆಂದರೆ, ಈಗಿರುವ ಕಾನೂನಿನೊಳ ಈ ರೀತಿಯಾಗಿ 2-3 ಪಂಚಾಯತಿಗಳು ಏಕೀಭವಿಸಿದಂಥ ಸಂದರ್ಭಗಳಲ್ಲಿ ಅವರನ್ನು ಆಡಳಿತಾಧಿಕಾ ನೇಮಕ ಮಾಡಿಕೊಳ್ಳಬೇಕೆಂದು ಈಗಿರುವ ಕಾಯಿದೆಯಲ್ಲಿದೆ. ಆದರೆ, ಇದು ಅಧಿಕಾರ ವಿಕೇಂದ್ರೀಕರಣ ತತ್ವಕ್ಕೆ ವಿರುದ್ಧವಾಗುತ್ತದೆನ್ನುವ ಕಾರಣಕ್ಕೆ ಇಲ್ಲಿರತಕ್ಕ ಸದಸ್ಯರುಗಳನ್ನೇ ನೇಮಕ ಮಾಡಬೇಕು, "a far as possible" ಎನ್ನುವ ಶಬ್ಧ ಅವರು ಅಮಾಲ್ಗಮೇಟೆಡ್ ಗ್ರಾಮ ಪಂಚಾಯತಿಯಲ್ಲಿ ಸದಸ್ಯರಾ ಕೆಲಸ ಮಾಡಲು ಇಷ್ಟವಿಲ್ಲವೆಂದು ಹೇಳಬಹುದು. ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಈ ಪ್ರಶ್ನೆ ಎತ್ತಿದಾಗ ನಾವು ಇಲ್ಲಿ ತಂದಿರುವುದೇನೆಂದರೆ, 2-3 ಗ್ರಾಮ ಪಂಚಾಯತಿಗಳ ಎಲ್ಲಾ ಸದಸ್ಯರುಗಳನ್ನು ಸೇರಿಸುವುದಾಗಿದ್ದರೆ ಅಧ್ಯಕ್ಷರ, ಉಪಾಧ್ಯಕ್ಷರ ಸಂಖ್ಯೆ ಎಷ್ಟಾಗುತ್ತದೆ? ಮೀಸಲಾತಿ ಆಧಾರದ ಮೇಲೆ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರುಗಳನ್ನು ಮಾಡಿದಾಗ ಎಷ್ಟು ಜನರಿಗೆ ಮೀಸಲಾತಿ ಕಲ್ಪಿಸಬೇಕಾಗುತ್ತದೆ? ಈ ಕಾರಣವಿರುವುದರಿಂದ ಆರು ತಿಂಗಳೊಳಗೆ ಚುನಾವಣೆಗಳನ್ನು ನಡೆಸುವುದು ಮತ್ತು ಅಲ್ಲಿರುವಂಥ ಸದಸ್ಯರುಗಳನ್ನೇ ಸಾಧ್ಯವಾದಷ್ಟು ಮಟ್ಟಿಗೆ ನೇಮಕಾತಿ ಮಾಡುವಂಥಾದ್ದೆಂದು ಹೇಳಬಯಸುತ್ತೇನೆ. ಈ ತರಹದ ದೃಷ್ಟಿ ಇದೆಯೇ ವಿನಃ ಆಡಳಿತಾಧಿಕಾರಿಯನ್ನು ನೇಮಕ ಮಾಡುವುದಕ್ಕಿಂತಲೂ ಬಹಳ ಮುಖ್ಯವಾಗಿ ಉಳಿದಿರತಕ್ಕಂಥ ಕಾನೂನು ಮತ್ತು ಜಿಲ್ಲಾಧಿಕಾರಿಗಳಿಗೆ

ಇಲ್ಲಿ ಅರ್ಥ ವ್ಯಾಪಿಸುವುದು ಅಲ್ಲಿರುವಂಥ ಸದಸ್ಯರನ್ನೇ ನೇಮಕಾತಿ ಮಾಡಬೇಕಾಗುತ್ತದೆ. ಇಲ್ಲದೆ ಹೋದರೆ ನಮ್ಮ ಮೀಸಲಾತಿಗೆ ಅರ್ಥವಿಲ್ಲದಂತಾಗುತ್ತದೆ. ಅಥವಾ ಎರಡು-ಮೂರು ಅಧ್ಯಕ್ಷರು, ಉಪಾಧ್ಯಕ್ಷರುಗಳಿರುವಂಥ ಸಂಭವಗಳು ಬರುವುದರಿಂದ, ಚುನಾಯಿತ ಸದಸ್ಯರುಗಳು ಹೆಚ್ಚಾಗುವ ಸಂಭವವಿರುವುದರಿಂದ ಅಮಾಲ್ಗಮೇಟ್ ಆಗಿರುವ ಗ್ರಾಮ ಪಂಚಾಯತಿಗಳನ್ನು ವಿಭಜನೆ ಮಾಡಿ ಸೆಕ್ಷನ್ 4(1)ರ ಕೆಳಗೆ ಅರ್ಜಿಗಳು ಬಂದಿವೆಯೇ ವಿನಃ ಇವೆಲ್ಲವನ್ನೂ ಸೇರಿಸಿ ಒಂದು ಗ್ರಾಮ ಪಂಚಾಯತಿ ಮಾಡಿ ಎನ್ನುವಂಥ ಪ್ರಶ್ನೆಯಲ್ಲ. ಈ ವಿಚಾರಗಳನ್ನು ಮನಗಂಡೇ ಹಿಂದಿನ ಮಂಡಲ್ ಪಂಚಾಯತಿ, ಜಿಲ್ಲಾ ಪಂಚಾಯತಿ ಮತ್ತು ನ್ಯಾಯ ಪಂಚಾಯತಿಗಳ ಕಾನೂನು, 1987ರಲ್ಲಿ ಹತ್ತು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆಯಿಲ್ಲದಂಥ ಮಂಡಲ ಪಂಚಾಯತಿಗಳಿದ್ದವು ಆದರೆ, ಹಿಂದಿನ ಸರ್ಕಾರ ತನ್ನದೇ ಕಾರಣಗಳಿಗಾಗಿ ಅದನ್ನು ಸಣ್ಣ-ಸಣ್ಣ ಗ್ರಾಮ ಪಂಚಾಯಿತಿಗಳನ್ನಾಗಿ ಪರಿವರ್ತನೆಗೊಳಿಸಿದೆ. ಈಗ ಎಲ್ಲಾ ಗ್ರಾಮ ಪಂಚಾಯಿತಿಗಳನ್ನು ಸೇರಿಸಿ ಗ್ರಾಮ ಪಂಚಾಯತಿ ಮಾಡಿ ಎಂದು ಹೇಳುವಂಥ ಯಾವುದೇ ಮನವಿಗಳು ಸರ್ಕಾರದ ಮುಂದಿಲ್ಲ. ಆದರೆ, ಗ್ರಾಮ ಪಂಚಾಯತಿಗಳನ್ನು ಒಡೆದು ಬೇರೆ ಬೇರೆ ಗ್ರಾಮಗಳನ್ನಾಗಿ ಮಾಡಬೇಕೆನ್ನುವ ವಿಚಾರವಿದೆ. ಆದರೂ ಕೂಡ ಯಾವುದಾದರೊಂದು ಕಾನೂನನ್ನು ರಚನೆ ಮಾಡುವಾಗ ಮುಂದೆ ಇಂತಹ ಸಂಭವನೀಯ ಬೇಡಿಕೆಗಳು ಬರಬಹುದೆನ್ನುವ ಕಾರಣಕ್ಕಾಗಿ ಈ ಒಂದು ತಿದ್ದುಪಡಿಯನ್ನು ನಾವು ತಂದಿದ್ದೇವೆ.

ಡಾ|| ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೆ, ಈ ಸೆಕ್ಷನ್‌ಗೆ ಸಂಬಂಧಿಸಿದಂತೆ, "There shall be constituted for the amalgamated panchayat area a Grama Panchayat (here -inafter in this section referred to as in terim Grama Panchayat) consisting of members nominated by the Deputy Commissioner and such members shall as far as may be practicable..“ ಎಂದು ಹೇಳಿದೆ. ಎಲ್ಲರನ್ನೂ ಕೂಡ ಏಕೆ ನಾಮಿನೇಟ್ ಮಾಡಬಾರದು? Why do you restrict the number? ಯಾರು ಎರಡು ಅಮಾಲ್ಗಮೇಟೆಡ್ ಗ್ರಾಮ ಪಂಚಾಯತಿಗಳಲ್ಲಿದ್ದಾರೋ ಅವರೆಲ್ಲರನ್ನೂ ಕೂಡ ನಾಮಿನೇಟ್ ಮಾಡುವುದಕ್ಕೆ ಏಕೆ ತಿದ್ದುಪಡಿ ತರಬಾರದು? They shall continue as Members of the Grama Panchayat ಅದ್ಯಕ್ಷರು ಮತ್ತು ಉಪಾಧ್ಯಕ್ಷರ ಬಗ್ಗೆ ಮುಂದಿನ ಸೆಕ್ಷನ್‌ನಲ್ಲಿ ಹೇಳಿದ್ದೀರಿ. The Adhyaksha and Upadhyaksha of the interim Grama Panchayat shall be elected in the manner provided in the Act.“ ಹಾಗಾಗಿ, ಎರಡು ಅಧ್ಯಕ್ಷರುಗಳಿರುವಂಥ ಪ್ರಮೇಯ ಬರುವುದಿಲ್ಲ, ಅವರು ಪಂಚಾಯತಿಯ ಸದಸ್ಯರಾಗಿ ಮುಂದುವರಿಯುತ್ತಾರೆ ಮತ್ತು ಅಧ್ಯಕ್ಷರು ಉಪಾಧ್ಯಕ್ಷರನ್ನು ಹೊಸದಾಗಿ ಆರಿಸುತ್ತಾರಷ್ಟೇ. Why do you provide a power to the Deputy Commissioner to nominate a few people? Why don't you continue the entire body as such? ಎರಡು ಪಂಚಾಯತಿಗಳಲ್ಲಿರುವಂಥ ಎಲ್ಲಾ ಸದಸ್ಯರುಗಳನ್ನು ಮುಂದುವರೆಸುವುದಕ್ಕೆ ಏಕೆ ಪ್ರಾವಿಜನ್ ಮಾಡಬಾರದೆಂದು ಕೇಳುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ : ತಮಗೆ ಈಗಾಗಲೇ ಮನವರಿಕೆಯಾದಂತೆ, ತಮ್ಮ ಅನುಭವಕ್ಕೆ ಬಂದಂತೆ ಒಂದು ಚಿಕ್ಕ ಗ್ರಾಮ ಪಂಚಾಯತಿಯ ಸಂದರ್ಭದಲ್ಲಿ ಅಲ್ಲಿಯ ಮತದಾರರ ಸಂಖ್ಯೆ ಕಡಿಮೆ ಇದ್ದು ದೊಡ್ಡ ಗ್ರಾಮ ಪಂಚಾಯತಿ ಬಂದಾಗ ಪಂಚಾಯತಿ ಮತದಾರರ ಸಂಖ್ಯೆ ಹೆಚ್ಚಿರುತ್ತದೆ. ಈಗ 3-4 ಗ್ರಾಮ ಪಂಚಾಯತಿಗಳು ಏಕೀಭವಿಸಿ ಸಂಕೀರ್ಣಗೊಂಡಂಥ ಒಂದು ಗ್ರಾಮ ಪಂಚಾಯತಿಯಲ್ಲಿ ಚಿಕ್ಕ ಗ್ರಾಮ ಪಂಚಾಯತಿಯಲ್ಲಿದ್ದಂಥ ಹದಿನೈದು ಜನ ಸದಸ್ಯರು, ಮೂರು ಗ್ರಾಮ ಪಂಚಾಯತಿಗಳು ಸೇರಿದಾಗ 45 ಜನ ಸದಸ್ಯರುಗಳಾಗುವ ಸಂಭವವಿರುವುದರಿಂದ ಆ ಕಾರಣಗಳಿಗಾಗಿ ಸದಸ್ಯರುಗಳನ್ನು ನೇಮಕಾತಿ ಮಾಡುವಾಗ ಜಿಲ್ಲಾಧಿಕಾರಿ ಸಾಧ್ಯವಾದಷ್ಟು ಮಟ್ಟಿಗೆ ಅವರನ್ನೇ ನೇಮಕ ಮಾಡಬೇಕೆಂಬ ಉದ್ದೇಶಕ್ಕಾಗಿ ಮಾಡಿದ್ದು.

DR|| M.P. KARKI : This arrangement is only for six months. ಆರು ತಿಂಗಳು ಇಂಟೆರಿಮ್ ಅರೇಂಜ್‌ಮೆಂಟ್ ಇರುತ್ತದಷ್ಟೇ ಅಷ್ಟೇ ಆಗಿದ್ದಾಗ ಅದನ್ಯಾಕೆ ಹಾಕುತ್ತಾರೆ? They will nominate only a few persons.

SRI M.P. PRAKASH : You cannot crowd the entire meeting in that fashion by putting 40-45 members of all the Grama Panchayats. There should be some reasonableness in the number of members also.

ಶ್ರೀ ಜೆ.ಸಿ. ಮಾಧುಸ್ವಾಮಿ : ಅಮಾಲ್ಗಮೇಶನ್ ಬೇರೆ, ಪಾರ್ಟಿ ಬಿಟ್ಟು ಹೋಗುವುದೇ ಬೇರೆ, ಇದರಲ್ಲಿ ತಾವು ಎರಡು ಭಾಗಗಳನ್ನು ಮಾಡಿಕೊಳ್ಳಬೇಕು. ಕೊನೇ ಪಕ್ಷ ಒಂದೆರಡು ಹಳ್ಳಿಯೊಳಗೆ ಹೋಗುವವರನ್ನಾದರೂ ಮುಂದುವರೆಸಬಹುದು, subject to expiry of their term.

ಶ್ರೀ ಎಂ.ಪಿ. ಪ್ರಕಾಶ್ : ಈ ವಿಚಾರದಲ್ಲಿ ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ನಮ್ಮನ್ನು ಅಭಿನಂದಿಸಬೇಕಾಗಿತ್ತು. ಅವರ ಎರಡನೇ ಪ್ರಶ್ನೆಗೆ ಉತ್ತರಿಸುವುದಾದರೆ, ಯಾವುದಾದರೂ ಗ್ರಾಮ ಅಥವಾ ನಗರಪ್ರದೇಶಕ್ಕೆ ಅಧಿಸೂಚನೆ ಮೂಲಕ ಸೇರಲ್ಪಟ್ಟಿದ್ದರೆ ಅಲ್ಲಿರತಕ್ಕ ಸದಸ್ಯರೇ ಮುಂದುವರಿದಿದ್ದಾರೆ. ಅಲ್ಲೋಬ್ಬರು ಮುನಿಸಿಪಾಲಿಟಿಗಾಗಿ, ನಗರಸಭೆಗಾಗಿ ಆಯ್ಕೆಯಾಗಿರುವವರು, ತಾಲ್ಲೂಕು ಪಂಚಾಯತಿಯಲ್ಲೂ ಆಯ್ಕೆಯಾಗಿರುವವರು ಕೂಡ ಮುಂದುವರೆದಿದ್ದಾರೆ. ಅದೂ ಕೂಡ ಎಲ್ಲಾ ಮಾನ್ಯ ಸದಸ್ಯರ ಬೇಡಿಕೆ ಮೇರೆಗೆ ಮತ್ತು ಅವರೆಲ್ಲರ ಒತ್ತಡದ ಮೂಲಕ. ಗ್ರಾಮ ಪಂಚಾಯಿತಿಗಳನ್ನು ನಗರಸಭೆಗಳನ್ನಾಗಿ ಪರಿವರ್ತಿಸುವಂಥ ಸಂದರ್ಭದಲ್ಲಿ ಅನೇಕರು ಸಂತೋಷ ಪಟ್ಟಿಲ್ಲ. ನಗರಸಭೆಗಳ ಆರ್ಥಿಕ ಪರಿಸ್ಥಿತಿ ಸರಿಯಿಲ್ಲದಿರುವುದರಿಂದ ಅಭಿವೃದ್ಧಿ ಕಾರ್ಯಗಳು ಕುಂಠಿತ ಗೊಳ್ಳುತ್ತವೆ. ಗ್ರಾಮೀಣ ಪಂಚಾಯತಿಗಳಲ್ಲಾದರೆ ಅದಕ್ಕೆ ಲಭ್ಯವಿರುವ ಗ್ರಾಮೀಣಾ ಅಭಿವೃದ್ಧಿಯು ಎಲ್ಲಾ ಹಣವನ್ನು ಒದಗಿಸುತ್ತದೆ. ಆಕಾರಣದಿಂದ ಕನಿಷ್ಟ ಪಕ್ಷ ಅರ್ಧ ಆಗಿರತಕ್ಕ ಕಾರ್ಯಕ್ರಮಗಳನ್ನಾದರೂ ಮುಂದುವರೆಸಬಹುದು. ಈಗ ಇಂದಿರನಿವಾಸನಲ್ಲಿ ತೆಗೆದುಕೊಂಡಿರತಕ್ಕ ಮನೆಗಳೇ ಇರಬಹುದು, ಅಥವಾ ಚರಂಡಿ ವ್ಯವಸ್ಥೆ ಮಾಡಲಾದಂತಹ ಗ್ರಾಮೀಣಾ ಪ್ರದೇಶದ ದುರಸ್ಥಿ ಕೆಲಸಕಾರ್ಯಗಳಿಗೆ ಜೆಆರ್‌ವೈಯಿಂದ ಮತ್ತು ಇಎಸ್ ಮೂಲಕ ಮಾಡಿರುವಂತಹ ಕಾರ್ಯಕ್ರಮಗಳಿರಬಹುದು. ಅವುಗಳನ್ನು

ಈ ಮೂಲಕ ಮುಂದುವರೆಸಬಹುದು. ಇನ್ನು ಮೇಲೆ ಮುಂದುವರೆಸಲಿಕ್ಕೆ ಸಾಧ್ಯವಿಲ್ಲ. ಅಂದರೆ ಸಂಪೂರ್ಣವಾಗಿರತಕ್ಕ ಪ್ರದೇಶಗಳು ಇದರಲ್ಲಿ ವಿಲೀನಗೊಳ್ಳುತ್ತವೆ. ಆದರೆ ಒಂದೆರಡು ಪ್ರತ್ಯೇಕವಾಗಿರತಕ್ಕ ಸಂದರ್ಭದಲ್ಲಿ ಅವರು ಪ್ರತ್ಯೇಕವಾದ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಸನ್ಮಾನ್ಯ ಅಧ್ಯಕ್ಷರೆ, ಪೇಜ್ ನಂ. 2, 117 'ಎ' ಪಂಚಾಯಿತಿ ಪ್ರದೇಶದ ಸಂಯೋಜನೆಯ ಪರಿಣಾಮದಲ್ಲಿ ತಾವು ಇಲ್ಲಿ ಹೇಳಿದ್ದೀರಿ, ಸ್ಥಳೀಯ ಪ್ರದೇಶಗಳ ಗ್ರಾಮಪಂಚಾಯತಿಗಳ ಪ್ರಕರಣದಲ್ಲಿ ಇನ್ನು ಮುಂದೆ, ಅಸ್ತಿತ್ವದಲ್ಲಿರುವ ಗ್ರಾಮ ಪಂಚಾಯಿತಿಗಳ ಪ್ರಕರಣದಲ್ಲಿ ಇನ್ನು ಮುಂದೆ, ಅಸ್ತಿತ್ವದಲ್ಲಿರುವ ಗ್ರಾಮ ಪಂಚಾಯತಿಗಳೆಂದು ಉಲ್ಲೇಖಿಸಲಾಗುವುದು. ಅಸ್ತಿತ್ವದಲ್ಲಿರತಕ್ಕವು ನಿಂತು ಹೋಗತಕ್ಕದ್ದು, ಮತ್ತು ಇಂತಹ ಗ್ರಾಮಪಂಚಾಯಿತಿಗಳಲ್ಲಿ ಎಲ್ಲಾ ಸದಸ್ಯರ ಹುದ್ದೆಗಳನ್ನು ತೆರವು ಮಾಡತಕ್ಕದ್ದು, ಎನ್ನುವಂಥ ಮಾತನ್ನು ತಾವು ಹೇಳಿದ್ದೀರಿ. ಗ್ರಾಮಪಂಚಾಯಿತಿಯ ಚುನಾವಣೆ ನಡೆದ ತಾರೀಖಿನಿಂದ ಇಲ್ಲಿಯವರೆಗೆ ಮೀಸಲಾತಿ ನಿಯಮದ ಮೇರೆಗೆ ಅಸ್ತಿತ್ವಕ್ಕೆ ಬರದೇ ಇರತಕ್ಕಂಥ ಪಂಚಾಯತಿಗಳ ಮೇಲೆ ಏನು ಕ್ರಮವನ್ನು ಕೈಗೊಂಡಿದ್ದೀರಿ?

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ನೇರವಾಗಿ ತಿದ್ದುಪಡಿಗೆ ಸಂಬಂಧ ಇಲ್ಲದಂಥದ್ದು, ಆದರೆ ಅವರ ಅನುಭವಕ್ಕೆ ಬಂದಿರತಕ್ಕ ಒಂದು ವಿಚಾರವನ್ನು ಈ ಪ್ರಕರಣದಲ್ಲಿ ಅವರು ಎತ್ತಿದ್ದಾರೆ. ಅವರು ಹೇಳತಕ್ಕದ್ದು, ಒಂದು ಮೀಸಲಾತಿಯನ್ನು ಪರಿಶಿಷ್ಟ ಜನಾಂಗದ ಅಧ್ಯಕ್ಷನಿಗೆ ಮೀಸಲಾಗಿರುವ ಗ್ರಾಮಪಂಚಾಯತ್ ಇದೆ ಎನ್ನುವುದನ್ನು ಅವರು ಪ್ರಾಸಂಗಿಕವಾಗಿ ಪ್ರಸ್ತಾಪ ಮಾಡಿದ್ದಾರೆ. ಒಂದು ಆ ಕ್ಷೇತ್ರ ಅಸ್ತಿತ್ವಕ್ಕೆ ಬಂದಿದೆ ಎಂದಾಗ ಮಾತ್ರ ಮೀಸಲಾತಿ ಅಧ್ಯಕ್ಷರ ಸ್ಥಾನಕ್ಕೆ ಬರುತ್ತದೆ. ಆದುದರಿಂದ ಅಲ್ಲಿ ಏನಾಗಿದೆ ಎನ್ನುವುದನ್ನು ಪ್ರತ್ಯೇಕವಾಗಿ ನನ್ನ ಗಮನಕ್ಕೆ ತನ್ನಿ. ಅದನ್ನು ನಾನು ಸರಿಪಡಿಸುತ್ತೇನೆ. ಒಂದು ವೇಳೆ ಅಸ್ತಿತ್ವಕ್ಕೆ ಬಂದು ಚುನಾವಣೆ ಆಗದೆ ಇದ್ದರೆ, ಅಲ್ಲಿ ಚುನಾವಣೆ ನಡೆಸುವುದಕ್ಕೆ ಆದೇಶವನ್ನು ಕಳುಹಿಸಿಕೊಡುತ್ತೇವೆ. ಒಂದು ವೇಳೆ ಪಂಚಾಯತ್ ಅಸ್ತಿತ್ವಕ್ಕೆ ಬಂದಿರದಿದ್ದರೆ, ಅಲ್ಲಿ ಚುನಾವಣೆ ಆಗದಿದ್ದ ವಿಚಾರವನ್ನು ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕರ ಗಮನಕ್ಕೆ ತಂದು ಅವರಿಂದ ವರದಿಯನ್ನು ತರಿಸಿಕೊಡುತ್ತೇವೆ. ತಮ್ಮ ಕ್ಷೇತ್ರದಲ್ಲಿ ಆಗಿರುವಂಥ ಪ್ರಕರಣವನ್ನು ನಮಗೆ ಬರೆದು ಕಳುಹಿಸಿ. ನಾವು ಅದರ ಬಗ್ಗೆ ನಿರ್ದಿಷ್ಟ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಕೆ.ಎನ್. ಪುಟ್ಟಣ್ಣಯ್ಯ : ಪಂಚಾಯತ್ ವಿಕೇಂದ್ರೀಕರಣದ ಮೂಲಕ ಪಂಚಾಯತ್‌ಗೆ ಅತ್ಯಂತ ಶಕ್ತಿ ಕೊಡುತ್ತೇವೆ ಎಂದು ಹೇಳಿದ್ದೀರಿ. ವಾಟರ್ ಮನ್ ಹುದ್ದೆಗಳನ್ನು ನಿಯಮಾವಳಿಗಳ ಪ್ರಕಾರ ನೇಮಕಾತಿ ಮಾಡಿಕೊಂಡರೂ ಅವರು ಕೆಲಸ ಮಾಡುತ್ತಿಲ್ಲ. ಕರ್ನಾಟಕದಲ್ಲಿ ಸುಮಾರು ಹತ್ತು ಸಾವಿರ ಮಿನಿ ವಾಟರ್ ಸಪ್ಲೈ ಮತ್ತು ಹತ್ತು ಸಾವಿರ ಓವರ್ ಹೆಡ್ ಟ್ಯಾಂಕ್ ಇದ್ದು, ಒಂದು ಗ್ರಾಮದಲ್ಲಿ ಐದು ಸಾವಿರ ಜನವಿದ್ದು, ಇವತ್ತು ಒಬ್ಬ ವಾಟರ್ ಮನ್ ಅನ್ನು ಅಪಾಯಿಂಟ್ ಮಾಡಿದರೂ ಕೂಡ ಅದರ ಮೂಲಕ ನೀರು ಕೊಡದೆ ಇರತಕ್ ಪರಿಸ್ಥಿತಿ ಬಂದಿದೆ. ಪಂಚಾಯತ್‌ಗಳಿಗೆ ವಾಟರ್‌ಮನ್‌ಗಳನ್ನು ನೇಮಕ ಮಾಡಿಕೊಂಡು ಸಂಬಳ ಕೊಡತಕ್ಕ ಒಂದು ಅಧಿಕಾರವನ್ನಾದರೂ ಕೊಡುವ ಬಗ್ಗೆ ತಾವು ಆಲೋಚನೆ ಮಾಡಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಈಗಾಗಲೇ ಅವರಿಗೆ ಆ ಅಧಿಕಾರ ಇದೆ. ಅವರ ಹತ್ತಿರ ಸಂಪನ್ಮೂಲ ಸಹ ಇದೆ. ವಾಟರ್‌ಮನ್‌ಗಳನ್ನು ನೇಮಕ ಮಾಡತಕ್ಕ ಅಧಿಕಾರ ಕೂಡ ಅವರಿಗೆ ಇದೆ. ಆದರೆ ಅಲ್ಲಿರತಕ್ಕ ಪ್ರಕರಣ ಏನು ಎಂದರೆ, ಕೆಲವರು ತಮ್ಮ ಬಂಧು ಬಾಂಧವರನ್ನು, ಹಾಗೂ ತಮ್ಮ ಬೆಂಬಲಿಗರನ್ನು ನೇಮಕ ಮಾಡಿಕೊಳ್ಳಬೇಕು ಎಂದು ಹೇಳಿ ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸದೆ ಬೇಜವಾಬ್ಧಾರಿಯಿಂದ ವರ್ತಿಸತಕ್ಕ ಕೆಲವು ಪಂಚಾಯತ್‌ಗಳು ಇವೆ. ಆದರೆ ಎಲ್ಲಾ ಕಡೆಗಳಲ್ಲೂ ನಿಯಮಾವಳಿಗಳನ್ನು ರಚನೆ ಮಾಡಬೇಕಾಗುತ್ತದೆ. ಅಗತ್ಯವಿರುವ ಜನಗಳನ್ನು ಮಾತ್ರ ಸಿಬ್ಬಂದಿ ವರ್ಗದಲ್ಲಿ ತೆಗೆದುಕೊಳ್ಳಬೇಕು. ಸ್ವಲ್ಪ ಮಟ್ಟಿಗಿನ ಪ್ರಬುದ್ಧತೆಯನ್ನು, ಜವಾಬ್ಧಾರಿಯನ್ನು ಚುನಾಯಿತ ಪ್ರತಿನಿಧಿಗಳು ತೋರಿಸಿಕೊಡಬೇಕು. ತಮ್ಮ ಮಾರ್ಗದರ್ಶನವನ್ನು ಅವರಿಗೆ ನೀಡಬೇಕು.

MR SPEAKER : Minister to continue the reply

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ವಿರೋಧಪಕ್ಷದ ನಾಯಕರು ಈ ವಿಚಾರದ ಬಗ್ಗೆ ಅನೇಕ ವಿಷಯಗಳನ್ನು ಪ್ರಸ್ತಾಪಮಾಡಿದ್ದಾರೆ. ಈ ನಿಯಮಾವಳಿಗಳ ಬಗ್ಗೆ ಅಂದರೆ, ಗ್ರಾಮ ಪಂಚಾಯತ್‌ಗಳು ಹೇಗೆ ಕೆಲಸ ಮಾಡುತ್ತವೆ. ಹಾಗೂ ನಮ್ಮ ಇಲಾಖೆಯ ಬಗ್ಗೆ ಇನ್ನು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಪ್ರಾಯಶಃ ನನ್ನ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ಪ್ರಸ್ತಾಪ ಮಾಡತಕ್ಕ ಸಂದರ್ಭದಲ್ಲಿ ಅದನ್ನು ಕೂಲಂಕಷವಾದ ರೀತಿಯಲ್ಲಿ ಏನೇನು ಕ್ರಾರ್ಯಕ್ರಮಗಳನ್ನು ಮಾಡಿದ್ದೇವೆ. ಎಷ್ಟು ಜವಾಬ್ದಾರಿಯನ್ನು ನಿರ್ವಹಿಸಿದ್ದೇವೆ ಎಂಬುದನ್ನು ಹೇಳುತ್ತೇವೆ. ಒಬ್ಬ ಸಾಧಾರಣಾ ಪ್ರಥಮದರ್ಜೆ, ದ್ವಿತೀಯದರ್ಜೆ ಸಹಾಯಕನಿಂದ ಹಿಡಿದು ಐಎಎಸ್ ಅಧಿಕಾರಿಯವರೆಗೆ ಸುಮಾರು 200-250 ಜನರ ಮೇಲೆ ಕ್ರಮ ಕೈಗೊಂಡು ಅವರನ್ನು ಈಗಾಗಲೇ ಅಮಾನತ್ತುಗೊಳಿಸಿದ್ದೇವೆ. ಕೆಲವರ ಮೇಲೆ ಇಲಾಖಾ ವಿಚಾರಣೆಗಳು ನಡೆದಿವೆ. ಕೆಲವಾರು ಪ್ರಕರಣಗಳನ್ನು ಲೋಕಾಯುಕ್ತಕ್ಕೆ ಕಳುಹಿಸಿದ್ದೇವೆ. ಕೆಲವರ ಮೇಲೆ ಕ್ರಿಮಿನಲ್ ಕಂಪ್ಲೆಂಟ್‌ಗಳನ್ನು ಮಾಡಿ ಕೇಸ್‌ಗಳನ್ನು ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ದಾಖಲು ಮಾಡಿದ್ದೇವೆ. ಅದು ಇದಕ್ಕೆ ನೇರವಾಗಿ ಸಂಬಂಧ ಇಲ್ಲದಂಥ ವಿಚಾರ ಇದರ ಬಗ್ಗೆ ಬೇಡಿಕೆ ಸಂದರ್ಭದಲ್ಲಿ ಸಂಪೂರ್ಣವಾಗಿ ವಿರೋಧ ಪಕ್ಷದ ನಾಯಕರು ಎತ್ತಿರುವಂಥ ಅನೇಕ ವಿಷಯಗಳಿಗೆ ಉತ್ತರ ಕೊಡುತ್ತೇನೆ. ಇಲ್ಲಿ ಒಂದು ವಿಷಯವನ್ನು ಮಾತ್ರ ತಮ್ಮ ಮೂಲಕ ಈ ಸದನಕ್ಕೆ ನಾನು ಅರಿಕೆ ಮಾಡಿಕೊಳ್ಳುತ್ತೇನೆ. ಮಾನಸಿಕವಾಗಿ ಅಧಿಕಾರ ವಿಕೇಂದ್ರೀಕರಣವನ್ನು ಒಪ್ಪಿಕೊಂಡಿರತಕ್ಕ ಸಂದರ್ಭದಲ್ಲಿ ಸ್ವಲ್ಪ ಮಟ್ಟಿಗೆ ರಿಸರ್ವೇಶನ್ ಇನ್ನೂ ಕೂಡ ನಮಗೆ ಇದೆ. ಅಲ್ಲಿ ಒಂದಿಷ್ಟು ತಪ್ಪು ಆಗಿದೆ ಎನ್ನುವ ಕಾರಣಕ್ಕಾಗಿ ಅಧಿಕಾರ ವಿಕೇಂದ್ರೀಕರಣದ ವಿರೋಧವಾಗಿ ಮಾತನಾಡಬಾರದು. ನಮ್ಮ ಅವ್ಯವಸ್ಥೆ ಮತ್ತು ಅಬದ್ರತೆ ಬಗ್ಗೆ ಮಾತನಾಡಿದರೆ ಸಮಂಜಸವಾದುದು. ಈ ದೇಶದಲ್ಲಿ ಅನೇಕ ಜನ ಪ್ರಧಾನ ಮಂತ್ರಿಯಿಂದ ಹಿಡಿದು ರಾಜ್ಯದ ಹಾಗೂ ಕೇಂದ್ರದ ಮಂತ್ರಿಗಳೂ ಸಹಿತ ನಿರೀಕ್ಷಣಾ ಜಾಮೀನಿನ ಮೇಲೆ ಇದ್ದಾರೆ. ಅಂಥ ನಿರೀಕ್ಷಣಾ ಜಾಮೀನು ಇದೆ ಎನ್ನುವ ಒಂದೇ ಕಾರಣಕ್ಕಾಗಿ ಈ ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಅಲ್ಲಗೆಳೆಯುವುದಾದರೆ ಇದರ ಪರ್ಯಾಯವಾಗಿ ಮತ್ತೊಂದು ವ್ಯವಸ್ಥೆ ಯಾವುದು ಇದೆ. ಈ ಹಿನ್ನಲೆಯಲ್ಲಿ ಕೂಡ ತಾಲ್ಲೂಕು ಪಂಚಾಯಿತಿ,

ಗ್ರಾಮಪಂಚಾಯಿತಿ, ಮತ್ತು ಜಿಲ್ಲಾ ಪಂಚಾಯತ್‌ಗಳಲ್ಲಿ ಹಣದ ದುರುಪಯೋಗ ಆಗಿದೆ. ಜನಪಕ್ಷಪಾತ ಆಗಿದೆ. ಅವೆಲ್ಲವನ್ನೂ ಕೂಡ ದೊಡ್ಡದಾದಂತಹ ದೃಷ್ಟಿಕೋನದ ಮೂಲಕವಾಗಿ ನಾವು ಈ ಕೆಲಸವನ್ನು ಪ್ರಾರಂಭ ಮಾಡಬೇಕಾಗಿದೆ. ವಿರೋಧಪಕ್ಷದವರು ಹೇಳಿರುವಂತೆ ಅದಕ್ಕೆ ಬೇಕಾಗಿರುವ ನಿಯಂತ್ರಣ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಕಷ್ಟ ಇದೆ ಎಂದರೆ ಇವತ್ತು ನಾವೇನಾದರೂ ಜಿಲ್ಲಾಪಂಚಾಯಿತ್ ತಾಲ್ಲೂಕು ಪಂಚಾಯತ್‌ಗಳಲ್ಲಿ ಹಣದ ದುರುಪಯೋಗ ಆಗಿದೆ ಎಂದು ಹೇಳಿ ಕೊಟ್ಟರೆ, ನಿಮ್ಮ ಅಧೀನದಲ್ಲಿರುವ ಇಲಾಖೆಯ ಮೇಲೆಯೇ ನೀವು ಈ ರೀತಿ ಮಾತನಾಡುತ್ತೀರಿ, ಆದುದರಿಂದ ನಿಮಗೆ ಅಧಿಕಾರ ವಿಕೇಂದ್ರೀಕರಣದ ಬಗ್ಗೆ ನಂಬಿಕೆ ಇಲ್ಲ ಎಂದು ಹೇಳಿ ಲೇಖನಗಳನ್ನು ಬರೆಯುತ್ತಾರೆ. ಹಾಗೆ ಹೇಳಲಿಲ್ಲ ಎಂದರೆ ಅವರೇ ನಮ್ಮ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಇಷ್ಟೆಲ್ಲಾ ದುರ್ಬಳಕೆ ಆಗಿರತಕ್ಕ ಸಂದರ್ಭದಲ್ಲಿ ನೀವು ಏನು ಕೆಲಸ ಮಾಡಿದ್ದೀರಿ? ಎಂದು ಮತ್ತೊಂದು ಲೇಖನವನ್ನು ಬರೆಯುತ್ತಾರೆ. ಇಂಥದೊಂದು ಗೊಂದಲವಿರುವುದರಿಂದ ಆಗಿರತಕ್ಕಂಥ ಅನ್ಯಾಯದ ಬಗ್ಗೆ ದುರುಪಯೋಗದ ಬಗ್ಗೆ ನಾವು ಪ್ರಸ್ತಾಪ ಮಾಡಲೇಬೇಕಾಗುತ್ತದೆ, ಕಡಿವಾಣವನ್ನು ಹಾಕಲೇ ಬೇಕಾಗುತ್ತದೆ. ಮಾನ್ಯ ವಿರೋಧಪಕ್ಷದ ಸದಸ್ಯರು ಹಾಗೂ ಅನೇಕ ಜನ ಸದಸ್ಯರು ಹೇಳಿರುವಂತೆ 3,440 ಕೋಟಿ ರೂಪಾಯಿಗಳನ್ನು ಪ್ಲಾನ್ ಮತ್ತು ನಾನ್‌ಪ್ಲಾನ್ ಎರಡರಲ್ಲೂ ಖರ್ಚು ಮಾಡತಕ್ಕ ಈ ಇಲಾಖೆಯ ಮೇಲೆ ನಿಯಂತ್ರಣ ತರದೆ ಹೋದರೆ ಅನೇಕ ಸಂದರ್ಭಗಳಲ್ಲಿ ಲಂಗುಲಗಾಮ್ ಇಲ್ಲದೆ ನಡೆಯತಕ್ಕ ನಡವಳಿಕೆಗಳು ಕೂಡ ಆಗಬಹುದು. ಆದರೆ, ಅಧಿಕಾರ ವಿಕೇಂದ್ರೀ ಕರಣದ ಬಗ್ಗೆ ಬದ್ಧವಾಗುತ್ತಾ ಇದಕ್ಕೆ ಸರಿಯಾದಂಥ ಬಳಕೆಗೆ ಬೇಕಾಗಿರುವ ಪದ್ಧತಿಗಳನ್ನು ನಮ್ಮ ನಿಯಮಾವಳಿಗಳನ್ನು ರಚನೆ ಮಾಡತಕ್ಕದ್ದು ಬಹಳ ಮುಖ್ಯ ಎನ್ನುವ ಮಾತನ್ನು ಹೇಳಿ ಇದೊಂದು ಅನುಸಾಂಗಿಕವಾಗಿ ಬಂದಿರತಕ್ಕ ವಿಚಾರದ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡದೇ ನನ್ನ ಮಾತುಗಳನ್ನು ಮುಗಿಸುತ್ತೇನೆ

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪಮಾಡಿದಂತಹ ವಿಚಾರ ಬಹಳ ಪ್ರಮುಖವಾದುದು. ಇದೊಂದು ನಮ್ಮ ಸಮಾಜದಲ್ಲಿ ಇರತಕ್ಕಂಥ ಸೋಷಿಯಲ್ ಆರ್ಡರ್ ಏನಿದೆ, ಈ ಹಿನ್ನೆಲೆಯಲ್ಲಿ ನೀವು ಮಾಡಿರತಕ್ಕ ಕೆಲವು ಮೀಸಲಾತಿಗಳಿಂದ ಕೆಲವರು ಕೆಲವು ಸ್ಥಾನಗಳನ್ನು ಅಲಂಕರಿಸುವುದರಿಂದ ಅವರ ಮೇಲಿರತಕ್ಕವರು ಅವರನ್ನು ಅಗೌರವದಿಂದ ಕಾಣಬಹುದು. ಕೆಲವು ಸನ್ನಿವೇಶಗಳಲ್ಲಿ ಕೆಳಮಟ್ಟದಲ್ಲಿರುವ ಗ್ರಾಮಪಂಚಾಯತ್ ಆಗಿರಲಿ, ತಾಲ್ಲೂಕು ಪಂಚಾಯತ್ ಆಗಿರಲಿ ಇವರು ಒಂದು ಪ್ರಬಲ ಸಮಾಜಕ್ಕೆ ಸೇರಿದವರಾಗಿದ್ದು ಆ ಕ್ಷೇತ್ರಕ್ಕೆ ಒಬ್ಬ ಮೀಸಲಾತಿಗೆ ಸೇರದಂತಹ ಒಬ್ಬ ಶಾಸಕರಾಗಲೀ ಮಂತ್ರಿಗಳಾಗಲೀ ಬಂದರೆ ಅವರನ್ನು ಕೂಡ ಅಗೌರವದಿಂದ ಇವರು ಕಾಣುವಂತ ಸನ್ನಿವೇಶ ಇರುತ್ತದೆ. ಸ್ವಲ್ಪ ಈ ವಿಷಯದಲ್ಲಿ ಸಮತೋಲನ ಇಲ್ಲ. ಇಂತಹ ಸನ್ನಿವೇಶ ಅಲ್ಲಲ್ಲಿ ಉದ್ಭವವಾಗುತ್ತಿದೆ. ಎರಡನೆಯದಾಗಿ ಸ್ಥಳೀಯ ಸಂಸ್ಥೆಗಳು ನಿರ್ವಹಣೆ ಮಾಡತಕ್ಕ ಕೆಲಸವನ್ನು ಸರಿಯಾಗಿ ನ್ಯಾಯಯುತವಾಗಿ ಮಾಡದೇ ಇರತಕ್ಕ ಸನ್ನಿವೇಶದಲ್ಲಿ ನಾವು ಪಕ್ಷಾತೀತವಾಗಿ ಅವರು ಕಾಂಗ್ರೆಸ್ ಆಗಲೀ ಜನತಾ ಆಗಲೀ, ಬಿಜೆಪಿ ಆಗಲೀ ಒಂದೆರಡು ಕಡೆ ಆದರೂ ಕೂಡ ಸರ್ಕಾರದ ಯಿಂದ ಹತೋಟಿ ತಪ್ಪಿದಾಗ ನಿಯಂತ್ರಣ ಮಾಡುತ್ತೇವೆ ಎಂದು ತೋರಿಸಲಿಕ್ಕೆ ಅವರನ್ನು

ಸೂಪರ್‌ಸೀಡ್ ಅಥವಾ ಅದು ಇದು ಮಾಡಬೇಕಾಗುತ್ತದೆ. ಆ ರೀತಿ ಮಾಡದೆ ಹೋದರೆ ಅವ ತಮಗೆ ನವಾಬ್‌ಶಾಹಿ ಸಿಕ್ಕಿದೆ ಎಂದು ತಿಳಿದುಕೊಂಡುಬಿಡುತ್ತಾರೆ. ನಾವು ಅದನ್ನು ಅಧಿಕಾ ವಿಕೇಂದ್ರಿಕರಣ ಎಂದು ತಿಳಿದುಕೊಂಡರೆ, ಅವರು ಅದನ್ನು ನಮಗೆ ನವಾಬ್‌ಶಾಹಿ ಸಿಕ್ಕಿದೆ ಎಂ ತಿಳಿದುಕೊಂಡು ಬಿಡುತ್ತಾರೆ. I think that is what the Hon'ble Leader of the oppositi was trying to explain. I totally endorse those views.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ನಾನೂ ಕೂಡ ತಮ್ಮ ಅಭಿಪ್ರಾಯಕ್ಕೆ ಸಹಮತವ ವ್ಯಕ್ತಪಡಿಸುತ್ತೇನೆ. ಈ ಸಂದರ್ಭಗಳಲ್ಲಿ ಹೇಗೆ ಟೀಕೆಗಳು ಇವತ್ತು ಸಾಪೇಕ್ಷಿತವಾಗಿರುತ್ತವೆ ನಾ ಹಾಗೆ ಯಾವುದೇ ಸಂದರ್ಭಗಳಲ್ಲಿ ಇಂತಹ ಸಂದರ್ಭಗಳಲ್ಲಿ ಅಧಿಕಾರ ದುರುಪಯೋಗವಾಗಿರುವುದ ಹಣದ ದುರುಪಯೋಗವಾಗಿರುವುದರ ಬಗ್ಗೆ ಏನಾದರೂ ಮಾತನಾಡಿದರೆ ಅಧಿಕಾರ ವಿಕೇಂದ್ರೀಕರಣ ಬಗ್ಗೆ ನಿಮಗೆ ಬದ್ಧತೆ ಇಲ್ಲ. ನೀವು ಬರೀ ಹುಳುಕನ್ನು ಮಾತನಾಡುವುದರ ಮೂಲಕ ಜನರ ವಿಶ್ವಾಹ ಕಡಿಮೆ ಮಾಡುತ್ತೀರಿ ಎಂದು ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಮಹಾ ಮಹಾ ಪುರೋಹಿತ ತಮ್ಮ ಪತ್ರಿಕೆಗಳಲ್ಲಿ ಬರೆಯುತ್ತಾರೆ. ಕ್ರಮ ಕೈಗೊಂಡಾಗ ನಾವು ಅಧಿಕಾರ ವಿಕೇಂದ್ರೀಕರಣ ವೈರಿಗಳಾಗುತ್ತೇವೆ. ಕ್ರಮ ಕೈಗೊಳ್ಳದೆ ಇದ್ದರೆ ಅರಾಜಕತೆಯಲ್ಲಿ ನೀವು ಶಾಮೀಲಾಗಿದ್ದೀರಿ ಎಂ ಅಪಾದನೆ ಹೊರಿಸುತ್ತಾರೆ, ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಅತ್ಯಂತ ನೋವಿನಿ ಹೇಳಿಕೊಳ್ಳಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವೆಲ್ಲಾ ನಡೆಯುತ್ತವೆ. ಕೋಳಿ ಕೇಳಿ ಖಾ ಅರೆಯುತ್ತಾರೆಯೇ? ನಮ್ಮ ಕೆಲಸ ನಾವು ಮಾಡಬೇಕು. ಅವರು ಹೇಳುತ್ತಾರೆ ಎಂದು ನಾವು ಬಿಡುವು ಆಗುತ್ತಾ?

ಅಧ್ಯಕ್ಷರು : ಅವರಿಗೆ ಅದರ ಬಗ್ಗೆ ಗೊತ್ತಾಗಲ್ಲ. ದೇಶಪಾಂಡೆಯವರನ್ನು ಕೇಳಿ.

ಶ್ರೀ ವಾಟಾಳ್ ನಾಗರಾಜ್ : ಅಲ್ಲ ಸ್ವಾಮಿ, ಅಧ್ಯಕ್ಷರೆ, ಅವರಿವರನ್ನು ಏಕೆ ಕೇಳು ಎನ್ನುತ್ತೀ ನಿಮಗೆ ಗೊತ್ತಿಲ್ಲವೇ, ನೀವೇ ಹೇಳಿ ಆ ವಿಷಯ. ನೀವು ಅಧಿಕೃತ ಅವರು ಅನಧಿಕೃತ ತಮಗೆ ಕೋ ಬಗ್ಗೆ ವಿಶೇಷವಾಗಿ ಚೆನ್ನಾಗಿ ಗೊತ್ತಿದೆ. ತಾವೇ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎಂತಹ ವಿಟ್‌ನೆಸ್ ಪಕ್ಕದಲ್ಲಿಟ್ಟು ಕೊಂಡಿದ್ದೀರಿ ಅಧ್ಯಕ್ಷ

ಅಧ್ಯಕ್ಷರು : ಏನಿಲ್ಲ ಅವರ ವಿಚಾರವನ್ನು ಎಲ್ಲಿ ಹೇಳುತ್ತೀನಿ ಎಂದು ಅವರು ಗುಟ್ಟಾ ಮಾಡುತ್ತಾರೆ. ನಾನು ಹಾಗೆ ಹೇಳುವುದಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ : ನಾವು ಬ್ರಾಹ್ಮಣರು ಅದರಲ್ಲೂ ಈಗ ಶ್ರಾವಣ ಮಾ ನಮಗೆ ಕೋಳಿ ಬಗ್ಗೆ ಏನೂ ಗೊತ್ತಿಲ್ಲ.

ಅಧ್ಯಕ್ಷರು : ನಿನ್ನೆ ಮಧ್ಯಾಹ್ನ ನೀವು ಊಟದ ಬಗ್ಗೆ ಶ್ರಾವಣ ಮಾಸದಲ್ಲಿ ಎಷ್ಟು ಸ್ಟ್ರಿಕ್ಟಾ ಇದ್ದೀರಿ ಎಂದು ಡಾ: ಮಹಾದೇವಪ್ಪನವರು ಹೇಳಿದರು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಸಸ್ಯಹಾರಿಗಳು ಸಹ ಮಾಂಸಹಾರಿ ಭಕ್ಷ್ಯಗಳನ್ನು ಬಹಳ ರುಚಿಕರವಾಗಿ ಮಾಡುತ್ತಾರೆ. ಅದಕ್ಕೆ ತಿಂದೇ ಮಾಡಬೇಕಾದ ಅಗತ್ಯ ಇಲ್ಲ.

12.00 ಪಿ.ಎಂ.

MR. SPEAKER : But Hitler was a vegeterian.

ಶ್ರೀ ಎಸ್. ಸುರೇಶ್ ಕುಮಾರ್ : ಅಧ್ಯಕ್ಷರೆ Even Bernad Shaw was Vegetarian. ಒಂದು ಸಲ ಬರ್ನಾಡ್ ಶಹಾರವರನ್ನು ಊಟಕ್ಕೆ ಕರೆಸಿ ಬರೀ ನಾನ್ ವೆಜಿಟರಿಯನ್ ಫುಡ್ ಮಾಡಿ ಬಿಟ್ಟರು. ಪಾಪ ಅವರು ಮುಖವನ್ನು ನೋಡುತ್ತಾ ಕುಳಿತುಬಿಟ್ಟರು. ಯಾರೋ ಬಂದು ಏಕೆ ಸ್ವಾಮಿ ಊಟ ಮಾಡುವುದಿಲ್ಲವೇ ಎಂದು ಕೇಳಿದಾಗ ಬರ್ನಾಡ್ ಶಹಾರವರು ನನ್ನ ಹೊಟ್ಟೆ ಸತ್ತ ಪ್ರಾಣಿಗಳನ್ನು ಹೂಳುವ ಸ್ಮಶಾನ ಅಲ್ಲ ಎಂದು ಹೇಳಿದರು.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ ನಮ್ಮ ಮುಖ್ಯಮಂತ್ರಿಗಳು ಸಹ ಒಂದು ಮಾತನ್ನು ಹೇಳಿದರು. ನಮ್ಮಲ್ಲಿಯ ಒಬ್ಬ ಮುಗ್ಧರಾದಂಥ ಮಂತ್ರಿಗಳು ಕೋಳಿ ತತ್ತಿಯನ್ನು ತಿನ್ನುವಾಗ ಅವರಿಗೆ ಯಾರೋ ಸ್ವಾಮಿ ಅದು ಕೋಳಿ ತತ್ತಿ ಎಂದು ಹೇಳಿದರು. ಆಗ ಅವರು ನಾವು ಅವರ ಅವ್ವನನ್ನೇ ಬಿಟ್ಟಿಲ್ಲ ಆದ್ದರಿಂದ ಇದು ಏನು ಎಂದು ಹೇಳಿದರಂತೆ. ಆದ್ದರಿಂದ ಈಗ ತಂದಿರುವಂಥ ನಿಯಮಾವಳಿಗಳನ್ನು ಸದನ ಒಪ್ಪಬೇಕೆಂದು ತಮ್ಮ ಮುಖಾಂತರ ಭಿನ್ನವಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾಧುಸ್ವಾಮಿಯವರು ಕೂಡ ಹೇಳಿದ್ದನ್ನು ಸ್ವಲ್ಪ ಕ್ಲಾರಿಫೈ ಮಾಡಿ. ಏಕೆಂದರೆ ಸೆಕ್ಷನ್ 117 ಎ, ಬಿ, ಸಿ ನಲ್ಲಿ ಹೇಳಿರತಕ್ಕಂಥ ವಿಚಾರದಿಂದ ಮೆಂಬರ್‌ಶಿಪ್ ಕಂಟಿನ್ಯೂ ಆಗುವುದಿಲ್ಲ. ಆದರೆ, ಸೆಕ್ಷನ್ 138ರಲ್ಲಿ ಹೇಳಿರುವಂತೆ ಕಂಟಿನ್ಯೂ ಆಗುತ್ತಾರೆ ಎಂದರೆ ಇದು ಒಂದೇ ಅನಾಮಲಿ ಒಂದು ಕಡೆ ಆ ಅಧ್ಯಕ್ಷ, ಉಪಾಧ್ಯಕ್ಷರ ಪೀರಿಯಡ್ ಅವರು ಕಂಟಿನ್ಯೂ ಆಗುತ್ತಾರೆ. They will continue as members. Whereas in amalgamation they will not be continued as Members. Within 6 months they have to face the elections. ಆದರೆ ಬೇರೆ ಅಮಾಲ್ಗಮೇಟ್ ಪೀರಿಯಡ್‌ನಲ್ಲಿ ಅವರು ಕಂಟಿನ್ಯೂ ಆಗುವುದಿಲ್ಲ. ಆರು ತಿಂಗಳೊಳಗೆ ಅವರು ಎಲೆಕ್ಷನ್ ಫೇಸ್ ಮಾಡಬೇಕು. ಇದರಿಂದ ತಾರತಮ್ಯ ಆಗುತ್ತದೆ. ಆದ್ದರಿಂದ ಸೆಕ್ಷನ್ 138ನ್ನು ತಾವು ಸ್ವಲ್ಪ ನೋಡಿ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ನಾವು ತರತಕ್ಕಂಥ ಸೆಕ್ಷನ್ 138ಕ್ಕೆ ಬಹಳ ಸೀಮಿತವಾದಂಥ ಒಂದು ಮಾತು. I quote :

"3. Amendment of Section 138 In section 138 of the Principal Act, in sub-section (3), the following proviso shall be inserted, namely :

"Provided that the member who is elected as Adhyaksha or Upadhyaksha to fill the casual vacancy in the office of Adhyaksha or Upadhyaksha shall

hold office for the remainder of the period for which the Adhyaksha or Upadhyaksha in whose place he has been elected would have held office if the vacancy had not occurred." ಇದು ಒಂದು ಸೀಮಿತವಾದುದು. ಏಕೆಂದರೆ ಇತ್ತೀಚೆಗೆ ಬಂದಿರತಕ್ಕಂಥ ಹೈಕೋರ್ಟಿನ ನಿರ್ಣಯ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ He will continue as Adhyaksha or Updhyaksha ಆದರೆ ಆತನು ಮೆಂಬರ್ ಆಗಿದ್ದರು ಮುಂದುವರಿಯುವುದಕ್ಕೆ ಅವಕಾಶ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಅಲ್ಲಿ ರಿಮೈಂಡರ್ ಪೀರಿಯಡ್‌ಗೆ ಇಟ್ಟು ಇಲ್ಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರಿಮೈಂಡರ್ ಪೀರಿಯಡ್ ಇರಲಿ, ನೆಕ್ಸ್ಟ್ ಎಲೆಕ್ಷನ್ ಮಾಡುವಾಗ ಬೇಕಾದರೆ ನೀವು ಮಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅಮಾಲ್ಗಮೇಶನ್ ಆಗುವ ಕಡೆಗೆ ಇಬ್ಬರು ಅಧ್ಯಕ್ಷರು ಆಗುತ್ತಾರೆ, ಅವರಿಗೆ ತಾಪತ್ರಯ ಇದೆ. ಪಾರ್ಟ್ ಆಫ್ ದಿ ಪಂಚಾಯತ್ ಹೋಗಿರುವವರನ್ನು ಮುಂದುವರಿಸುವುದಕ್ಕೆ ಏನು? ಅಲ್ಲಿ 10-15 ಜನ ಇದ್ದಾಗ ಆ ಸದಸ್ಯರನ್ನು, ಆ ಅಧ್ಯಕ್ಷರನ್ನು ಕಂಟಿನ್ಯೂ ಮಾಡಬಹುದು ತಾವು. ಆರು ತಿಂಗಳು ಆದ ತಕ್ಷಣ ಪಂಚಾಯತ್ ಎಲೆಕ್ಷನ್ ಏಕೆ ಮಾಡುತ್ತೀರಿ? ಎರಡು ಪಂಚಾಯತ್‌ಗಳು ಒಂದು ಆದಾಗ your problem is right. ಇಬ್ಬರು ಅಧ್ಯಕ್ಷರನ್ನು ನೀವು ಅಲ್ಲಿ ಕೂಡಿಸುವುದಕ್ಕೆ ಆಗುವುದಿಲ್ಲ, ತಾವು ಎಲೆಕ್ಷನ್ ಹೋಗಬೇಕು. But let the member continue till the expiry of the term.

ಶ್ರೀ ಎಂ.ಪಿ. ಪ್ರಕಾಶ್ : ಈಗಾಗಲೇ ಮೂರುವರೆಯಿಂದ ನಾಲ್ಕು ವರ್ಷ ಗ್ರಾಮ ಪಂಚಾಯಿತಿಯ ಅವಧಿ ಮುಗಿದುಹೋಗಿದೆ ಈ ಸಂದರ್ಭದಲ್ಲಿ ಅವರಿಗೆ ಮುಂದುವರಿಸುವುದಕ್ಕೆ ಪ್ರತ್ಯೇಕವಾದ ವಿಧಿ. ಇರೋದರಿಂದ ಅವರಿಗೆ ಮಾತ್ರ ಈ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗೆ ಉದ್ದೇಶಿತವಾದ ತಿದ್ದುಪಡಿ ತಂದಿದ್ದೇವೆ. ಅದನ್ನು ತಂದಿಲ್ಲ. ಮುಂದೆ ಅದರ ಬಗ್ಗೆ ಚರ್ಚೆ ಮಾಡುವಾಗ ಇದರ ಬಗ್ಗೆ ನೋಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಒಂದೇ ಬಿಲ್ಲಿನಲ್ಲಿ ತಾರತಮ್ಯ ಇದೆಯಲ್ಲ. ಒಂದು ಮೆಂಬರ್‌ಗೆ ಒಂದು ಪೀರಿಯಡ್, ಇನ್ನೊಬ್ಬ ಮೆಂಬರ್‌ಗೆ ಇನ್ನೊಂದು ಪೀರಿಯಡ್.

ಶ್ರೀ ಜೆ.ಪಿ. ಮಾಧುಸ್ವಾಮಿ : ಅವರು ದೊಡ್ಡವರು ಎಂದು ಇಡುತ್ತೀರಿ, ತಾಲ್ಲೂಕು ಪಂಚಾಯತ್‌ನವರು ಚಿಕ್ಕವರು ಎಂದು ಕಿತ್ತು ಹಾಗುತ್ತೀರಾ? ಈ ವ್ಯವಸ್ಥೆಯಲ್ಲಿ ನೀವು? For no reason, for no fault of theirs ನೀವು ಎರಡು ಏರಿಯವನ್ನು ಮುನಿಸಿಪಾಲಿಟಿಗೆ ಸೇರಿಸಿದಾಕ್ಷಣ ಐದು ವರ್ಷಕ್ಕೆ ಗೆದ್ದವರನ್ನು ನೀವು ಮೂರು ವರ್ಷಕ್ಕೆ ಇಳಿಸುವುದು ಸರಿನಾ? ಆ ಮುನಿಸಿಪಾಲಿಟಿ ಏರಿಯಾದವರು ಹೋಗಲಿ ಬೇಕಾದರೆ. We will not object to that.

ಶ್ರೀ ಎಂ.ಪಿ. ಪ್ರಕಾಶ್ : ಇಲ್ಲಿ ಇಡೀ ಆತನ ಕ್ಷೇತ್ರವೇ ನಗರಪಂಚಾಯ್ತಿಯಾಗಿ, ಪರಿವರ್ತನೆ ಆದಾಗ, ಪಟ್ಟಣ ಪಂಚಾಯ್ತಿಯಾಗಿ ಪರಿವರ್ತನೆಯಾದಾಗ ಆತನು ಸದಸ್ಯನಾಗಿ ಮುಂದು ವರಿಯುವುದಿಲ್ಲಾ. ಆತನ ಕೆಲವು ಕ್ಷೇತ್ರದ ಭಾಗ ಉಳಿದರೆ ಅದು ಪಕ್ಕದಲ್ಲಿ ಸೇರಿಕೊಳ್ಳುವ ಗ್ರಾಮಪಂಚಾಯ್ತಿಗೆ ಸದಸ್ಯನಾಗಿ ಉಳಿಯುತ್ತಾನೆ. ಆದುದರಿಂದ ಇಲ್ಲಿ ಆ ಪ್ರಶ್ನೆ ಬರುವುದಿಲ್ಲ. ಈಗ ಆತನ ಇಡೀ ಕ್ಷೇತ್ರವೇ ನಗರಸಭೆಯಾಗಿ ಪರಿವರ್ತನೆಗೊಂಡಿರುವಾಗ ಆತನನ್ನು ಸದಸ್ಯನಾಗಿ ಮುಂದುವವಿಸುವ ಅಗತ್ಯವಾದರೂ ಏನು ಇದೆ?

ಶ್ರೀ ಜೆ.ಸಿ. ಮಾಧುಸ್ವಾಮಿ : ನಮ್ಮ ಪ್ರಶ್ನೆ ಉಳಿದ ಸದಸ್ಯರನ್ನು ಏನು ಮಾಡುತ್ತೀರಿ? ಉಳಿದ ಸದಸ್ಯರನ್ನು ನೀವು ಎಕ್ಸ್‌ಫೆಲ್ ಮಾಡುತ್ತಿದ್ದೀರಲ್ಲ, ಅವರು ಹೋಗಲಿ ಆ ಪಂಚಾಯತ್‌ನವನು ಹೋಗಲಿ.

MR. SPEAKER : Mr. Madhuswamy as I understand from the Hon. Minister, it is not the member, it is the area that the member represents that matters.

ಶ್ರೀ ಜೆ.ಸಿ. ಮಾಧುಸ್ವಾಮಿ : ಇಲ್ಲ ಮಾನ್ಯ ಅಧ್ಯಕ್ಷರೆ, the provision of the Bill is ಒಬ್ಬ ಅಥವಾ ಇಬ್ಬರು ಪಂಚಾಯತ್ ಮೆಂಬರ್ ಅಲ್ಲಿ ಖಾಲಿಯಾದರೂ the entire Panchayat stands dissolved. ಅಲ್ಲಿ ಎಲೆಕ್ಷನ್ ಆಗುತ್ತದೆ. ಆರು ತಿಂಗಳ ನಂತರ ಅಲ್ಲಿ ಎಲೆಕ್ಷನ್ ಆಗುತ್ತದೆ.

MR. SPEAKER : If the whole area which the Member is.

SRI J.C. MADHUSWAMY : If that is the case, it is okay. But, I will clarify.

MR. SPEAKER : As I understand if the whole area which is in the form of a constituency is being represented by a member and that entire constituency gets transferred.

SRI J.C. MADHUSWAMY : But he has already ordered in respect of two Panchayats in my area.

MR. SPEAKER : Let me hear the Hon. Minister. I hope I have understood your problem.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಈಗ ಅಮಾಲ್ಗಮೇಶನ್ ಆಗಿರತಕ್ಕಂಥ ಸಂದರ್ಭಗಳು ಬಂದಾಗ ಅವುಗಳನ್ನು ಹೊಡೆದು ವಿಭಜಿಸಿದಾಗ ಆ ಚುನಾವಣೆ ಸದಸ್ಯತ್ವವನ್ನು ಅವರು ಕಳೆದುಕೊಳ್ಳುತ್ತಾರೆ. ಆದರೆ ಗ್ರಾಮ ಪಂಚಾಯತ್‌ಗಳು ನಗರಸಭೆಗಳಾಗಿ ಪರಿವರ್ತನೆಗೊಂಡರೆ,

ಪಟ್ಟಣ ಪಂಚಾಯ್ತಿಗಳಾಗಿ ಪರಿವರ್ತನೆಗೊಂಡಾಗ ಅವರ ಇಡೀ ಕ್ಷೇತ್ರವೇ ಅದರಲ್ಲಿ ಸೇರಿದಾಗ ಅವರು ಸದಸ್ಯರಾಗಿ ಇಳಿಯುವುದಿಲ್ಲ. ಆದರೆ ಭೌಗೋಳಿಕವಾಗಿ ವಿಭಜನೆ ಮಾಡಿದಂಥ ಸಂದರ್ಭದಲ್ಲಿ ಎರಡೂ ಗ್ರಾಮ ಪಂಚಾಯ್ತಿಗಳಿಗೆ ಚುನಾವಣೆ ನಡೆಯಬೇಕು ಎನ್ನತಕ್ಕಂಥ ಮಾತು ಇದೆ. ಮಾನ್ಯ ಮಾಧುಸ್ವಾಮಿಯವರು ಹೇಳಿರತಕ್ಕಂಥ ಮಾತು ಏನು ಇದೆ. ನಾವು ಸೆಕ್ಷನ್ 302ರಲ್ಲಿ ಜಿಲ್ಲಾಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳನ್ನು ಹೊಸದಾಗಿ ಅಸ್ತಿತ್ವಕ್ಕೆ ತಂದಂಥ ಸಂದರ್ಭದಲ್ಲಿ ಉಳಿದ ಅವಧಿಗೆ ಹೇಗೆ ಅವರ ಸದಸ್ಯತ್ವ ಮುಂದುವರಿಯುತ್ತದೆ, ಆ ರೀತಿ ಈ ಸದಸ್ಯರನ್ನು ಏಕೆ ಮುಂದುವರಿಸಬಾರದು ಎನ್ನುವ ವಾದ ಇದೆ. ಅದನ್ನು ನಾವು ಇನ್ನೂ ಯೋಚನೆ ಮಾಡಬೇಕು. ಈಗ ಸಧ್ಯಕ್ಕೆ ಕಾನೂನು ಪ್ರಕಾರ ನನಗೆ ಗೊತ್ತಿದ್ದ ಪ್ರಕಾರ ಗ್ರಾಮಪಂಚಾಯ್ತಿಗೆ ಏಕೆ ಹೋಗಿಲ್ಲ ಎಂದರೆ ಈಗಾಗಲೇ ಸುಮಾರು ಮೂರುವರೆ-ನಾಲ್ಕು ವರ್ಷ ಅವಧಿ ಆಗಿರುವುದರಿಂದ ಅದರ ಬಗ್ಗೆ ನಾವು ಯೋಚನೆ ಮಾಡಬೇಕು.

MR. SPEAKER : The Government has got an open mind on that suggestion.

SRI M. MALLIKARJUN KHARGE : Sir, I am quoting Section 117 (a) of the said Bill which reads thus: "The Grama Panchayats of such local area (hereinafter in this section referred to as the existing Grama Panchayats) Shall cease to exist and all the members of such Grama Panchayats shall vacate office ;

b) That means nominated members can be taken up. Instead of that elected members are there, they should be continued. Further what they say is

(c) The Adhyaksha and Upadhyaksha of the interim Grama Panchayat shall be elected in the manner provided in this Act;

(d) The term of the interim Grama Panchayat so constituted shall be for such period, but not exceeding six months as the Deputy Commissioner shall by order specify;

(e) Before the expiry of the term of the interim Grama Panchayat in accordance with the provisions of clause (d), a Grama Panchayat (hereinafter referred to as the "Amalgamated Grama Panchayat) shall be constituted in the manner provided in this Act;

(f) the amalgamated Grama Panchayat constituted Under clause (e) shall continue only for the remainder of the period for which all the existing Grama Panchayats would have continued or where the remainder of the period is different in respect of different existing Grama Panchayats till the remainder of the period of the last of such existing Grama Panchayats would have expired had there not been amalgamation of panchayat areas under this section." ಅಧ್ಯಕ್ಷರೇ, ಅದಕ್ಕೆ ನಾನು ಏನು ಹೇಳುತ್ತೇನೆಂದರೆ ಇವರಿಗೂ ಕೂಡ ನೀವು ಸೆಕ್ಷನ್ 138ರಲ್ಲಿ ಒಂದು ಸಾರಿ ಪ್ರಾವಿಜನ್ ಮಾಡಿ ಸಿಮಿಲರ್ ಮೆಂಬರ್ ಅವರು ಅಧ್ಯಕ್ಷರಿರಬಹುದು, ಉಪಾಧ್ಯಕ್ಷರಿರಬಹುದು, basically they are members. They have been continued. ಹೀಗಿರುವಾಗ ಇಲ್ಲಿ ಏಕೆ ನೀವು ಅವರನ್ನು ತೆಗೆದುಹಾಕಿ ನಾಮಿನೇಟ್ ಮಾಡಿ ಪುನಃ 6 ತಿಂಗಳಿಗೆ ಎಲೆಕ್ಷನ್ ಮಾಡಿಸುವುದಕ್ಕೆ ಏಕೆ ಇವರು ಹೋಗಬೇಕು. ಏನು 2 ತಿಂಗಳೋ, ಮೂರು ತಿಂಗಳೋ ಅಥವಾ ಒಂದು ವರ್ಷ ಅವರು ಇರಬಹುದು. Let them be there. What is the harm? All should be equal before law. Justice should be there. ಒಬ್ಬರಿಗೆ ಒಂದು, ಇನ್ನೊಬ್ಬರಿಗೆ ಒಂದು ಮಾಡುವುದು ಸರಿಯಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಅಧ್ಯಕ್ಷರೇ, ಈಗ ನಾವು ಪುಟ 13ನ್ನು ಪರಾಂಬರಿಸಬೇಕು. ಅಲ್ಲಿ ಏನು ಹೇಳಲಾಗಿದೆಯೆಂದರೆ 'Power of Government to dissolve and reconstitute Panchayats on the alteration of limits of Panchayats area, taluks and districts' ಇದು ಈಗಗಿರುವಂಥ ಕಾಯಿದೆ. ಈಗಿರುವಂಥ ಗ್ರಾಮ ಪಂಚಾಯತ್ ರಾಜ್ ಆಕ್ಟ್ 1993 ಎನ್ನತಕ್ಕಂಥದ್ದನ್ನು ಪುಟ 13ರಲ್ಲಿ ವ್ಯಕ್ತಮಾಡಿದ್ದೇವೆ. ಇದರಲ್ಲಿರತಕ್ಕಂಥ ಎಲ್ಲಾ ಪ್ರಾವಿಜನ್‌ಗಳನ್ನು ಹೊಸದಾಗಿ ನಾವು ತಂದಿರತಕ್ಕಂಥ ಸೆಕ್ಷನ್ 302ರಲ್ಲಿ ಕೈಬಿಟ್ಟಿದ್ದೇವೆ. ಆದುದರಿಂದ ಈಗ ಅವರು ಏನು ಹೇಳುತ್ತಾರೆ, ಯಾವುದೇ ಪಂಚಾಯತಿ ಪ್ರದೇಶ ಬದಲಾವಣೆಯಾದಾಗ ಈಗಿರತಕ್ಕಂಥ ಕಾಯಿದೆ ಕೆಳಗೆ ಗ್ರಾಮ ಪಂಚಾಯತಿ ವಿಸರ್ಜನೆಯಾಗಬಹುದಾಗಿತ್ತು. ಆದರೆ ಈಗ ಅದನ್ನು ನಾವು ಕೈಬಿಟ್ಟಿದ್ದೇವೆ. ಆದುದರಿಂದ, ಮಾಧುಸ್ವಾಮಿಯವರು ಹೇಳಿದಂಥ ರೀತಿಯಲ್ಲಿ ಯಾವ ಸದಸ್ಯತ್ವಕ್ಕೂ ಕೂಡ ಭಂಗ ಬರುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮುನಿಸಿಪಲ್ ಏರಿಯಾಕ್ಕೆ ಸೇರಿರುವ ಕಡೆಯಿಂದ ಒಬ್ಬ ತಾಲ್ಲೂಕು ಮೆಂಬರ್ ಎಲೆಕ್ಟ್ ಆಗಿರುತ್ತಾನೆ; ಅಥವಾ ಜಿಲ್ಲಾ ಪರಿಷತ್ ಮೆಂಬರ್ ಎಲೆಕ್ಟ್ ಆಗಿರುತ್ತಾನೆ, Whereas his village is included in the municipalities. His constituency remains. ಒಂದು ಹಳ್ಳಿ ಅಥವಾ ಎರಡು ಹಳ್ಳಿ ಹಾಗೆಯೇ ಉಳಿದುಕೊಂಡುಬಿಡುತ್ತದೆ, ಮುನಿಸಿಪಾಲಿಟಿ ಸೇರಿ 8 ಹಳ್ಳಿ ಅಥವಾ 10 ಹಳ್ಳಿಗಳು ಉಳಿದರೆ ಅವರ ಸ್ಥಿತಿ ಏನು? will he become a municipal member or will he continue to be a Zilla Panchayat member, where he is not in the Voters' list of the Zilla Panchayat area?

ಶ್ರೀ ಎಂ.ಪಿ. ಪ್ರಕಾಶ್ : ಅಧ್ಯಕ್ಷರೇ, ಆತನ ಇಡೀ ಭೌಗೋಳಿಕ ಭಾಗದ ಸ್ವಲ್ಪ ಭಾಗ ಉಳಿದಿದ್ದರೆ ಆತನ ಸದಸ್ಯತ್ವ ಊರ್ಜಿತಗೊಳ್ಳುತ್ತದೆ. ಆತನ ಸದಸ್ಯತ್ವದಲ್ಲಿ ಅವರು ಓಟರ್ ಅಲ್ಲದಿದ್ದರೂ ಕೂಡ ಓಟರ್, ನಗರದಲ್ಲೂ ಇರಬಹುದು, ಗ್ರಾಮಾಂತರ ಪ್ರದೇಶದಲ್ಲೂ ಕೂಡ ಇರಬಹುದು. ಆದರೆ ಈಗ ಮುಂದಾಗಿರತಕ್ಕಂಥ ಕಾರಣಗಳಿಗಾಗಿ ಆತನ ಸದಸ್ಯತ್ವ ವಿಸರ್ಜನೆಯಾಗುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಗರದಲ್ಲಿ ಓಟರ್ ಆದರೆ ಆತ ಜಿಲ್ಲಾ ಪಂಚಾಯತ್ ಮೆಂಬರ್ ಆಗುವುದಿಲ್ಲವಲ್ಲ.

ಶ್ರೀ ಪಿ. ಪ್ರಕಾಶ್ : ಏಕೆಂದರೆ, ಅದು ಸಬ್ಸಿಕ್ವೆಂಟ್ ಆ್ಯಕ್ಟ್. ಏಕೆಂದರೆ ಆ ರೀತಿ ನೋಟಿಫಿಕೇಶನ್‌ನಿಂದ ಆಗಿರತಕ್ಕಂಥದ್ದು. ಆದರೆ ಭೌಗೋಳಿಕವಾಗಿ ಸ್ವಲ್ಪ ಭಾಗ ಉಳಿದಿರುವುದರಿಂದ ಆತನ ಸದಸ್ಯತ್ವ ಉಳಿಯಲ್ಪಡುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಆತ ಮುಂದುವರೆಯುತ್ತಾನಲ್ಲವೆ?

ಶ್ರೀ ಎಂ.ಪಿ. ಪ್ರಕಾಶ್ : ಹೌದು.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "1997ರ ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸ್ಪಟ್ಟಿತು

(ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು)

ಖಂಡ 1 ಕ್ಕೆ ತಿದ್ದುಪಡಿ

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, ಖಂಡ 1ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ನಾನು ಮಂಡಿಸುತ್ತೇನೆ. " ಎರಡನೇ ಉಪಖಂಡದಲ್ಲಿ 1996ರ ಅಕ್ಟೋಬರ್ 24ನೇ ದಿನಾಂಕದಿಂಧ ಎಂಬ ಪದಗಳು ಮತ್ತು ಅಂಕಿಗಳ ಬದಲಾಗಿ 1996ರ ಸೆಪ್ಟೆಂಬರ್ 23ನೇ ದಿನಾಂಕದಿಂದ ಎಂಬ ಅಂಕಿಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು"

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಎರಡನೇ ಉಪಖಂಡದಲ್ಲಿ 1996ರ ಅಕ್ಟೋಬರ್ 24ನೇ ದಿನಾಂಕದಿಂದ ಎಂಬ ಪದಗಳು ಮತ್ತು ಅಂಕಿಗಳ ಬದಲಾಗಿ 1996ರ ಸೆಪ್ಟೆಂಬರ್ 23ನೇ ದಿನಾಂಕದಿಂದ ಎಂಬ ಅಂಕಿಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 1 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಖಂಡ 1 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 1 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 2 ರಿಂದ 6 ರವರೆಗೆ

ಅಧ್ಯಕ್ಷರು : " ಖಂಡ 2 ರಿಂದ 6 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 6 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 7ಕ್ಕೆ ತಿದ್ದುಪಡಿ

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, "ಖಂಡ 7ರಲ್ಲಿ 1996ರ ಅಕ್ಟೋಬರ್ 24ನೇ ದಿನಾಂಕದಿಂದ ಎಂಬ ಪದಗಳು ಮತ್ತು ಅಂಕಿಗಳ ಬದಲಾಗಿ 1996ರ ಸೆಪ್ಟೆಂಬರ್ 23ನೇ ದಿನಾಂಕದಿಂದ ಎಂಬ ಅಂಕಿಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು"

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಖಂಡ 7ರಲ್ಲಿ 1996ರ ಅಕ್ಟೋಬರ್ 24ನೇ ದಿನಾಂಕದಿಂದ ಎಂಬ ಪದಗಳು ಮತ್ತು ಅಂಕಿಗಳ ಬದಲಾಗಿ 1996ರ ಸೆಪ್ಟೆಂಬರ್ 23ನೇ ದಿನಾಂಕದಿಂದ ಎಂಬ ಅಂಕಿಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 7 ಕ್ಕೆ ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಖಂಡ 7ಕ್ಕೆ ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ ".

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 7 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗ ಭಾಗವಾಗಿರುತ್ತದೆ ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, 1997ರ ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ)

ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಪೂತ್ತೂರು ಮತ್ತು ಸೂಳ್ಯಾ ಘಟನೆಗಳ ಬಗ್ಗೆ ಸರ್ಕಾರದಿಂದ ಹೇಳಿಕೆಯನ್ನು ಕೊಡಿಸುತ್ತೇನೆ ಎಂದು ಹೇಳಿದ್ದೀರಿ. ಯಾವಾಗ ಕೊಡಿಸುತ್ತೀರಿ?

ಅಧ್ಯಕ್ಷರು : ಪ್ರಶ್ನೋತ್ತರ ಅವಧಿ ಮುಗಿದ ಮೇಲೆ ಮಾಡಿಸುತ್ತೇನೆ. ಎಂ.ಪಿ. ಪ್ರಕಾಶ್‌ರವರೇ, ಪೂತ್ತೂರು ಮತ್ತು ಸೂಳ್ಯಾ ಘಟನೆಗಳ ಬಗ್ಗೆ ಸರ್ಕಾರದಿಂದ ಹೇಳಿಕೆ ಕೊಡಬೇಕಾಗಿದೆ. ಆದುದರಿಂದ ಗೃಹಮಂತ್ರಿಯಾದ ರೋಷನ್ ಬೇಗ್‌ರವರನ್ನು ಸದನಕ್ಕೆ ಕರೆಸಿ.

ಶ್ರೀ ಎಂ.ಪಿ. ಪ್ರಕಾಶ್ : ಆಗಬಹುದು.

ಶ್ರೀ ವಾಟಾಳ್ ನಾಗರಾಜ್ : ಅದೇ ರೀತಿ ವೀರಪ್ಪನ್ ಬಗ್ಗೆ ಕೂಡ ಹೇಳಿಕೆ ಕೊಡಿಸಬೇಕು.

ಅಧ್ಯಕ್ಷರು : ಪ್ರಶ್ನೋತ್ತರ ಮೊದಲು ಮುಗಿಯಲಿ.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು :

ತುಮಕೂರಿನಲ್ಲಿ ಖಾಸಗಿ ಪ್ರಾಥಮಿಕ ಶಾಲೆಗಳು

407 - ಶ್ರೀ ಬಿ.ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?